ಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 26 ಸಂಚಿಕೆ 21 ಮೇ 23, 2004 ಬೆಲೆ ರೂ. 3.00





ಎಡ ಪಕ್ಷಗಳ ಅಭೂತಪೂರ್ವ ಜಯಭೇರಿ





ಜಾತ್ಯತೀತ ಸರ್ಕಾರಕ್ಕಾಗಿ ಜನಾದೇಶ





ಕರ್ನಾಟಕದ ಚುನಾವಣೆಗಳಲ್ಲಿ ಜನತೆ ಕಲಿಸಿದ ಪಾಠಗಳು

ನೈಜ ಭಾರತ ಉದಯ

ವಿಯೆಟ್ನಾಂ : ವಿಮೋಚನಾ ಸಮಾರಾರಂಭದ ಸುವರ್ಣಮಹೋತ್ಸವ

ಕರ್ನಾಟಕದ ಚುನಾವಣೆಗಳು ಜನತೆ ಕಲಿಸಿದ ಪಾಠಗಳು

ಕರ್ನಾಟಕದಲ್ಲಿ ಎಸ್.ಎಂ.ಕೃಷ್ಣರವರ ನೇತೃತ್ವದ ಸರ್ಕಾರ ಮಣ್ಣುಮುಕ್ಕಿದೆ. ಹಾಗೆಯೇ ಕೃಷ್ಣರವರಿಗೆ 'ಮಾದರಿ'ಯಾಗಿದ್ದ ಆಂಧ್ರದ ಚಂದ್ರಬಾಬುನಾಯ್ಡು ಸಹ. ಈ ಫಲಿತಾಂಶಗಳು ಏನು ಹೇಳುತ್ತವೆ? ಜನತೆ ಕಲಿಸಿದ ಗಂಭೀರ ಪಾಠವೇನು ಎಂದು ವಿವರವಾಗಿ ವಿಶ್ಲೇಷಿಸಿದ್ದಾರೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಯವರು

ಆಂಧ್ರಪ್ರದೇಶದ ತೆಲುಗುದೇಶಂ ಜೊತೆಜೊತೆಗೆ ಕರ್ನಾಟದಲ್ಲಿ 4.5 ವರ್ಷಗಳ ಕಾಲ ಆಡಳಿತ ನಡೆಸಿದ ಕಾಂಗ್ರೆಸ್ ಸರ್ಕಾರವನ್ನು ರಾಜ್ಯದ ಜನತೆ ಮಣ್ಣುಮುಕ್ಕಿಸಿದ್ದಾರೆ.(ಬೆಂಗಳೂರು ನಗರದ ಜನತೆಯ ಹೊರತಾಗಿ) ಕೃಷ್ಣರವರ ಸರ್ಕಾರದ ಬಹುತೇಕ ಮಂತ್ರಿಗಳು ಕೂಡ ಮುಟ್ಟಿ ನೋಡಿಕೊಳ್ಳುವಂತೆ ಬಾರೇಟು ನೀಡಿದ್ದಾರೆ. ಇದನ್ನು ಕಾಂಗ್ರೆಸ್ ಪಕ್ಷ ಮಾತ್ರವಲ್ಲ ಎಲ್ಲ ಪಕ್ಷಗಳೂ ವಿಶ್ಲೇಷಿಸಿಕೊಳ್ಳಬೇಕಾಗಿದೆ ಮತ್ತು ಅದರಿಂದ ಪಾಠ ಕಲಿಯಬೇಕಾಗಿದೆ. ಏಕೆಂದರೆ ಮುಂದೆ ರಾಜ್ಯದಲ್ಲಿ ನಡೆಸುವ ಆಡಳಿತಕ್ಕೆ ಅದು ಮಾರ್ಗದರ್ಶಿಯಾಗಬೇಕು.

ಕೃಷ್ಣರವರ ತೊಳಲಾಟ

ಎಸ್.ಎಂ.ಕೃಷ್ಣರವರು ತಮ್ಮ ಸರ್ಕಾರದ ಸೋಲಿನ ಬಗ್ಗೆ ಪತ್ರಿಕಾ ಸಂದರ್ಶನವೊಂದರಲ್ಲಿ ಹೀಗೆ ಹೇಳಿದ್ದಾರೆ. ಜನತೆ ಸರ್ಕಾರದೊಂದಿಗೆ ಏನನ್ನು ನಿರೀಕ್ಷಿಸುತ್ತಿದಾರೆಂಬುದೇ ನನಗೆ ಗೊತ್ತಾಗುತ್ತಿಲ್ಲ. ಅವರಿಗೆ(ಜನತೆಗೆ) ಅದರಲ್ಲಿಯೂ ಗ್ರಾಮೀಣ ಪ್ರದೇಶಗಳಲ್ಲಿ ಅಭಿವೃದ್ಧಿ ಅಥವಾ ಜೀವನದ ಗುಣಮಟ್ಟ ಉತ್ತಮಗೊಳ್ಳುವುದರ ಬಗ್ಗೆ ಚಿಂತೆಯೇ ಇಲ್ಲವೇನೋ? ನಾವು 11 ಲಕ್ಷ ಮನೆಗಳನ್ನು ಕಟ್ಟಿಸಿದೆವು. ಬಿಸಿಯೂಟದ ಕಾರ್ಯಕ್ರಮ ಜಾರಿಗೆ ತಂದೆವು. ಮಹಿಳೆಯರಿಗೆ ಸಣ್ಣ ಸಾಲದ (ಸ್ತ್ರೀಶಕ್ತಿ ಗುಂಪುಗಳ ಮೂಲಕ) ಯೋಜನೆ ತಂದೆವು. ಹೀಗೆ ಏನೇನೋ ಮಾಡಿದೆವು. ಆದರೆ ಇವು ಯಾವುವೂ ಪ್ರಯೋಜನವಾಗಲಿಲ್ಲ ಎಂದು ಹೇಳಿದ್ದಾರೆ.

ಮತ್ತೆ ಮುಂದುವರೆದು "ಕೆಲಸ ಮಾಡುವ ಸರ್ಕಾರಕ್ಕೆ ಪ್ರತಿಫಲ ಸಿಕ್ಕೇ ಸಿಗುತ್ತದೆ ಎಂಬುದನ್ನು ಸಾಧಿಸಿ ತೋರಿಸಬೇಕೆಂದಿದ್ದೆ ಆದರೆ ನನಗೆ ನಿರಾಶೆಯಾಗಿದೆ" ಎಂದು ಅವರು ಹೇಳಿದ್ದಾರೆ.

ಕರ್ನಾಟಕ ಮತದಾರರು ನೀಡಿದ ತೀರ್ಪನ್ನು ಅರ್ಥ ಮಾಡಿಕೊಳ್ಳಲಾಗದ ಎಸ್‌ಎಂಕೃಷ್ಣರ ತೊಳಲಾಟವನ್ನು ನೋಡಿದರೆ ಅಯ್ಯೋ ಪಾಪ ಎನಿಸುತ್ತದೆ. ಅವರ ಪಕ್ಷ ಸೋತಿದ್ದಕ್ಕಲ್ಲ ಈ ಅಯ್ಯೋ ಪಾಪ ಎಂಬ ಸಂತಾಪ ಎಂಬುದನ್ನು ಗಮನಿಸಬೇಕು.

ಬರಗಾಲ ಕಾರಣವೆ?

ಮತ್ತೊಂದು ಅಭಿಪ್ರಾಯವನ್ನು ಎಸ್‌ಎಂಕೃಷ್ಣರವರೂ ಸೇರಿದಂತೆ ಅನೇಕ ರಾಜ್ಯ ಹಾಗೂ ರಾಷ್ಟ್ರಮಟ್ಟದ ಕಾಂಗ್ರೆಸ್ ನಾಯಕರು ಜನರ ಮನಸ್ಸಿನಲ್ಲಿ ಬಿತ್ತಲು ಪ್ರಯತ್ನಿಸುತ್ತಿದ್ದಾರೆ. ಕಾಂಗ್ರೆಸ್ ಸೋಲಿಗೆ ಮೂರು ವರ್ಷ ಕಾಡಿದ ಬರಗಾಲವೇ ಕಾರಣ ಎಂದು. ಕೈಗೆ ಸಿಗದ ಪ್ರಾಕೃತಿಕ ಕ್ರಿಯೆಗಳ ಮೇಲೆ ತಮ್ಮ ಸೋಲಿನ ಹೊರೆಯನ್ನು ಹೊರಿಸಲು, ಆ ಮೂಲಕ ಜನರನ್ನು ತಪ್ಪು ದಾರಿಗೆಳೆಯಲು ಮತದಾರರ ಅನುತಾಪವನ್ನು ಪಡೆಯಲು ಪ್ರಯತ್ನಿಸುತ್ತಿದ್ದಾರೆ.

ತಾವು ಆಳುತ್ತಿರುವಾಗ ಕರ್ನಾಟಕದ ಜನತೆಯ ಅಭಿಮತವನ್ನು ತಿಳಿಯಲು ಅದಕ್ಕೆ ಸ್ಪಂದಿಸಿ ತಮ್ಮ ನೀತಿಗಳನ್ನು ಪ್ರಮಾಣಿಸಿಕೊಳ್ಳಲು ವಿಫಲವಾದ ಸರ್ಕಾರ ಕರ್ನಾಟಕದ ಮತದಾರರು ತಮಗೆ ಅವಕಾಶ ಸಿಕ್ಕಿದಾಗ ಮತದಾನದ ಮೂಲಕ ಅಭಿಮತ ವ್ಯಕ್ತಪಡಿಸಿದಾಗ ಅದನ್ನು ಅರ್ಥ ಮಾಡಿಕೊಳ್ಳಲು ಸೋತಿರುವುದರಲ್ಲಿ ಯಾವುದೇ ಆಶ್ಚರ್ಯವಿಲ್ಲ.

ಹಮ್ಮು ಮತ್ತು ಕುತಂತ್ರವೇ ಆಸ್ತಿ

ಕಾಂಗ್ರೆಸ್ ಪಕ್ಷವೇ ಮತ್ತೆ ಅಧಿಕಾರಕ್ಕೆ ಬರುತ್ತದೆಂಬ ಬಗ್ಗೆ ಎಸ್.ಎಂ.ಕೃಷ್ಣರಿಗೆ ಅವರ ಪಕ್ಷಕ್ಕೆ ಎಳ್ಳಷ್ಟು ಸಂಶಯವೇ ಇರಲಿಲ್ಲ. ವಿಶ್ವಬ್ಯಾಂಕ್‌ನಿಂದ 26 ಸಾವಿರ ಕೋಟಿ ರೂ.ಗಿಂತ ಹೆಚ್ಚು ಸಾಲ ಪಡೆದು ರಸ್ತೆ, ಸೇತುವೆಗಳನ್ನು ಮಾಡಿಸಿದ್ದೇವೆ. ಮೇಲೆ ಕೃಷ್ಣರವರೇ ಹೇಳಿದ ಮನೆ ಇತ್ಯಾದಿಗಳನ್ನು ಮಾಡಿದ್ದೇವೆ ಎನ್ನುವುದು ಮಾತ್ರ ಈ ಭಾವನೆಗೆ ಕಾರಣವಲ್ಲ. ಅದಕ್ಕಿಂತ ಮುಖ್ಯವಾಗಿ ಅವರ ಹಮ್ಮಿಗೆ ಕಾರಣವಾಗಿದ್ದು ನಮಗೆ ಎದುರಾಳಿಯಾಗಿ ನಮ್ಮ ವಿರುದ್ಧದ ಅತೃಪ್ತಿಯ ಮೇಲೆ ಆರಿಸಿ ಬರಬಹುದಾಗಿದ್ದ ಜನತಾ ಜನತಾದಳ ಬಣಗಳು ಒಂದುಗೂಡದಂತೆ

ಜಿ.ಎನ್.ನಾಗರಾಜ್

ಮಾಡಲು ಬಿಜೆಪಿ, ಎನ್‌ಡಿಎ ಜೊತೆಗೂಡಿ ಯಶಸ್ವಿಯಾಗಿದ್ದೇವೆ. ನಮ್ಮ ವಿರುದ್ಧದ ಅತೃಪ್ತಿಯ ಮತಗಳನ್ನು ಒಡೆಯಲು ಜನತಾಪಕ್ಷ ಹಾಗೂ ಕನ್ನಡನಾಡು ಪಕ್ಷಗಳನ್ನು ಪ್ರೋತ್ಸಾಹಿಸಿದ್ದೇವೆ. ಒಂದಷ್ಟು ಮತಗಳನ್ನು ಸೀಟುಗಳನ್ನು ಬಿಜೆಪಿ ಪಡೆದರೆ ಅದೂ ಒಳ್ಳೆಯದೇ ಏಕೈಕವಾಗಿ ಒಂದು ಶಕ್ತಿ ತಮ್ಮ ವಿರುದ್ಧ ಹೆಚ್ಚು ಸ್ಥಾನಗಳನ್ನು ಗೆಲ್ಲದೆ ಮತ್ತೆ ತಾವೇ ಅಧಿಕಾರಕ್ಕೆ ಬರುತ್ತೇವೆ ಎಂದು ತಮ್ಮ ಚಾಣಾಕ್ಯತಂತ್ರದ ಬಗ್ಗೆ ತಾವೇ ಹೆಮ್ಮೆ ಪಡುತ್ತಾ ಬೆಳೆಸಿಕೊಂಡ ಹಮ್ಮು ಅದು.

ಜೊತೆಯಲ್ಲಿ 1999ರಿಂದ 2003 ರವರೆಗೂ ನಡೆದ ವಿವಿಧ ಚುನಾವಣೆಗಳಲ್ಲಿ ಪಂಚಾಯತ್ ಸಂಸ್ಥೆ, ಪುರಸಭೆ ಕಾರ್ಪೊರೇಷನ್‌ಗಳ ಹಾಗೂ ವಿಧಾನಸಭಾ ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಹೆಚ್ಚು ಸ್ಥಾನಗಳನ್ನು ಪಡೆದದ್ದು ಈ ಹಮ್ಮಿಗೆ ಕಾರಣವಾಗಿತ್ತು.


ಆ ಹಮ್ಮಿನಲ್ಲಿ ವಿಶ್ವಬ್ಯಾಂಕ್ ಹರಿಸಿದ ಸಾಲದ ಹಣದ ಮದದಲ್ಲಿ, ಭಾರತದ ಬಂಡವಾಳಿಗರು ಕರ್ನಾಟಕ ಬಂಡವಾಳಿಗರ

> **ಹೊಟ್ಟೆಗೆ ಊಟ ಹಾಕದಿದ್ದರೂ ಮೇಲ್ಸೇತುವೆ, ವಿಮಾನನಿಲ್ದಾಣ, ಹೈವೇಗಳ ಮಲ್ಲಿಗೆ ಹೂವನ್ನು ನಿರಾಕರಿಸಿದ್ದಾನೆ. ಈ ಎಲ್ಲ ರಾಜ್ಯಗಳಲ್ಲಿ ಈ ಎಲ್ಲ ಪಕ್ಷಗಳು ಮುಖ್ಯಮಂತ್ರಿಗಳು ಅನುಸರಿಸಿದ ನೀತಿ ಅದು ಈ ಭಿಕ್ಷೆ ಹಾಕುವ ನೀತಿಯನ್ನು ಭಾರತದ ಮತದಾರ ನಿರಾಕರಿಸಿದ್ದಾನೆ.**

ಹಾಗೂ ಅವರ ಪತ್ರಿಕೆಗಳ ಪ್ರಶಂಸೆಯ ಪ್ರಶಸ್ತಿಗಳ ಮಹಾಪೂರದಲ್ಲಿ ಜನರು ಸೂಕ್ಷ್ಮವಾಗಿ, ಅಪ್ರತ್ಯಕ್ಷವಾಗಿ ಹಲವೊಮ್ಮೆ ನೇರವಾಗಿ ವ್ಯಕ್ತಪಡಿಸುತ್ತಿದ್ದ ಅಭಿಪ್ರಾಯಗಳು ಕೃಷ್ಣರ, ಅವರ ಪಕ್ಷದ ಗಮನಕ್ಕೆ ಬರಲೇ ಇಲ್ಲ.

ಬಿಜೆಪಿ ಮೇಲಿನ ಸಿಟ್ಟು V/s ಕಾಂಗ್ರೆಸ್ ವಿರುದ್ಧದ ಸಿಟ್ಟು

ಜನತೆ 1999 ರ ಚುನಾವಣೆಗಳ ನಂತರದ ಎಲ್ಲಾ ಚುನಾವಣೆಗಳಲ್ಲಿ ಕರ್ನಾಟಕದ ಮತದಾರ ಕೇಂದ್ರದಲ್ಲಿ ಅಧಿಕಾರ ನಡೆಸುತ್ತಾ ತಮ್ಮ ದುಸ್ಥಿತಿಗೆ ಕಾರಣವಾಗಿದ್ದ ಬಿಜೆಪಿ ಕೂಟ ಸರ್ಕಾರದ ಮೇಲೆ ತಮ್ಮ ಸಿಟ್ಟನ್ನು ತೀರಿಸಿಕೊಳ್ಳುತ್ತಿದ್ದು ಅನೇಕ ಜಿಲ್ಲಾ ತಾಲ್ಲೂಕು ಪಂಚಾಯತ್‌ಗಳಲ್ಲಿ ಪುರಸಭೆ



ಕಾರ್ಪೊರೇಷನ್‌ಗಳಲ್ಲಿ ಬಿಜೆಪಿಗಿದ್ದ ಸ್ಥಾನಗಳು ಕುಸಿದವು. 1999 ಚುನಾವಣೆಗಳಲ್ಲಿ ಬಿಜೆಪಿಯ ಲೋಕಸಭಾ ಸ್ಥಾನಗಳನ್ನು 1998 ರ ಚುನಾವಣೆಗೆ ಹೋಲಿಸಿದರೆ ಅರ್ಧಕ್ಕಿಳಿಸಿದಾಗಲೇ ಆರಂಭವಾದ ಪ್ರಕ್ರಿಯೆ ಅದು. ಇದರ ಫಲವಾಗಿ ಕಾಂಗ್ರೆಸ್ ರಾಜ್ಯ ಸರ್ಕಾರವನ್ನು ನಡೆಸುತ್ತಿದ್ದ ಕಾರಣವಾಗಿ ಪುರಸಭೆ ಹಾಗೂ ಪಂಚಾಯತ್ ಮೊದಲಾದ ಚುನಾವಣೆಗಳಲ್ಲಿ ಕಾಂಗ್ರೆಸ್ ವಿಜಯವನ್ನು ತನ್ನ ಬಲದ ಕಾರಣ, ತನ್ನ ಸರ್ಕಾರದ ನೀತಿಗಳ ಸಮರ್ಥನೆಯೆಂಬ ತಪ್ಪು ಭ್ರಮೆಗೊಳಗಾಯಿತು.

ಒಂದು ಕಡೆ ಜನರು ಬಿಜೆಪಿಯ ವಿರುದ್ಧ ತಮ್ಮ ಸಿಟ್ಟನ್ನು ಚುನಾವಣೆಗಳ ಮೂಲಕ ತೋರಿಸುತ್ತಿದ್ದಾಗಲೇ ಕಾಂಗ್ರೆಸ್ ಸರ್ಕಾರದ ವಿರುದ್ಧದ ಅತೃಪ್ತಿಯನ್ನು ಚಳುವಳಿಗಳ ಮೂಲಕ ತೋರಿಸುತ್ತಿದ್ದರು. ಮುಖ್ಯವಾಗಿ ರೈತರು ಅನೇಕ ಸ್ವಯಂ ಪ್ರೇರಿತ ಚಳುವಳಿಗಳ ಮೂಲಕ ಸಂಘಟಿತವಾಗಿ ಪ್ರಾಂತ ರೈತಸಂಘ, ರಾಜ್ಯ ರೈತಸಂಘಗಳ ನೇತೃತ್ವದಲ್ಲಿ ನಡೆದ ಚಳುವಳಿಗಳ ಮೂಲಕ ತನ್ನ ಅತೃಪ್ತಿಯನ್ನು ವ್ಯಕ್ತಪಡಿಸಿದ್ದರು. ನಿರುದ್ಯೋಗಿ ಕಾರ್ಮಿಕರು ವಿದ್ಯಾರ್ಥಿಗಳು, ಯುವಕರು ಇತರ ಅನೇಕ ಜನವಿಭಾಗಗಳೂ ಕೂಡ ಈ ಅತೃಪ್ತಿಯನ್ನು ಹೋರಾಟಗಳ ಮೂಲಕ ವ್ಯಕ್ತಪಡಿಸಿದ್ದವು. ಎಲ್ಲಕ್ಕಿಂತ ಮಿಗಿಲಾಗಿ ಆತ್ಮಹತ್ಯೆಗಳ ಸರಣಿಯ ಮೂಲಕ ಹಸಿವಿನ ಸಾವುಗಳ ಮೂಲಕ ತನ್ನ ಅತ್ಯಂತ ತೀವ್ರ ಅತೃಪ್ತಿ ವ್ಯಕ್ತವಾಗಿತ್ತು.

ಪ್ರಶಂಸೆಗಳ ಮತ್ತಿನಲ್ಲಿ, ತಮ್ಮ ಚಾಣಕ್ಯ ತಂತ್ರಗಳ ಕರಾಮತ್ತಿನ ಮೇಲಿನ ನೆಚ್ಚಿಗೆಯಲ್ಲಿ ಕರ್ನಾಟಕದ ಜನತೆಯ ಈ ಧ್ವನಿ ಧ್ವನಿಯಿಲ್ಲದವರ ಧ್ವನಿ. ಕೃಷ್ಣರು ಅವರ ಮಂತ್ರಿಮಂಡಲದವರು ಕುರುಡಾಗಿದ್ದರು, ಕಿವುಡಾಗಿದ್ದರು. ಮಾನವೀಯತೆಯ ಸೆಲೆಯು ಬತ್ತಿಹೋದಂತಿತ್ತು.

ಸಿಇಓ (ಮುಖ್ಯಾಧಿಕಾರಿ) ಮಾದರಿ

ಜನಾಭಿಪ್ರಾಯಕ್ಕೆ ಈ ಕುರುಡು, ಕಿವುಡುತನವೇ ಹೃದಯಹೀನತೆಯೇ ಇಂದು ಒಂದು ಆಡಳಿತದ ಮಾದರಿಯಾಗಿದೆ. ಅದಕ್ಕೆ ಸಿಇಓ (ಕಂಪನಿಗಳ ಮುಖ್ಯಸ್ಥ) ಮಾದರಿಯೆಂದು ಬಂಡವಾಳಿಗರು ಒಂದು ಸೂಕ್ತ ತಮಗೆ ಮೆಚ್ಚಿಗೆಯಾದ ಹೆಸರನ್ನಿಟ್ಟಿದ್ದಾರೆ. ಚಂದ್ರಬಾಬು ನಾಯ್ಡುರವರಿಂದ ಆರಂಭವಾದ ಮಾದರಿಯಿದು. ವಿಶ್ವಬ್ಯಾಂಕ್‌ನಿಂದ ಪ್ರೇರಿತವಾದ ಮಾದರಿಯಿದು. ಅದನ್ನು ಜನರು ಹೈಟೆಕ್ ಮಾದರಿ ಎಂದು ಕರೆದಿದ್ದಾರೆ.

ಪ್ರಜಾಪ್ರಭುತ್ವದ ಎಲ್ಲಾ ಮೂಲತತ್ವಗಳಿಗೆ ವ್ಯತಿರಿಕ್ತವಾದ ಮಾದರಿಯಿದು. ತಮ್ಮ ಪಕ್ಷದ ನಾಯಕರ, ಕಾರ್ಯಕರ್ತರ ಅವರ ಮೂಲಕ ಜನಾಭಿಪ್ರಾಯಕ್ಕೆ ಸ್ಪಂದಿಸುವ ಪ್ರಜಾಪ್ರಭುತ್ವ ಮಾದರಿಗೆ ವಿರುದ್ಧವಾದ ಅಧಿಕಾರಶಾಹಿ ಬಂಡವಾಳಶಾಹಿ ಮಾದರಿ ಅದು.

ಈ ಮಾದರಿಗೆ ಅನುಗುಣವಾಗಿ ಜನರಿಂದ ಮತ ಪಡೆದು ಮುಖ್ಯಮಂತ್ರಿಯಾದ ದಿನವೇ ಬಡವರ ಬಂಧು ಕಾಂಗ್ರೆಸ್ಸಿನ ಈ ಮುಖ್ಯಮಂತ್ರಿ ನಾನು ಇನ್‌ಫೋಸಿಸ್‌ನ ಒಡೆಯ ನಾರಾಯಣ ಮೂರ್ತಿಗಳ, ವಿಪ್ರೋನ ಪ್ರೇಮ್‌ಜಿಯ ಮನೆಯ ಬಾಗಿಲಿಗೆ ಹೋಗಲು ತಯಾರು ಎಂದು ಘೋಷಿಸಿದರು ಮತ್ತು ಹೋದರು. ಅಷ್ಟು ಸಾಲದೆಂಬಂತೆ ಮತ್ತಷ್ಟು ಅವರನ್ನು ಹತ್ತಿರಕ್ಕೆ ಎಳೆದುಕೊಂಡರು. ಅವರಿಗೆ ರತ್ನಗಂಬಳಿ ಹಾಸಿ ಅವರನ್ನು ಆಡಳಿತದ ಅನಧಿಕೃತ ಮುಖ್ಯಸ್ಥರನ್ನಾಗಿಸಿದರು. ಅದಕ್ಕಾಗಿ ಕಾರ್ಯಪಡೆಗಳನ್ನು ರಚಿಸಿದರು. ಈ ಕೈಗಾರಿಕಾ ಮಾಲೀಕರಿಗಾಗಿ ಕೃಷ್ಣರ ಕಛೇರಿಯ, ಮನೆಯ, ಮನದ ಬಾಗಿಲು ಎಂದೂ ತೆರೆದಿರುತ್ತಿತ್ತು. ಆದರೆ ಜನರ ಪ್ರತಿನಿಧಿಗಳ, ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು, ನಿಯೋಗಗಳಿಗೆ, ಕಾರ್ಮಿಕರ, ರೈತರ ಚಳುವಳಿಯ ವಿವಿಧ ಪ್ರತಿನಿಧಿಗಳಿಗೆ ಅವರ ಕಛೇರಿಯ ಬಾಗಿಲು ಮುಚ್ಚಿರುತ್ತಿತ್ತು.

ಮುಖ್ಯಾಧಿಕಾರಿ ಮಾದರಿಯ ಪತನ ಭಿಕ್ಷೆಯ ನಿರಾಕರಣೆ

ಕರ್ನಾಟಕದ ಮತದಾರರು ಈ ವಿಶ್ವಬ್ಯಾಂಕ್ ನಿರ್ದೇಶಿತ ನೀತಿಗಳಿಗೆ, ಅವರಿಂದ ನೇಮಿತವಾದ ಮುಖ್ಯಾಧಿಕಾರಿ ಎಂದು ವರ್ತಿಸುವ ಆಡಳಿತ ಮಾದರಿಯನ್ನು ಉರುಳಿಸಿದ್ದಾರೆ. ಆಂಧ್ರಪ್ರದೇಶದಲ್ಲಿ ಮಾತ್ರವೇ ಅಲ್ಲದೆ ತಮಿಳುನಾಡಿನ ಜಯಲಲಿತಾರವರ ಅಣ್ಣಾಡಿಎಂಕೆ, ಕೇರಳದ ಆಂಟೋನಿ ನೇತೃತ್ವದ ಯುಡಿಎಫ್‌ಗೆ ಪಂಜಾಬ್, ಮಹಾರಾಷ್ಟ್ರಗಳ ಕಾಂಗ್ರೆಸ್ ಸರ್ಕಾರಗಳ ಮೂತಿಗೆ ಇಕ್ಕಿದ್ದಾರೆ.

ಈ ಸರ್ಕಾರಗಳು ತಮ್ಮ ವರ್ಷದ ಊಟವನ್ನು ಕಿತ್ತುಕೊಂಡು ಉಪವಾಸಕ್ಕೆ ದೂಡಿ ಜನವರಿಯಲ್ಲಿ 5 ದಿನ, ಫೆಬ್ರುವರಿಯಲ್ಲಿ ದಿನ, ಡಿಸೆಂಬರ್‌ನಲ್ಲಿ 10 ದಿನ ಊಟ ಹಾಕಿದ್ದೇವೆ ಎಂದು ಅಂಕಿಅಂಶಗಳ ಕಂತೆಯನ್ನೇ ಬಿಚ್ಚಿಡುವ, ಹೊಟ್ಟೆಗೆ ಊಟ ಹಾಕದಿದ್ದರೂ ಮೇಲ್ಸೇತುವೆ, ವಿಮಾನನಿಲ್ದಾಣ, ಹೈವೇಗಳ ಮಲ್ಲಿಗೆ ಹೂವನ್ನು ನಿರಾಕರಿಸಿದ್ದಾನೆ. ಈ ಎಲ್ಲ ರಾಜ್ಯಗಳಲ್ಲಿ ಈ ಎಲ್ಲ ಪಕ್ಷಗಳು

ಪುಟ 11 ಕ್ಕೆ

ಕರ್ನಾಟಕದ ಜನಾದೇಶ

ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವನ್ನು ಜನತೆ ಅಧಿಕಾರದಿಂದ ಹೊರದಬ್ಬಿದೆ. ಆದರೆ ಅದೇ ವೇಳೆಯಲ್ಲಿ ಅಧಿಕಾರ ಹಿಡಿದೇ ಬಿಡುತ್ತೇವೆಂದು, ಕರ್ನಾಟಕವನ್ನು ಗುಜರಾತ್ ಮಾಡುವುದಾಗಿ ಹೂಂಕರಿಸುತ್ತಿದ್ದ ಕೋಮುವಾದಿ ಬಿಜೆಪಿಗೆ ಅಧಿಕಾರ ನಿರಾಕರಿಸಿದ್ದಾರೆ. ಜಾತ್ಯತೀತ ಜನತಾದಳಕ್ಕೆ ಮುನ್ನಡೆ ಲಭಿಸಿದೆ. ಯಾರೊಬ್ಬರೂ ತನ್ನದೇ ಬಲದಲ್ಲಿ ಸರ್ಕಾರ ರಚಿಸಲು ಸಾಧ್ಯವಾಗದಂತಹ ಈ ಫಲಿತಾಂಶದಿಂದ ಹೊರಬಂದ ಜನತೆಯ ಸಂದೇಶವೇನು? ಒಂದು ವಿಶ್ಲೇಷಣೆ.

ಎಸ್.ವೈ.ಗುರುಶಾಂತ್

ರ್ನಾಟಕದಲ್ಲಿ ನೂತನ ಸರ್ಕಾರ ರಚಿಸುವ ತ್ತು ತೀವ್ರಗೊಂಡಿದೆ. ಕಳೆದ ವಿಧಾನಸಭೆಯಲ್ಲಿ ಶಾಸಕರನ್ನು ಹೊಂದಿದ್ದ ಕಾಂಗ್ರೆಸ್ ಪಕ್ಷಕ್ಕೀಗ ಕೊಟ್ಟಿದ್ದು 65 ಸ್ಥಾನಗಳು ಮಾತ್ರ. ಜಾತ್ಯಾತೀತ ತಾದಳ 58 ಸ್ಥಾನಗಳಾದರೆ, ಬಿಜೆಪಿ 79, ಯು 5 ಗಳಿಸಿದೆ. ಇದನ್ನು ಅನುಸರಿಸಿ ಖ್ಯಮಂತ್ರಿ .ಕೃಷ್ಣ ರಾಜೀನಾಮೆ ಕೊಟ್ಟಾಗಿದೆ. ವುದೇ ಪಕ್ಷಕ್ಕೆ ತನ್ನ ಸ್ವಂತ ಶಾಸಕರ ಬಲದ ೀಲೆ ಸರ್ಕಾರ ರಚಿಸುವಷ್ಟು ಸರಳ ಮತವನ್ನು ಜನತೆ ನೀಡಿಲ್ಲ.

ರಾಜ್ಯದಲ್ಲಿ ಕಾಂಗ್ರೆಸ್ ಸ್ಥಾನಗಳು ಕುಸಿದು ೀತು ಹೋಗಿದೆ. ಕೋಮುವಾದಿ ಬಿಜೆಪಿ ವನ್ನು ಅಧಿಕಾರಕ್ಕೇರದಂತೆ ಜನತೆ ತಡೆದಿದ್ದಾರೆ. ತಹ ಅವಕಾಶವನ್ನು ಸ್ಪಷ್ಟವಾಗಿ ನಿರಾಕರಿಸಿದ್ದಾರೆ. ಅಂಶಗಳನ್ನು ಗಮನಿಸಿದರೆ ಕರ್ನಾಟಕದ ತೆಯ ತೀರ್ಪು ಒಂದು ಜಾತ್ಯಾತೀತ ಸರ್ಕಾರ ನೆಯತಲ್ಲವೇ ಎಂಬುದು ಸ್ಪಷ್ಟವಾಗುತ್ತದೆ. ಇದೇ ಾದೇಶ.

ಪಿ ಕೇಳಿಕೆ ಅರ್ಥಹೀನ

ಕಾಂಗ್ರೆಸ್ ಮತ್ತು ಜಾತ್ಯಾತೀತ ಜನತಾದಳ ಗಳ ನಡುವೆ ಕೆಲವು ಭಿನ್ನಾಭಿಪ್ರಾಯಗಳು ೀನಿದ್ದರೂ ಕರ್ನಾಟಕದಲ್ಲಿ 'ಸೆಕ್ಯುಲರ್ ಸರ್ಕಾರ' ಸುವ ಬಗ್ಗೆ ಸ್ಪಷ್ಟ ನಿಲುವು ತಾಳುವುದು ಅತ್ಯಗತ್ಯ. ತಹ ಅಭಿಪ್ರಾಯಕ್ಕೂ ಈ ಎರಡು ಪಕ್ಷಗಳು ದಿವೆ. ಹೀಗಿರುವಾಗ ತಮಗಾಗಿ ಇತರರಿಗಿಂತ ಕ್ಚಿನ ಸ್ಥಾನ ಸಿಕ್ಕಿದೆ, ತಮಗೆ ಸರ್ಕಾರ ರಚಿಸಲು ಕಾಶ ನೀಡಬೇಕು ಎಂದು ಬಿಜೆಪಿ ಕೇಳುವುದು ರ್ಥಹೀನ.

ಇಂತಹ ಪರಿಸ್ಥಿತಿಯಲ್ಲಿ ಕೋಮುವಾದಿಗಳನ್ನು ರವಿಟ್ಟು ಸರ್ಕಾರ ರಚಿಸುವ ದಿಶೆಯಲ್ಲಿ ಗೆಸ್ ಮತ್ತು ಜನತಾದಳ(ಎಸ್) ಪಕ್ಷಗಳು ಕ್ಚಿನ ಪ್ರಯತ್ನ, ಮುತುವರ್ಜಿ ವಹಿಸಲೇಬೇಕಿದೆ. ಲಿಗೆ ಧಾವಿಸಿರುವ ಎರಡು ಪಕ್ಷಗಳ ನಾಯಕರು ದು ಇತ್ಯರ್ಥಕ್ಕೆ ಆದಷ್ಟು ಬೇಗ ಬರಬಹುದು. ಪಾರ್ಲಿಮೆಂಟ್‌ಗೆ ನಡೆದ ಚುನಾವಣೆಯ ಲಿತಾಂಶಗಳು ಭಿನ್ನವಾಗಿವೆ. 7 ಸ್ಥಾನಗಳನ್ನು ಂದಿದ್ದ ಬಿಜೆಪಿಗೆ 18 ಸ್ಥಾನಗಳು ದೊರೆತಿವೆ. ಂಗ್ರೆಸ್ 8, ಜನತಾದಳ(ಎಸ್) 2 ಸ್ಥಾನ ಡೆದಿದೆ. ದೇಶದಲ್ಲೇ ಬಿಜೆಪಿ ನೇತೃತ್ವದ ತ್ರಿಕೂಟ ಧೂಳಿಪಟವಾಗಿರುವಾಗಲೇ ಇಲ್ಲಿನ ಫಲಿತಾಂಶವು ಒಂದು ಆತಂಕಕಾರಿ ಪರಿಣಾಮ ಸ್ಟಿಸಿದೆ.

ಂಗ್ರೆಸ್ ಸೋಲಿಗೆ ಕಾರಣವೇನು?


ವಿಧಾನಸಭೆಗಾಗಲಿ, ಲೋಕಸಭೆಗಾಗಲಿ ನಗಳಿಗಾಗಲಿ ಕಾಂಗ್ರೆಸ್ ಪಕ್ಷವು ಇಂತಹ ೀಲು ಅನುಭವಿಸಲು ಕಾರಣವೇನು? ಬಿಜೆಪಿ ಟದ ಸ್ಥಾನಗಳ ಹೆಚ್ಚಳಕ್ಕೆ ಸಹಾಯಕವಾದ ಶಗಳೇನು ಎಂಬ ಬಗ್ಗೆ ಆಳವಾದ ವಿಶ್ಲೇಷಣೆ ಗತ್ಯವಿದೆ. ಸದ್ಯ ಪ್ರಾಥಮಿಕ ಅವಲೋಕ

ವಿಧಾನಸಭೆಯಲ್ಲಿ ಕರ್ನಾಟಕದಲ್ಲಿ ವಿವಿಧ ಪಕ್ಷಗಳ ಬಲಾಬಲ


	2004	1999
ಕಾಂಗ್ರೆಸ್	65	132
ಜೆಡಿ(ಎಸ್)	58	9
ಆರ್‌ಪಿಐ	01	-
ಸಿಪಿಐ(ಎಂ)	01	-
ಬಿಜೆಪಿ	79	44
ಜೆ.ಡಿ(ಯು)	05	19
[illegible] ಪಕ್ಷ	01	-
ಕನ್ನಡನಾಡು ಪಕ್ಷ	01	-
[illegible]	-	01
ಪಕ್ಷೇತರ	13	19
	224	224

ಮಾಡುವುದಾದರೆ ಖಾಸಗೀಕರಣ - ಜಾಗತೀಕರಣ - ಉದಾರೀಕರಣದ ಆರ್ಥಿಕ ನೀತಿಗಳ ಜಾರಿಯನ್ನು ರಾಜ್ಯದ ಜನತೆ ಸ್ಪಷ್ಟವಾಗಿ ತಿರಸ್ಕರಿಸಿದ್ದಾರೆ.

1999 ರಲ್ಲಿ ಜೆ.ಹೆಚ್.ಪಟೇಲರವರ ನೇತೃತ್ವದ



ಜನತಾದಳ ಸರ್ಕಾರವನ್ನು ಜನತೆ ಅಧಿಕಾರದಿಂದ ಕೆಳಗಿಳಿಸಿದರು. ಉದಾರೀಕರಣದ ಆರ್ಥಿಕ ನೀತಿಗಳು, ರೈತರ ಕಾರ್ಮಿಕ ವರ್ಗದ ವಿರೋಧಿ ಕ್ರಮಗಳು ದಲಿತರು, ದುರ್ಬಲರು, ರೈತರ ಮೇಲೆ ದಬ್ಬಾಳಿಕೆ ಅಧಿಕಾರಶಾಹಿತನದ ದರ್ಪದಿಂದ ಜನತೆಯಿಂದ ದೂರವಾಗಿತ್ತು. ಅಲ್ಲದೇ ಆಂತರಿಕ ಒಳಜಗಳ ಒಡಕು ಸಂಭವಿಸಿತು. ಪಟೇಲರ ನೇತೃತ್ವದ ಸಂಯುಕ್ತ ಜನತಾದಳ ಕೋಮುವಾದಿ ಬಿಜೆಪಿ ಯೊಂದಿಗೆ ಚುನಾವಣಾ ಮೈತ್ರಿ ಮಾಡಿಕೊಂಡು ಸಂದರ್ಭಸಾಧಕ ರಾಜಕಾರಣ ಅನುಸರಿಸಿದರು. ಹೀಗಾಗಿ ಜನತೆ ತೀವ್ರವಾದ ಸೋಲನ್ನು ನೀಡಿದರಲ್ಲದೇ ರಾಜ್ಯದ ಅಧಿಕಾರವನ್ನು ಕೋಮುವಾದಿ ಗಳ ಕೈಗೆ ಒಪ್ಪಿಸದೇ ಅದನ್ನು ತಿರಸ್ಕರಿಸಿ, ಪರ್ಯಾಯವಾಗಿ ಕಾಂಗ್ರೆಸ್‌ಗೆ ಬೆಂಬಲಿಸಿದರು.



ಇದು ವಿಶ್ವಬ್ಯಾಂಕ್- CEO ಮಾದರಿ ಕುಸಿತ

ಅಧಿಕಾರಕ್ಕೆ ಬಂದ ಕೃಷ್ಣರ ಸರ್ಕಾರ ಜನದೇಶದಂತೆ ನಡೆಯಲಿಲ್ಲ. ದೇಶದ ಇತರೆ ರಾಜ್ಯಗಳ ಅನುಭವದಿಂದ ಪಾಠ ಕಲಿಯಲಿಲ್ಲ. ಕಳೆದ ನಾಲ್ಕುವರೆ ವರ್ಷಗಳಲ್ಲಿ ವಿಶ್ವಬ್ಯಾಂಕ್ ಹಾಗೂ ವಿದೇಶಿ ಹಣಕಾಸು ಸಂಸ್ಥೆಗಳ ನಿರ್ದೇಶಿತ ನೀತಿಗಳನ್ನು ಮನಸೋ ಇಚ್ಛೆ ಅನುಸರಿಸಿತು. ಕೇಂದ್ರದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ವಿನಾಶಕಾರಿ ಆರ್ಥಿಕ ನೀತಿಗಳನ್ನು ಚಾಚೂ ತಪ್ಪದೇ ಜಾರಿಗೊಳಿಸಲು ಮುಂದಾಯಿತು. ಜನತೆ ಸಂಕಷ್ಟಗಳಲ್ಲಿ ತತ್ತರಿಸುತ್ತಿರುವಾಗ ರಕ್ಷಣೆಗೂ ಬರಲಿಲ್ಲ. ಪರಿಣಾಮವಾಗಿ ರಾಜ್ಯವೊಂದರಲ್ಲೇ ಈ ಅವಧಿಯಲ್ಲಿ 2000 ಕ್ಕೂ ಹೆಚ್ಚಿಗೆ ರೈತರು ಫಸಲಿಗೆ ಬೆಲೆ ಸಿಗದೆ, ಸಾಲದ ಭಾದೆ ತಾಳದೇ, ಆತ್ಮಹತ್ಯೆ ಮಾಡಿಕೊಂಡರು. ಕೂಲಿಕಾರರು ಹಸಿವಿನ ಸಾವಿಗೀಡಾದರು. ಅನೇಕ ಕೈಗಾರಿಕೆಗಳು ಮುಚ್ಚಿ ಕಾರ್ಮಿಕರು ಬೀದಿಪಾಲಾದರು. ನಿರುದ್ಯೋಗದ ಹೆಚ್ಚಳ, ಶಿಕ್ಷಣದ ವ್ಯಾಪಾರೀಕರಣ, ಕಾರ್ಮಿಕರ ನೌಕರರ ಹಕ್ಕುಗಳ ದಮನ, ಉಳ್ಳವರಿಗೆ ರಿಯಾಯಿತಿ, ಜನಸಾಮಾನ್ಯರ ಸುಲಿಗೆ, ವಿದ್ಯುತ್‌ದರ ಹೆಚ್ಚಳ, ನೀರು, ರಸ್ತೆ, ಮನೆತೆರಿಗೆ, ದುಬಾರಿ ರೇಷನ್ ಹಾಗೂ ರೇಷನ್ ಕಡಿತ ಉದ್ಯೋಗ ಹಾನಿ ಮುಂತಾದ ಕ್ರಮಗಳನ್ನು ನಿರ್ಧಯವಾಗಿ ಕೈಗೊಂಡಿತು. ಇವೆಲ್ಲಕ್ಕೂ ಮೇಲಾಗಿ ತನ್ನದು 'ಹೈಟೆಕ್ ಸರ್ಕಾರವೆಂದು', ಆಂಧ್ರದ ಚಂದ್ರಬಾಬು ನಾಯ್ಡು ಸರ್ಕಾರವನ್ನು ಮಾದರಿಯಾಗಿರಿಸಿ ಸೈಬರ್ ಲೋಕದ ಹಾದಿ ಅನುಸರಿಸಿತು. ಅಭಿವೃದ್ಧಿಯ ಕಾಮನಬಿಲ್ಲು ತೋರಿಸಿತು. ವಿಶೇಷವಾಗಿ ತನ್ನದು ಆಂಧ್ರದಂತೆ ಸಿಇಓ ಮಾದರಿ ಆಡಳಿತವೆಂದೂ ಇಲ್ಲಿ ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಸರ್ಕಾರವಾಗಿ ಅಥವಾ ಜನಾದೇಶ ದಂತೆ ಸಂಪುಟದ ಸಚಿವರು, ವಿಧಾನಸಭೆಯ ಚರ್ಚೆಗಳಲ್ಲಿ, ನಿರ್ಣಯಗಳಂತೆ ಅಧಿಕಾರ ನಡೆಸದೇ ವಿದೇಶಿ ಹಣಕಾಸು ಸಂಸ್ಥೆ - ಕಂಪನಿಗಳ ನಿರ್ದೇಶನದಂತೆ ಸರ್ವಾಧಿಕಾರಿ ಆಡಳಿತ ನಡೆಸಲು ಮುಂದಾಯಿತು. ಜನರ ಕೇಳಿಕೆ ಅಗತ್ಯ - ಅಹವಾಲುಗಳು ಮೂಲೆ ಗುಂಪಾಯಿತು. ಅದಕ್ಕೆಂದೇ ಸರ್ಕಾರದ ಪ್ರಜಾಸತ್ತಾತ್ಮಕ ನಿರ್ಧಾರಗಳ ಬದಲು ಪ್ರತಿಯೊಂದಕ್ಕೂ 'ಟಾಸ್ಕ್ ಫೋರ್ಸ್'ಗಳನ್ನು ರಚಿಸಿ ಮುಖ್ಯಮಂತ್ರಿಯೇ ಎಲ್ಲಾ ಅಧಿಕಾರ ಕೇಂದ್ರೀಕರಿಸಿ, ಮಂತ್ರಿಮಂಡಲವನ್ನು ರಬ್ಬರ್ ಸ್ಟಾಂಪ್ ಮಟ್ಟಕ್ಕೆ ಇಳಿಸಿತು. (ಐಕ್ಯರಂಗ ಅಕ್ಟೋಬರ್ 29,2000 ಜಿ.ಎನ್. ನಾಗರಾಜ್ ಲೇಖನದಲ್ಲಿ ವಿವರವಾಗಿ ವಿಶ್ಲೇಷಿಸಲಾಗಿದೆ).

ಬರಗಾಲದಂತಹ ಭೀಕರ ಸಂದರ್ಭದಲ್ಲಿಯೂ ಜನರ ನೆರವಿಗಾಗಿ ಧಾವಿಸದ ಸರ್ಕಾರವಿದು. **ಉದಾರೀ ಕರಣ, ಜಾಗತೀ ಕರಣ 'ಐ.ಟಿ.', 'ಹೈಟೆಕ್', ಟಾಸ್ಕ್‌ಫೋರ್ಸ್, ಕಾರ್ಪೊರೇಟ್ ಆಡಳಿತ ನಡೆಸಿದ ಆಂಧ್ರದ ಚಂದ್ರಬಾಬು ನಾಯ್ಡು ಮಣ್ಣು ಮುಕ್ಕಿದಂತೆ, ಅದನ್ನೇ ಆದರ್ಶವೆಂಬಂತೆ ಅನುಸರಿಸಿದ ಸೈಬರ್ ಕೃಷ್ಣನ ಸರ್ಕಾರವೂ ನೆಲಕಚ್ಚಿದೆ. ಇದು ವಿಶ್ವಬ್ಯಾಂಕ್‌ನ, CEO ಮಾದರಿ ಕುಸಿತ ಎಂಬುದು ಗಮನಿಸಬೇಕು.**

ಇದು ಜನವಿರೋಧಿ ಆರ್ಥಿಕ ನೀತಿಗಳ ಜಾರಿ ಮತ್ತು ಕಾರ್ಪೊರೇಟ್ ಮಾದರಿಯ ಸರ್ವಾಧಿಕಾರಿ ತನದ ಆಡಳಿತದ ಪರಿಣಾಮ, ಹುಟ್ಟಿದ ಅತೃಪ್ತಿ, ಆಕ್ರೋಶದ ಫಲವೇ ಜನತೆ ಕಾಂಗ್ರೆಸ್ಸನ್ನು ತಿರಸ್ಕರಿಸಿದ್ದಾರೆ. ಎನ್ನುವುದು ಮುಖ್ಯವಾದ ಒಂದು ಅಂಶ.

ಎರಡನೆಯದಾಗಿ ಕೇಂದ್ರದಲ್ಲಿ ಅಧಿಕಾರದಲ್ಲಿದ್ದು ರಾಜ್ಯದ ವಿಧಾನಸಭೆಯಲ್ಲಿ ಅಧಿಕೃತ ವಿರೋಧ ಪಕ್ಷವಾಗಿದ್ದು ಬಿಜೆಪಿಯು ರಾಜ್ಯ ಸರ್ಕಾರದ ಮೇಲೆ ನಿರಂತರ ಪ್ರಚಾರದ ಧಾಳಿ ನಡೆಸುತ್ತಿರುವಾಗಲೂ ಅದನ್ನು ಎದುರಿಸಲಿಲ್ಲ. ಬಿಜೆಪಿ ರಾಜ್ಯದ ತುಂಬಾ ಸಭೆಗಳು, ಜಾಥಾಗಳು, ಹಳ್ಳಿಗೆ ನಡೆಯಿರಿ, ಉದಯಯಾತ್ರೆ... ಇತ್ಯಾದಿ ಮೂಲಕ ವ್ಯಾಪಕ ಪ್ರಚಾರಿಸಿದಾಗಲೂ ಅದು ತಮ್ಮ ಸರ್ಕಾರದ ಮೇಲೆ ಏನೂ ಪರಿಣಾಮ ಬೀರದು ಎಂದೂ, ಅದನ್ನು ಎದುರಿಸಲು ತಮ್ಮ 'ಹೈಟೆಕ್' ಸಾಧನೆಗಳೇ ಸಾಕು ತಾವು ಮತ್ತೆ ಗೆದ್ದು ಬರುವುದಾಗಿ ಭಾವಿಸಿತು.


ಪುಟ 8 ಕ್ಕೆ

ಬಾಗೇಪಲ್ಲಿ (ಕೋಲಾರ ಜಿಲ್ಲೆ) - ಎಲ್ಲಾ ಕುತಂತ್ರ ಎದುರಿಸಿ ಜನತೆ ನೀಡಿದ ಅಭೂತಪೂರ್ವ ಗೆಲುವು

ಕಮ್ಯುನಿಸ್ಟ್ ಚಳುವಳಿಗೆ ಹಲವಾರು ದಶಕಗಳ ಇತಿಹಾಸವಿದೆ. ಹಿಂದೆ 1983 ರಲ್ಲಿ ಕಾಂ. ಅಪ್ಪುಸ್ವಾಮಿ ರೆಡ್ಡಿಯವರು ಸಿಪಿಐ(ಎಂ) ಶಾಸಕರಾಗಿ ಆಯ್ಕೆಯಾಗಿದ್ದರು. ಆ ಬಳಿಕ 1994 ರಲ್ಲಿ ಕಾಂ. ಜಿ.ವಿ.ಶ್ರೀರಾಮರೆಡ್ಡಿಯವರು ಆಯ್ಕೆಯಾಗಿದ್ದರು. ಈ ಅವಧಿಯಲ್ಲಿ ಅನೇಕ ಗಮನಾರ್ಹವಾದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದಲ್ಲದೆ ವಿಧಾನಸಭೆಯಲ್ಲಿ ರಾಜ್ಯದ ದುಡಿಯುವ ವರ್ಗದ ಹಿತಾಸಕ್ತಿಗಳನ್ನು ಧ್ವನಿಸುವಲ್ಲಿ, ಕಾಪಾಡುವಲ್ಲಿ ಮಹತ್ವದ ಪಾತ್ರ ನಿರ್ವಹಿಸಿದ್ದರು.

ಆದರೆ 1999 ರಲ್ಲಿ ಎಲ್ಲಾ ಪಟ್ಟಭದ್ರ ಹಿತಾಸಕ್ತಿಗಳು-ಜಾತಿವಾದಿಗಳು ಕುತಂತ್ರ ಮತ್ತು ಪಿತೂರಿಯಿಂದ ಹಿಂದಿಗಿಂತ ಮತಗಳನ್ನು ಹೆಚ್ಚಿಗೆ ಗಳಿಸಿದರೂ ಸೋಲಬೇಕಾಯಿತು.

ಈ ಬಾರಿಯ ಚುನಾವಣೆಯಲ್ಲಿಯೂ ಕಾಂ. ಜಿ.ವಿ.ಶ್ರೀರಾಮರೆಡ್ಡಿಯವರನ್ನು ಸೋಲಿಸಲು ಕಾಂಗ್ರೆಸ್ ಮತ್ತು ಬಿಜೆಪಿಗಳು ಹವಣಿಸಿದವು. ಆರಂಭದಲ್ಲಿ ಖ್ಯಾತ ಚಿತ್ರನಟ ಸಾಯಿಕುಮಾರ್‌ನನ್ನು ಸ್ಪರ್ಧೆಗಿಳಿಸುವುದಾಗಿ ಬಿಜೆಪಿ ಪ್ರಕಟಿಸಿತು. ಸಿನಿಮಾ ಹೆಸರಲ್ಲದೇ ಜಾತಿಯ ಬೆಂಬಲ ಸೆಳೆಯುವ ಲೆಕ್ಕಾಚಾರವನ್ನೂ ಹಾಕಿತ್ತು. ಆದರೆ ಹಾಲಿ ಶಾಸಕರಾಗಿದ್ದ ಸಂಪಂಗಿಯವರನ್ನೇ ತನ್ನ ಅಭ್ಯರ್ಥಿಯನ್ನಾಗಿಸಲು ಕಾಂಗ್ರೆಸ್ ನಿರ್ಧರಿಸಿದ್ದರಿಂದ ಸಿಪಿಐ(ಎಂ) ಅಭ್ಯರ್ಥಿಯನ್ನು ಹೇಗಾದರೂ ಸೋಲಿಸಲೇಬೇಕೆಂದು ಬಿಜೆಪಿಯು ತನ್ನ ಅಭ್ಯರ್ಥಿಯನ್ನು ಜಾತಿ ಲೆಕ್ಕಾಚಾರವನ್ನು ಹಾಕಿ ಬದಲಾಯಿಸಿತು. ಇಂತಹ ಅನೇಕ ಪಿತೂರಿಗಳು ಚುನಾವಣಾ ಹೋರಾಟದುದ್ದಕ್ಕೂ ನಡೆದವು. ಹೋರಾಟದ ಬಳಿಕ ಇಂತಹ ಎಲ್ಲ ಅಡೆ-ತಡೆ, ಕುತಂತ್ರಗಳನ್ನು ಎದುರಿಸಿ ಕ್ಷೇತ್ರದ ಜನತೆ ಸುಮಾರು 11,000 ಕ್ಕೂ ಹೆಚ್ಚಿನ ಪ್ರಚಂಡ ಬಹುಮತದಿಂದ



ಸಿಪಿಐ(ಎಂ) ಅಭ್ಯರ್ಥಿ ಕಾಂ. ಜಿ.ವಿ.ಎಸ್. ರವರನ್ನು ಆರಿಸಿದ್ದಾರೆ. ಈ ಮೂಲಕ ಕ್ಷೇತ್ರದ ಹಾಗೂ ರಾಜ್ಯದ ದುಡಿಯುವ ವರ್ಗದ ಧ್ವನಿ ಶಾಸನ ಸಭೆಯಲ್ಲಿ ಮೊಳಗಲು ಕಾರಣೀಭೂತರಾಗಿ ಅವಕಾಶ ಕಲ್ಪಿಸಿದ್ದಾರೆ.

ಈ ಹೋರಾಟದುದ್ದಕ್ಕೂ ಕ್ಷೇತ್ರದಲ್ಲಿ ಜನತೆಯ ಸ್ಪಂದನೆ, ಶ್ರಮ ಅಭೂತಪೂರ್ವ, ಅವಿಸ್ಮರಣೀಯ..... ಅವರೆಲ್ಲರಿಗೂ ಸಿಪಿಐ(ಎಂ) ಕೃತಜ್ಞತೆ ಸಲ್ಲಿಸಿ ಅಭಿನಂದಿಸಿದೆ.

ಅಚ್ಚುತವಾದ ಜನಾದೇಶವೊಂದು ಹೊರಬಿದ್ದಿದೆ! ಜನತಾ ನ್ಯಾಯಾಲಯ ಐತಿಹಾಸಿಕ ತೀರ್ಪೊಂದನ್ನು ನೀಡಿದೆ. ಅದು ಯಾರ ಪರವಾಗಿದೆ? ಇಲ್ಲಿ ಯಾರಿಗೆ ಶಿಕ್ಷೆಯಾಗಿದೆ? ಯಾರಿಗೆ ನ್ಯಾಯ ದೊರಕಿದೆ? ವಿಶ್ಲೇಷಿಸಿದ್ದಾರೆ ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಹರ್ಕಿಷನ್‌ಸಿಂಗ್ ಸುರ್ಜಿತ್



ಧರ್ಮನಿರಪೇಕ್ಷ ಸರ್ಕಾರಕ್ಕೆ ಜನಾದೇಶ

ಹರ್ಕಿಷನ್‌ಸಿಂಗ್ ಸುರ್ಜಿತ್

ನಾವು ಮುದ್ರಣಕ್ಕೆ ಹೋಗುವ ವೇಳೆಗೆ ಎಲ್ಲಾ 539 ಸ್ಥಾನಗಳ ಫಲಿತಾಂಶ ಬಂದಿದೆ. ಸರ್ಕಾರ ರಚನೆಯ ಪ್ರಯತ್ನಗಳು ಸಾಗಿವೆ. ಮುಂದಿನ ಕೆಲವು ದಿನಗಳು ಚುರುಕಿನ ರಾಜಕೀಯ ಚಟುವಟಿಕೆಗಳು ನಡೆಯಲಿವೆ. ಒಂದಿಲ್ಲೊಂದು ಸಂಯೋಜನೆ ಖಂಡಿತಾ ಮೂಡಿಬರಲಿದೆ. ಈ ಚುನಾವಣೆಗಳಲ್ಲಿ ಎಡಪಕ್ಷಗಳು ಇನ್ನೂ ದೊಡ್ಡ ಶಕ್ತಿಯಾಗಿ ಮೂಡಿಬಂದಿವೆ. ಸುಮಾರು 62 ಸ್ಥಾನಗಳನ್ನು ಪಡೆದಿವೆ. ಸಿಪಿಐ(ಎಂ)ನ ಸ್ಥಾನಗಳೇ 44. ಮುಂಬರುವ ದಿನಗಳಲ್ಲಿ ಎಡಪಕ್ಷಗಳು ರಾಷ್ಟ್ರೀಯ ರಾಜಕಾರಣದಲ್ಲಿ ಇನ್ನಷ್ಟು ಮಹತ್ವದ ಪಾತ್ರ ನಿರ್ವಹಿಸಲಿವೆ.

ಅದೇನೇ ಇರಲಿ, ಕೇಂದ್ರ ಅಂಶವೆಂದರೆ ಕೋಮುವಾದ ಮತ್ತು ಜಾತ್ಯತೀತತೆಯ ಪ್ರಶ್ನೆಯ ಮೇಲೆ ಈ ಚುನಾವಣಾ ಹೋರಾಟ ನಡೆದಿದೆ. ಈ ಮಹಾನ್ ದೇಶದ ಜನತೆ ಕೋಮುವಾದಿ ಶಕ್ತಿಗಳನ್ನು ಮತ್ತು ಅವರಿಗೆ ಜೋತುಬಿದ್ದವರನ್ನು ಖಡಾಖಂಡಿತವಾಗಿ ತಿರಸ್ಕರಿಸಿದ್ದಾರೆ ಎಂಬುದು ಸ್ಪಷ್ಟ.

1999 ರ ಚುನಾವಣೆಗಳಲ್ಲಿ ಎನ್‌ಡಿಎ ಮತ್ತು ಹೊರಗಿಂದ ಬೆಂಬಲಿಸುತ್ತಿದ್ದ ತೆಲುಗುದೇಶಂ ಪಕ್ಷಕ್ಕೆ ಒಟ್ಟು 300 ಕ್ಕೂ ಹೆಚ್ಚು ಸ್ಥಾನಗಳು ದೊರೆತಿದ್ದವು. ಈ ಬಾರಿಯ ಎನ್‌ಡಿಎ ಬಹುಮತ ಪಡೆದು ಕೇಂದ್ರದಲ್ಲಿ ಸರ್ಕಾರ ರಚಿಸುತ್ತದೆ ಎಂದು ಹೇಳಿಕೊಳ್ಳುತ್ತಿದ್ದರು. ಒಂದು ಹಂತದಲ್ಲಿ ಅವರು ಕನಿಷ್ಠ 334 ಸ್ಥಾನಗಳು ದೊರೆಯುತ್ತವೆ ಎಂದೂ ಬಡಾಯಿ ಕೊಚ್ಚಿಕೊಳ್ಳುತ್ತಿದ್ದರು. ಆದರೆ ಈಗ ಅವರಿಗೆ ದಿಗಿಲಾಗಿದೆ. ಜನ ಅವರ ನಿರೀಕ್ಷೆಗಳನ್ನು ತಲೆಕೆಳಗಾಗಿಸಿ ಅವರನ್ನು ಅಲ್ಪಮತಕ್ಕೆ ಇಳಿಸಿದ್ದಾರೆ.

ಒಟ್ಟಿನಲ್ಲಿ, ದೇಶದ ವರ್ತಮಾನ ಮತ್ತು ಭವಿಷ್ಯದೊಂದಿಗೆ ಚೆಲ್ಲಾಟವಾಡಲು ಬಿಡುವುದಿಲ್ಲ ಎಂದು ಕೋಮುವಾದಿ ಶಕ್ತಿಗಳಿಗೆ ಹೇಳಿದ್ದಕ್ಕಾಗಿ ಜನತೆ ಎಲ್ಲಾ ಪ್ರಶಂಸೆಗಳಿಗೆ ಅರ್ಹರಾಗಿದ್ದಾರೆ. ಈ ಚುನಾವಣೆಗಳಲ್ಲಿ ರಾಷ್ಟ್ರೀಯ ಐಕ್ಯತೆ ಮತ್ತು ನಮ್ಮ ನಾಗರಿಕ ಅಸ್ತಿತ್ವವೇ ಒರೆಗೆ ಹಚ್ಚಲ್ಪಟ್ಟಿದೆ ಎಂದು ಸಿಪಿಐ(ಎಂ)ನ ನಾವು ಹೇಳುತ್ತಾ ಬಂದಿದ್ದೇವೆ. ಈ ಜಾಗೃತಿ ದೇಶದ ಜನಸಾಮಾನ್ಯರ ಪ್ರಜ್ಞೆಯನ್ನು ವ್ಯಾಪಿಸಿದೆ, ಅವರು ಅದನ್ನು ತೋರಿಸಿಕೊಟ್ಟಿದ್ದಾರೆ ಎಂಬುದನ್ನು ನಾವೀಗ ತೃಪ್ತಿಯಿಂದ ಗಮನಿಸುತ್ತೇವೆ.

ಒಂದು ಸಂಗತಿಯೂ ಸ್ಪಷ್ಟ. ಮುಂದಿನ ಸರ್ಕಾರವನ್ನು ಯಾವುದೇ ಪಕ್ಷ ಅಥವಾ ಮೈತ್ರಿಕೂಟ ರಚಿಸಲಿ, ಕೋಮುವಾದಿ ಮತ್ತು ಫ್ಯಾಸಿಸ್ಟ್ ಮಾದರಿಯ ಶಕ್ತಿಗಳ ವಿರುದ್ಧ ಹೋರಾಟ ಇನ್ನೂ ಮುಗಿದಿಲ್ಲ. ಈ ಹೊಲಸು ಶಕ್ತಿಗಳು ಮತ್ತೆ ತಲೆಯೆತ್ತಲು ಸಾಧ್ಯವಾಗದಂತೆ ಜನತೆ ತಮ್ಮ ಜಾಗರೂಕತೆಯನ್ನು ಮುಂದುವರೆಸಬೇಕು.

> **ಮುಂದಿನ ಸರ್ಕಾರವನ್ನು ಯಾವುದೇ ಪಕ್ಷ ಅಥವಾ ಮೈತ್ರಿಕೂಟ ರಚಿಸಲಿ, ಕೋಮುವಾದಿ ಮತ್ತು ಫ್ಯಾಸಿಸ್ಟ್ ಮಾದರಿಯ ಶಕ್ತಿಗಳ ವಿರುದ್ಧ ಹೋರಾಟ ಇನ್ನೂ ಮುಗಿದಿಲ್ಲ. ಈ ಹೊಲಸು ಶಕ್ತಿಗಳು ಮತ್ತೆ ತಲೆಯೆತ್ತಲು ಸಾಧ್ಯವಾಗದಂತೆ ಜನತೆ ತಮ್ಮ ಜಾಗರೂಕತೆಯನ್ನು ಮುಂದುವರೆಸಬೇಕು.**

ಆಂಧ್ರದಲ್ಲಿ ಟಿಡಿಪಿ ಪತನ

ಈ ಚುನಾವಣೆಗಳಲ್ಲಿ ಒಂದು ಗಮನಿಸಬೇಕಾದ ಅಂಶವೆಂದರೆ ಆಂಧ್ರಪ್ರದೇಶದ ಜನತೆ ತೆಲುಗುದೇಶಂ ಪಕ್ಷ ಮತ್ತು ಅದರ ನಿರಂತರ ಪ್ರಭು ಚಂದ್ರಬಾಬು ನಾಯ್ಡುಗೆ ಬಾಗಿಲು ತೋರಿಸಿದ ರೀತಿ. 294 ವಿಧಾನಸಭಾ ಸ್ಥಾನಗಳಲ್ಲಿ ಟಿಡಿಪಿಗೆ ಕೇವಲ 47 ಮತ್ತು ಅದರ ಮಿತ್ರ ಬಿಜೆಪಿಗೆ ಕೇವಲ 2 ಸ್ಥಾನಗಳನ್ನು ದೊರೆತಿವೆ. ಅಂದರೆ ಆರನೇ ಒಂದರಷ್ಟು ಸ್ಥಾನಗಳಷ್ಟೇ. 1982 ರಲ್ಲಿ ಅದು ಸ್ಥಾಪನೆಗೊಂಡಂದಿನಿಂದ ಎಂದೂ ಟಿಡಿಪಿ ಇಂತಹ ಅವಮಾನಕಾರೀ ಸೋಲು ಕಂಡದ್ದಿಲ್ಲ.

ತಮಿಳುನಾಡಿನಲ್ಲಿ ಜಯಲಲಿತಾರವರ ದುರಾಡಳಿತದಿಂದ ಎಐಡಿಎಂಕೆ - ಬಿಜೆಪಿ ಕೂಟ ಸಂಪೂರ್ಣವಾಗಿ ಅಳಿಸಿಹೋಗಿದೆ. ಈಕೆಯೇ ತಾನೇ ರಾಜ್ಯದ ಜನಗಳ ಪ್ರಜಾಪ್ರಭುತ್ವ ಹಾಗೂ ಕಾರ್ಮಿಕ ಸಂಘಟನಾ ಹಕ್ಕುಗಳನ್ನು ದಬಾಯಿಸಿ ಬಿಡಲು ಪ್ರಯತ್ನಿಸಿದವರು. ಪಕ್ಕದ ಕೇರಳದಲ್ಲಿ ಎಲ್‌ಡಿಎಫ್ 20 ರಲ್ಲಿ 18 ಸ್ಥಾನಗಳನ್ನು ಗಳಿಸಿ ದಾಖಲೆ ನಿರ್ಮಿಸಿದರೆ, ಯುಡಿಎಫ್‌ನ ನೇತೃತ್ವ ವಹಿಸಿದ್ದ ಕಾಂಗ್ರೆಸ್‌ಗೆ ಒಂದೂ ಸ್ಥಾನ ಗೆಲ್ಲಲಾಗಿಲ್ಲ.

ನಾಯ್ಡು ಹಿಡಿದ ದಾರಿ

ಆಂಧ್ರಪ್ರದೇಶ, ಕೇರಳ ಮತ್ತು ತಮಿಳುನಾಡಿನ ಅನುಭವಗಳು ದೇಶದ ಎಲ್ಲಾ ಪಕ್ಷಗಳಿಗೆ ಒಂದೆರಡು ಪಾಠ ಕಲಿಸಿವೆ. ನಮಗೆಲ್ಲಾ ಗೊತ್ತಿರುವಂತೆ ನಾಯ್ಡು ಬಾಹ್ಯ ಕಂಪ್ಯೂಟರ್ ಪ್ರಿಯ ಮುಖ್ಯಮಂತ್ರಿಯಾಗಿದ್ದು ಹೈದರಾಬಾದನ್ನು ದೇಶದ ಮಾಹಿತಿ ತಂತ್ರಜ್ಞಾನ(ಐಟಿ) ರಾಜಧಾನಿಯಾಗಿ ಮಾಡಹೊರಟಿದ್ದರು. ಆದರೂ ಆತನ ಹತೋಟಿಯಲ್ಲಿ ಸಕಲ ಸಂಪನ್ಮೂಲಗಳಿದ್ದರೂ, ಕೇಂದ್ರದಲ್ಲಿನ ಸರ್ಕಾರದಿಂದ ಹೊರಗಿನಿಂದ ಬೆಂಬಲಕ್ಕೆ ಪ್ರತಿಯಾಗಿ ಸಕಲ ನೆರವುಗಳು, ಗ್ರಾಂಟುಗಳು ದೊರೆತರೂ ರಾಜ್ಯದ ಜನತೆಯ ಮೂಲಭೂತ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುವಲ್ಲಿ ಆತ ವಿಫಲರಾದರು. ಕಳೆದ 9 ವರ್ಷಗಳ ನಾಯ್ಡು ಆಡಳಿತದಲ್ಲಿ ಬುಡಮಟ್ಟದಲ್ಲಿ ಪರಿಸ್ಥಿತಿ ಎಷ್ಟೊಂದು ಶೋಚನೀಯವಾಯಿತೆಂದರೆ ಸಾವಿರಾರು ರೈತರು ಆತ್ಮಹತ್ಯೆ ಮಾಡಿಕೊಂಡರು. ಕೇಂದ್ರ ಮತ್ತು ರಾಜ್ಯ ಸರಕಾರಗಳು ಅನುಸರಿಸುತ್ತಿದ್ದ ರೈತ-ವಿರೋಧಿ, ಕೃಷಿ-ವಿರೋಧಿ ನೀತಿಗಳಿಂದಾಗಿ ಅವರ ಬದುಕು ಮತ್ತು ಜೀವಕ್ಕೆ ಗಂಭೀರ ಅಪಾಯ ಬಂದೊದಗಿತು. ಮಾಹಿತಿ ತಂತ್ರಜ್ಞಾನ ವಲಯವನ್ನು ಬೆಳೆಸಲು ಪ್ರಯತ್ನಿಸುವುದರಲ್ಲಿ ತಪ್ಪೇನಿಲ್ಲ. ಏಕೆಂದರೆ ನಾವು ಜಗತ್ತಿನ ಇತರರೊಂದಿಗೆ ಹೆಜ್ಜೆ ಹಾಕಬೇಕಾಗುತ್ತದೆ. ಆದರೆ ನಾಯ್ಡು ಅದನ್ನು ಸಾಧಿಸಲು ಹಿಡಿದ ದಾರಿ ಆರಂಭದಿಂದಲೂ ದೋಷಪೂರಿತವಾಗಿತ್ತು. ಏಕೆಂದರೆ ಆರ್ಥಿಕದ ಮೂಲಭೂತ ವಲಯಗಳಾದ ಕೃಷಿ ಮತ್ತು ಕಾರ್ಖಾನೆ ವಲಯವನ್ನು ಬದಿಗೆ ತಳ್ಳಿ ಮಾಹಿತಿ ತಂತ್ರಜ್ಞಾನವನ್ನಷ್ಟೇ ಮುಂದೊತ್ತಲು ಪ್ರಯತ್ನಿಸಿದರು. ಈ ವಲಯದಲ್ಲಿ ನಿರ್ಮಾಣಗೊಂಡ ಸಂಪತ್ತು ಮತ್ತು ಉದ್ಯೋಗ ಇತರ ವಲಯಗಳಲ್ಲಿನ ನಷ್ಟಗಳನ್ನು ಸರಿದೂಗಿಸಿದೆಯೇ ಎಂದು ಲೆಕ್ಕ ಹಾಕಲು ತನ್ನ ಕಂಪ್ಯೂಟರ್‌ಗಳನ್ನು ಬಳಸಬೇಕೆಂಬ ಯೋಚನೆಯೂ ಆತನಿಗೆ ಬರಲಿಲ್ಲ.

> **ಕೋಮುವಾದ ಮತ್ತು ಜಾತ್ಯತೀತತೆ ಪ್ರಶ್ನೆಯ ಮೇಲೆ ಈ ಚುನಾವಣಾ ಹೋರಾಟ ನಡೆದಿದೆ. ಈ ಮಹಾನ್ ದೇಶದ ಜನತೆ ಕೋಮುವಾದಿ ಶಕ್ತಿಗಳನ್ನು ಮತ್ತು ಅವರಿಗೆ ಜೋತುಬಿದ್ದವರನ್ನು ಖಡಾಖಂಡಿತವಾಗಿ ತಿರಸ್ಕರಿಸಿದ್ದಾರೆ ಎಂಬುದು ಸ್ಪಷ್ಟ.**


ಇನ್ನೊಂದು ಮಹತ್ವದ ಸಂಗತಿಯೆಂದರೆ, **ಕೋಮುವಾದದೊಂದಿಗೆ ಆರ್ಥಿಕ ನೀತಿಗಳೂ ಚುನಾವಣಾ ಸಮರದ ಕೇಂದ್ರ ವಿಷಯವಾಗಿದ್ದು ಈ ದೇಶದ ರಾಜಕೀಯ ಪ್ರಜ್ಞೆಯುಳ್ಳ ಜನತೆ ಬಿಜೆಪಿ, ಟಿಡಿಪಿ ಮತ್ತು ಒಟ್ಟಾರೆ ಎನ್‌ಡಿಎ ಪರವಾಗಿ ಸಾಮ್ರಾಜ್ಯಶಾಹಿ ಮತ್ತು ಬಂಡವಾಳಶಾಹಿ ಹತೋಟಿಯ ಮಾಧ್ಯಮ** ಎಬ್ಬಿಸಿದ ಅಬ್ಬರಕ್ಕೆ ಸರಿಯಾದ ಉತ್ತರ ನೀಡಿದ್ದಾರೆ. ಬಿಜೆಪಿ ಮತ್ತು ಟಿಡಿಪಿ ಇತ್ಯಾದಿಗಳ ಬಗೆದಂತೆ 'ಭಾರತ ಪ್ರಕಾಶಿಸುತ್ತಿದೆ', 'ಹಿತಾನುಭ... ಇತ್ಯಾದಿಗಳಿಂದ ಒಂದು ಪಕ್ಷ ಒಂದ... ಚುನಾವಣೆಯನ್ನು ಗೆಲ್ಲಲು ಸಾಧ್ಯವಿಲ್ಲ ಎಂಬುದ... ಈ ಫಲಿತಾಂಶಗಳು ಎತ್ತಿ ತೋರಿವೆ. ಜನತೆ ತಮ... ಬದುಕಿನ ಅನುಭವಗಳ ಆಧಾರದಲ್ಲೇ ಒಂದ... ಪಕ್ಷವನ್ನು ಪರೀಕ್ಷಿಸುತ್ತಾರೆ. ಆದ್ದರಿಂದ ಜನತೆಯ ವಿಶ್ವಾಸವನ್ನು ಗೆಲ್ಲಬೇಕೆಂದಿರುವ ಪಕ್ಷದ ನಡವಳಿಕೆ ದೋಷರಹಿತ ವಾಗಿರಬೇಕು.

ಕಲಿಯಬೇಕಾದ ಪಾಠ

ಅಂದರೆ ಕಲಿಯಬೇಕಾದ ಪಾಠ ಇದು... ಯಾವುದೇ ಪಕ್ಷ ಅಥವಾ ಮೈತ್ರಿಕೂಟ ಜನಗಳನ್ನು ನಿರ್ಲಕ್ಷಿಸಿ, ಚುನಾವಣೆ ಬರುವಾಗ ಕೆಲವು ರೊಟ್ಟಿ ತುಣುಕುಗಳನ್ನು ಕೊಟ್ಟು ಅವರನ್ನು ಮರಳು ಮಾಡಬಹುದು ಎಂದು ಭಾವಿಸಲು ಸಾಧ್ಯವಿಲ್ಲ. ರಾಷ್ಟ್ರಮಟ್ಟದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಕೂಡಾ ಕೆಲವು ರೊಟ್ಟಿ ತುಣುಕುಗಳನ್ನು ಎಸೆದು ಸಾರ್ವಜನಿಕ ಅಭಿಪ್ರಾಯವನ್ನು ತನ್ನ ಪರವಾಗಿ ತಿರುಗಿಸಲು ಪ್ರಯತ್ನಿಸಿತು. ಆದರೆ ಕಳೆದ ಐದು ವರ್ಷಗಳಲ್ಲಿ ಜನಗಳ ಮೂಲಭೂತ ಸಮಸ್ಯೆಗಳನ್ನು ಉಪೇಕ್ಷಿಸಿದ್ದಕ್ಕೆ ಈಗ ಬೆಲೆ ತೆರಬೇಕಾಗಿ ಬಂದಿದೆ. ಕೇವಲ ಆರು ತಿಂಗಳ ಹಿಂದೆ ರಾಜಸ್ಥಾನ, ಮಧ್ಯಪ್ರದೇಶ ಮತ್ತು ಛತ್ತೀಸ್‌ಗಡದ ಕಾಂಗ್ರೆಸ್ ಸರ್ಕಾರಗಳು ಜನಸಮೂಹಗಳ ಪ್ರಮುಖ ಪ್ರಶ್ನೆಗಳನ್ನು ಉಪೇಕ್ಷಿಸಿದ್ದಕ್ಕೆ ಇದೇ ಶಿಕ್ಷೆ ಅನುಭವಿಸಿದ್ದು.

ಹೀಗೆ **ಈ ಫಲಿತಾಂಶಗಳು ಕಾಂಗ್ರೆಸ್‌ಗೂ ಒಂದು ಪಾಠ.** ಅದು ಈಗ ಗೆದ್ದಿರುವ ಮತಗಳು, ಸ್ಥಾನಗಳು ತಮ್ಮ ಪರವಾಗಿ ಸಕಾರಾತ್ಮಕ ಜನಬೆಂಬಲವನ್ನು ತೋರಿಸುತ್ತದೆ ಎಂದು ಭ್ರಮೆ ಪಡಬಾರದು. ಕಾಂಗ್ರೆಸ್ ಈ ಸ್ಥಾನಗಳನ್ನು ಪಡೆದಿರುವುದು ಕೂಡಾ ಕೇವಲ ತನ್ನದೆ ಶಕ್ತಿಯಿಂದಲೂ ಅಲ್ಲ. ನಾವು ಹಿಂದೆ ಹೇಳಿದಂತೆ **ರಾಷ್ಟ್ರೀಯ ಐಕ್ಯತೆ ಮತ್ತು ಜನರ ಬದುಕಿ... ಕಂಟಕಪ್ರಾಯವಾಗಿದ್ದ ಬಿಜೆಪಿಯನ್ನು ಸೋಲಿಸು... ವುದು ಈ ಚುನಾವಣೆಯಲ್ಲಿ ಜನರ ಮುಂದಿದ್ದ ಕೇಂದ್ರ ಪ್ರಶ್ನೆ.** ಜನ ಕಾಂಗ್ರೆಸ್‌ಗೆ ಮ... ಹಾಕಿದಲ್ಲೆಲ್ಲಾ ಅವರು ಹಾ... ಮಾಡಿರುವುದು ಪ್ರತಿಪ... ದಲ್ಲಿರುವ ಅತೀ ದೊಡ್ಡ ಪಕ್ಷವಾಗಿ ಅದು ಇತರ ಎಲ್ಲಾ ಕೋಮುವಾದ-ವಿರೋಧಿ ಶಕ್ತಿಗಳ ಸಹಕಾರದೊಂದಿ... ಬಿಜೆಪಿ ಮತ್ತು ಎನ್‌ಡಿ... ಯೊಂದಿಗೆ ಮುಖಾಮುಖಿ... ಯಾಗಿ ನಿಲ್ಲುತ್ತದೆ ಎಂ... ನಂಬಿಕೆಯಿಂದ. **ತಾನು ಪಡೆದಿರುವ ಜನಗಳ ಸದ್ಭಾವನೆಯನ್ನು ಕೆಡಿಸುವ ಯಾವುದೇ ಕ್ರಮ ಕೈಗೊಳ್ಳದಂತೆ ಕಾಂಗ್ರೆಸ್ ಎಚ್ಚರದಿಂದಿರಬೇಕು** ಎಂಬುದು ಸ್ವಯಂವೇದ್ಯ.

ಇನ್ನೊಂದು ಮಹತ್ವದ ಅಂಶವೆಂದರೆ ಕೇಂದ್ರದಲ್ಲಿ ಅಧಿಕಾರ ವಹಿಸಿಕೊಳ್ಳುವ ಯಾವುದೇ ಸಂಯೋಜನೆ **ಒಂದು ಪಾರದರ್ಶಕ ಹಾಗೂ ಭ್ರಷ್ಟಾಚಾರ-ರಹಿತ ಸರ್ಕಾರವನ್ನು ಕೊಡಬೇಕು**



ಈ ಚುನಾವಣೆಗಳಲ್ಲಿ ಭ್ರಷ್ಟಾಚಾರ ಕೂಡಾ ಜನಗಳ ಮನಸ್ಸನ್ನು ಕೊರೆಯುತ್ತಿದ್ದ ಒಂದು ಪ್ರಮುಖ ಅಂಶ ಎಂಬುದನ್ನು ಮರೆಯಬಾರದು. ಕಳೆದ ಆರು ವರ್ಷಗಳಲ್ಲಿ ಸರ್ಕಾರ ಸಂಪನ್ಮೂಲ ಕೊರತೆಯ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಾ, ಸಂಪನ್ಮೂಲಗಳನ್ನು ನಿರ್ಮಿಸುವ ಹೆಸರಲ್ಲಿ ಶಿಕ್ಷಣ, ಆರೋಗ್ಯ ಮತ್ತಿತರ ಪ್ರಮುಖ ಸಾಮಾಜಿಕ ಸೇವೆಗಳನ್ನು ವ್ಯಾಪಾರೀಕರಿಸುತ್ತಿದ್ದಾಗ ಹಲವು ಬಿಜೆಪಿ ಮತ್ತು ಎನ್‌ಡಿಎ ಘಟಾನುಘಟಿಗಳು ಭ್ರಷ್ಟ ವ್ಯವಹಾರಗಳಲ್ಲಿ ಕುತ್ತಿಗೆಯವರೆಗೆ ಮುಳುಗಿದ್ದು ಕಂಡುಬಂತು. ಕೋಟ್ಯಾಂತರ ರೂಪಾಯಿಗಳ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗಿ ಕೈಗಳಿಗೆ ಮೂರು ಕಾಸಿಗೆ ಮಾರಲಾಯಿತು. ಅದಕ್ಕೆ ಪ್ರತಿಯಾಗಿ ಏನೋ ಕೈಬದಲಾಯಿಸಿಕೊಂಡರು.

ಒಟ್ಟಿನಲ್ಲಿ, ದೇಶದ ವರ್ತಮಾನ ಮತ್ತು ಭವಿಷ್ಯದೊಂದಿಗೆ ಚೆಲ್ಲಾಟವಾಡಲು ಬಿಡುವುದಿಲ್ಲ ಎಂದು ಕೋಮುವಾದಿ ಶಕ್ತಿಗಳಿಗೆ ಹೇಳಿದ್ದಕ್ಕಾಗಿ ಜನತೆ ಎಲ್ಲಾ ಪ್ರಶಂಸೆಗಳಿಗೆ ಅರ್ಹರಾಗಿದ್ದಾರೆ.

ಬಿಜೆಪಿ-ಎನ್‌ಡಿಎ ಗೆ ಜನಾದೇಶವಿಲ್ಲ

ಎನ್‌ಡಿಎ ಎಂಬ ವಿಚಿತ್ರಕೂಟಕ್ಕೆ ನೇತೃತ್ವ ನೀಡುತ್ತಿರುವ ಬಿಜೆಪಿಯ ಸ್ಥಾನಗಳು 184ರಿಂದ 135 ಕ್ಕಿಳಿದರೆ ಎನ್‌ಡಿಎಗೆ ಒಟ್ಟಾರೆ ಸಿಕ್ಕಿದ್ದು 189 ಮಾತ್ರ. ಟಿಡಿಪಿಯ 6 ಸ್ಥಾನಗಳನ್ನು ಸೇರಿಸಿ. ಈ ಕೂಟವನ್ನು ಜನತೆ ನಿರ್ಣಾಯಕವಾಗಿ ತಿರಸ್ಕರಿಸಿದ್ದಾರೆ ಎಂಬುದು ಸ್ಪಷ್ಟ. ಆದ್ದರಿಂದ ಸರ್ಕಾರ ರಚಿಸುತ್ತೇವೆ ಎನ್ನಲು ಅವರಿಗೆ ಯಾವುದೇ ರಾಜಕೀಯ ಅಥವಾ ನೈತಿಕ ಹಕ್ಕಿಲ್ಲ.

ಒಂದು ದಿನ ಹಿಂದೆಯಷ್ಟೇ, ಬಿಜೆಪಿ ಹೇಗಾದರೂ 283 ತಲುಪಲು ವಿರೋಧ ಪಕ್ಷಗಳಲ್ಲಿನ ಸಂಸದರನ್ನು ಸೆಳೆದುಕೊಳ್ಳಲು ತನ್ನ ಹಳೆಯ ಹೊಲಸು ಆಟವನ್ನು ಮತ್ತೆ ಆಡಬಹುದೆಂಬ ಶಂಕೆಯಿತ್ತು. ಉದಾಹರಣೆಗೆ ಮೇ 11 ರಂದು ಟೈಮ್ಸ್ ಆಫ್ ಇಂಡಿಯಾ ವರದಿಯ ಪ್ರಕಾರ ಬಿಜೆಪಿಯೊಳಗೆ ಎರಡು ಯೋಜನೆಗಳಿದ್ದವು. ಎನ್‌ಡಿಎ 250 ದಾಟಲು ವಿಫಲವಾದರೆ ವಾಜಪೇಯಿ ತನ್ನ ಪಕ್ಷದ ಸದಸ್ಯರು ಪ್ರತಿಪಕ್ಷವಾಗಿ ಕೂರಬೇಕೆಂದು ಅಭಿಪ್ರಾಯಪಟ್ಟಿದ್ದರಂತೆ. ಈ ಬಿಜೆಪಿ ಮೂಲಗಳ ಪ್ರಕಾರ ಅವರು ಮೊದಲೇ ಚುನಾವಣೆ ಮುಗಿಸಿದರಂತೆ ಒತ್ತಡ ಹಾಕಿದ್ದು, 250 ದಾಟುವಲ್ಲಿ ವಿಫಲತೆ ಜನಾದೇಶ ಇಲ್ಲ ಎಂಬ ಸೂಚಕ ಎಂದು ಅವರ ಭಾವನೆಯಂತೆ. ಆದರೆ ಬಿಜೆಪಿಯಲ್ಲಿನ ಇನ್ನೊಂದು ಅಭಿಪ್ರಾಯವೆಂದರೆ 'ಎನ್‌ಡಿಎ ಯನ್ನು ಒಟ್ಟಾಗಿಟ್ಟು, ಇತರ ಪಕ್ಷಗಳನ್ನು ಆಕರ್ಷಿಸಿ ಸರ್ಕಾರ ರಚಿಸುವ ದಾವೆ ಹಾಕಬೇಕು" ಎಂಬುದು.

ತನ್ನ ಗುರಿ ಚಾರಿತ್ರ್ಯ ನಿರ್ಮಾಣ ಎಂದು ಹಗಲೆಲ್ಲಾ ಆರ್‌ಎಸ್‌ಎಸ್ ಹೇಳುತ್ತಿದ್ದರೂ ವಾಜಪೇಯಿಗಿಂತ ಸಂಘ ಪರಿವಾರದ್ದೇ ಕೈ ಮೇಲಾಗಿ ವಾಜಪೇಯಿಯವರೂ ತನ್ನ ಎಂದಿನ ಸ್ವಭಾವಕ್ಕನುಗುಣವಾಗಿ ಆರ್‌ಎಸ್‌ಎಸ್ ನ ಕೈಮೇಲಾದರು ಸಂತೋಷದಿಂದ ಒಪ್ಪಿರಬೇಕು. "ಎನ್‌ಡಿಎ 250 ಕ್ಕಿಂತ ಹೆಚ್ಚು ಸ್ಥಾನ ಪಡೆಯದಿದ್ದರೆ ಪ್ರತಿಪಕ್ಷವಾಗಿ ಕೂರುತ್ತದೆ ಎಂಬ ವರದಿ ಸತ್ಯವಲ್ಲ ಎಂದು ಎ.ಬಿ.ವಾಜಪೇಯಿ ಹೇಳುತ್ತಾರೆ" ಎಂದು ಮೇ 12 ರ ಹಿಂದೂಸ್ತಾನ್ ಟೈಮ್ಸ್ ವರದಿ ಮಾಡಿದೆ. ಅದೇ ಪತ್ರಿಕೆ "ಪಕ್ಷದೊಳಗಿನ ಪ್ರಬಲ ಅಭಿಪ್ರಾಯವೆಂದರೆ ಎಷ್ಟೇ ಬೆಲೆ ತೆತ್ತಾದರೂ ಸರ್ಕಾರ ರಚಿಸಲೇಬೇಕು ಎಂಬುದು" ಎಂದೂ ವರದಿ ಮಾಡಿದೆ.

ನಿರ್ಣಾಯಕ ಪ್ರಶ್ನೆ

"ಎಷ್ಟೇ ಬೆಲೆ ತೆತ್ತಾದರೂ" ಎಂಬ ಪದಗಳನ್ನು ಗಮನಿಸಿ. ತನ್ನ ನಾಚಿಕೆಹೀನ ಸಮಯಸಾಧಕತೆಗೆ ಕುಖ್ಯಾತವಾಗಿರುವ ಬಿಜೆಪಿಯನ್ನು ಮಣಿಸಲು ಇದಕ್ಕಿಂತ ಉತ್ತಮ ಪದಪುಂಜ ದೊರಕದು. 1990 ರಲ್ಲಿ ರಾಜಸ್ತಾನದಲ್ಲಿ, 1997 ರಲ್ಲಿ ಉತ್ತರ ಪ್ರದೇಶದಲ್ಲಿ, ನಂತರ ಗೋವಾದಲ್ಲಿ ಅವರು ಪಕ್ಷಾಂತರದ ಆಟ ಆಡಿದರು. ಬೇರೆ ಪಕ್ಷಗಳನ್ನು ಅಥವಾ ಅವುಗಳಲ್ಲಿನ ಶಾಸಕರ ಗುಂಪುಗಳನ್ನು, ಮಂತ್ರಿ ಸ್ಥಾನಗಳನ್ನು ಕೊಡುತ್ತೇವೆಂದು ಆಮಿಷವೊಡ್ಡಲು ಕೂಡಾ ಹಿಂಜರಿಯಬಾರದು ಎಂಬುದು ಬಿಜೆಪಿಯಲ್ಲಿನ ಪ್ರಬಲ ಅಭಿಪ್ರಾಯವಾಗಿತ್ತು. ಆರ್‌ಎಸ್‌ಎಸ್ ನ ನಿರ್ದೇಶನದಂತೆ ಇದು ನಡೆಯಿತು ಎಂಬುದು ಸ್ವಯಂವೇದ್ಯ. ಇದು ಅತ್ಯಂತ ನಗ್ನ ಸ್ವರೂಪದ ಸಮಯಸಾಧಕ ಆಟ.

ಹಲವು ಟಿಪ್ಪಣಿಕಾರರದ್ದೂ ಇದೇ ಭಾವನೆ. "ಯಾವುದೇ ಚುನಾವಣಾನಂತರದ ಮೈತ್ರಿ ಜನಗಳಿಗೆ ವಂಚನೆ ಬಗೆದಂತೆಯೇ" ಎಂದು ಹಿಂದೂಸ್ತಾನ್ ಟೈಮ್ಸ್(ಮೇ 10) ನಲ್ಲಿ ಬರೆಯುತ್ತಾ ಪಂಕಜ್ ವೋರಾ ಹೇಳುತ್ತಾರೆ, ಬಿಜೆಪಿಯ ನೀತಿ ಉಪದೇಶಕರು 'ಸ್ಥಿರತೆ'ಯ ವಾದವನ್ನು ಅವರು ಪ್ರಶ್ನಿಸುತ್ತಾರೆ. "ಕೇವಲ ಸಂಖ್ಯೆಯ ಆಟದ ಆಧಾರದಲ್ಲಿ ಯಾವುದೇ ಸಿದ್ಧಾಂತವಿಲ್ಲದೆ ರಚಿಸಿದ ಸರ್ಕಾರ ಎಷ್ಟು ದಿನ ಉಳಿಯುತ್ತದೆ, ಎಂತಹ ಸ್ಥಿರತೆ ನೀಡುತ್ತದೆ" ಎಂದು ಅವರು ಪ್ರಶ್ನಿಸುತ್ತಾರೆ.

ಎರಡು ದಿನಗಳ ಹಿಂದೆ ಅದೇ ಪತ್ರಿಕೆಯಲ್ಲಿ ಬರೆಯುತ್ತಾ ಅನಂತ ಸಹಾಯ್ "ಈ ಎಲ್ಲಾ ಅಬ್ಬರದಲ್ಲಿ ನಾವು ವೆಸ್ಟ್ ಮಿನಿಸ್ಟರ್ ಮಾದರಿಯ ಪ್ರಜಾಪ್ರಭುತ್ವದಲ್ಲಿನ ಮುಖ್ಯ ಅಂಶವೊಂದನ್ನು ಮರೆತಂತೆ ಕಾಣುತ್ತದೆ - ಒಂದು ಆಳುವ ಪಕ್ಷ ಅಥವಾ ಮೈತ್ರಿ ಕೂಟ ತಾನು ಈ ಹಿಂದೆ ಸಹಜವಾಗಿಯೇ ಪಡೆದಿದ್ದ ಕನಿಷ್ಟ ಶೇ 50 ಸ್ಥಾನಗಳನ್ನು ಒಂದು ಸಾರ್ವತ್ರಿಕ ಚುನಾವಣೆಯಲ್ಲಿ ಮತ್ತೆ ಪಡೆಯಲು ವಿಫಲವಾದರೆ ಅದನ್ನು ಅಧಿಕಾರದಿಂದ ಹೊರಕಳಿಸಲಾಗಿದೆ ಎಂದು ಬಗೆಯಬೇಕು ಎಂಬುದು ಈ ಅಂಶ" ಎನ್ನುತ್ತಾರೆ. ಎನ್‌ಡಿಎ ಏನಾದರೂ ಸರ್ಕಾರ ರಚಿಸಿದರೆ ಅದು ತನ್ನ ಹಳೆಯ ವಿರೋಧಿಗಳಲ್ಲಿ ಕೆಲವರು ಪಕ್ಷಾಂತರ ಮಾಡುವಂತೆ ಆಮಿಷವೊಡ್ಡುವುದರಿಂದ ಮಾತ್ರ ಸಾಧ್ಯ ಎನ್ನುತ್ತಾರೆ ಅವರು. ಹೀಗೆ ಜನಾದೇಶವನ್ನು ಸಂಪೂರ್ಣವಾಗಿ ಉಲ್ಲಂಘಿಸಿ ಬಿಜೆಪಿಗೆ ಮತ್ತೆ ಇಂತಹ ಆಟ ಆಡಲು ಬಿಡಬೇಕೇ ಎಂಬುದು ಈಗ ನಿರ್ಣಾಯಕ ಪ್ರಶ್ನೆ.

ಕುತರ್ಕ

ಅದೇ ವೇಳೆಗೆ ತಮ್ಮ ಬೇಳೆ ಬೇಯಿಸಿಕೊಳ್ಳಲು ಕೆಲವು ಕಾನೂನು ಮತ್ತು ಸಂವಿಧಾನ ಪಂಡಿತರೆನಿಸಿಕೊಳ್ಳುವವರು ಅತಿದೊಡ್ಡ ಪಕ್ಷ ಅಥವಾ ಕೂಟವನ್ನು, ಅದಕ್ಕೆ ಬಹುಮತವಿಲ್ಲದಿದ್ದರೂ ರಾಷ್ಟ್ರಪತಿಗಳು ಆಹ್ವಾನಿಸಬೇಕಾಗುತ್ತದೆ ಎನ್ನುತ್ತಾರೆ. ಇದೊಂದು ಟೊಳ್ಳು ಸಲಹೆ, ಅಷ್ಟೇ ಅಲ್ಲ ನಾಚಿಕೆಯಿಲ್ಲದ ಸಲಹೆ. ಏಕೆಂದರೆ ಅದು ಜನಾದೇಶಕ್ಕೆ ಸಂಪೂರ್ಣ ವಿರುದ್ಧವಾಗಿದೆ.

ಈ ಸರ್ಕಾರ ವಿರುದ್ಧವಾದ ಹಿಂದಿನ ನಡೆವಳಿಕೆಗಳೂ ಇವೆ. 1979 ರಲ್ಲಿ ಬಹುಮತ ಕಳಕೊಂಡ ನಂತರ ಮೊರಾರ್ಜಿ ದೇಸಾಯಿ ಸರ್ಕಾರ ರಚಿಸುತ್ತೇನೆ ಎಂದಾಗ ಆಗಿನ ರಾಷ್ಟ್ರಪತಿಗಳಾಗಿದ್ದ ಶ್ರೀ ಸಂಜೀವ ರೆಡ್ಡಿ ಅವರು ಬಹುಮತ ಕಳಕೊಂಡಿದ್ದಾರೆ ಎಂಬ ಆಧಾರದಲ್ಲಿ ಅದನ್ನು ತಿರಸ್ಕರಿಸಿದರು. ಆಗ ಜನತಾಪಕ್ಷ ಇನ್ನೂ ಲೋಕಸಭೆಯಲ್ಲಿ ಅತಿ ದೊಡ್ಡ ಪಕ್ಷವಾಗಿತ್ತು.

ಹತ್ತು ವರ್ಷಗಳ ನಂತರ 1989 ರಲ್ಲಿ ರಾಜೀವಗಾಂಧಿ ಬಹುಮತ ಕಳೆಕೊಂಡಾಗ ಲೋಕಸಭೆಯಲ್ಲಿ ಕಾಂಗ್ರೆಸ್ ಪಕ್ಷ ಅತಿದೊಡ್ಡ ಪಕ್ಷವಾಗಿದ್ದರೂ ಸರ್ಕಾರ ರಚಿಸುವ ದಾವೆ ಮುಂದಿಡಲಿಲ್ಲ. ಇತ್ತೀಚೆಗೆ ಜಮ್ಮು-ಕಾಶ್ಮೀರದಲ್ಲಿ ನ್ಯಾಷನಲ್ ಕಾನ್ಫರೆನ್ಸ್, ವಿಧಾನಸಭಾ ಚುನಾವಣೆಗಳಲ್ಲಿ ಬಹುಮತ ಕಳಕೊಂಡರೂ ಅತಿದೊಡ್ಡ ಪಕ್ಷವಾಗಿ ಉಳಿದಿತ್ತು. ಅದೂ ಸರ್ಕಾರ ರಚಿಸುವ ದಾವೆ ಸಲ್ಲಿಸಲಿಲ್ಲ. ಹೀಗೆ ಈ ಕುತರ್ಕಕ್ಕೆ ಆಧಾರಗಳೇನೂ ಇಲ್ಲ. ಆದರೆ ಅತ್ಯಂತ ನಿರ್ಣಾಯಕ ಅಂಶವೆಂದರೆ ಜನತೆ ಬಿಜೆಪಿಗೆ ಇಂತಹ ಯಾವ ಆಟಕ್ಕೂ ಅವಕಾಶವನ್ನೇ ಉಳಿಸಿಲ್ಲ. ಅದೀಗ ಲೋಕಸಭೆಯಲ್ಲಿ ಅತಿ ದೊಡ್ಡ ಪಕ್ಷವೂ ಅಲ್ಲ.

ಏನೇ ಆಗಲಿ ಮಾಧ್ಯಮಗಳು 'ಅಲಿಪ್ತರು' ಎನ್ನುವ ಪಕ್ಷಗಳೂ ತಮ್ಮ ದಾರಿ ನಿರ್ಧರಿಸುವಾಗ ಎರಡು ಬಾರಿಯಲ್ಲ, ಮೂರು ಬಾರಿಯಲ್ಲ ಹಲವು ಬಾರಿ ಯೋಚಿಸಬೇಕಾಗಿದೆ. ಚಂದ್ರಬಾಬು ನಾಯ್ಡು ರವರ ಸ್ಥಿತಿಯಿಂದ ಅವರು ಪಾಠ ಕಲಿಯಬೇಕು. ಒಂದು ಪ್ರದೇಶದಲ್ಲಿ ಅಥವಾ ರಾಜ್ಯದಲ್ಲಿ ಒಂದು ಪಕ್ಷಕ್ಕೆ ಅಪಾರ ಜನಪ್ರಿಯತೆ ಇದ್ದರೂ ಬಿಜೆಪಿಯೊಂದಿಗೆ ಕೈ ಜೋಡಿಸಿದರೆ ಅದೂ ಮಾಯವಾಗುತ್ತದೆ. ಜೆಡಿ(ಯು) ಮತ್ತಿತರ ಕೆಲವು ಎನ್‌ಡಿಎ ಪಕ್ಷಗಳೂ ತಮ್ಮ ಬೆಂಬಲ ನೆಲೆಯನ್ನು ಒಂದಿಲ್ಲೊಂದು ಮಟ್ಟದವರೆಗೆ ಕಳಕೊಂಡಿದ್ದಾರೆ. ಏಕೆಂದರೆ ನಮ್ಮ ರಾಷ್ಟ್ರೀಯ ಐಕ್ಯತೆಗೆ ಮತ್ತು ನಮ್ಮ ರಾಜಕೀಯ ವ್ಯವಸ್ಥೆ ಅಥವಾ ಇಡೀ ಸಮಾಜದ ಧರ್ಮನಿರಪೇಕ್ಷ ಸ್ವರೂಪಕ್ಕೆ ಯಾವುದೇ ಧಕ್ಕೆ ಬರುವುದನ್ನು ಈ ದೇಶ ಜನತೆ ಸಹಿಸುವುದಿಲ್ಲ ಎಂಬುದೀಗ ಬೆಳಕಿನಷ್ಟೇ ಸ್ಪಷ್ಟ. ಅದೇ ರೀತಿ ಬಿಜೆಪಿ ಮಾಡಿರುವಂತೆ ವಿಶ್ವಬ್ಯಾಂಕ್-ಐಎಂಎಫ್ ಹೇರಿದ ಜನ-ವಿರೋಧಿ, ರಾಷ್ಟ್ರ-ವಿರೋಧಿ ನೀತಿಗಳನ್ನು ಅನುಸರಿಸುತ್ತಾ ಈ ದೇಶದ ಜನಸಾಮಾನ್ಯರ ಮೇಲೆ ಅವರ್ಣನೀಯ ಸಂಕಟಗಳನ್ನು ಹೇರುವುದನ್ನು ಜನ ಸಹಿಸುವುದಿಲ್ಲ.

ಇದೇ ರೀತಿ ಇರಾಕ್ ಅಥವಾ ಪ್ಯಾಲೆಸ್ಟೇನ್ ವಿಷಯದಲ್ಲಿ ಕಂಡು ಬಂದಂತೆ ಬಿಜೆಪಿ ನೇತೃತ್ವದ ಸರ್ಕಾರದ ನಾಚಿಕೆಯಿಲ್ಲದ ಸಾಮ್ರಾಜ್ಯಶಾಹಿ-ಪರ ನಿಲುವು ಕೂಡಾ ನಮ್ಮ ಸ್ವಾತಂತ್ರ್ಯ ಪ್ರಿಯ, ಶಾಂತಿ ಪ್ರಿಯ ಜನತೆಗೆ ಅಸಹ್ಯಕರ ಎನಿಸಿದೆ. ಬಿಜೆಪಿ ನೇತೃತ್ವದ ಸರ್ಕಾರದ ವಿದೇಶಾಂಗ ನೀತಿ ವಿಶ್ವ ಸಮುದಾಯದಲ್ಲಿ ಭಾರತದ ಪ್ರತಿಷ್ಟೆಯನ್ನು ಇಳಿಸಿತಷ್ಟೇ ಎಂಬುದು ಜನತೆಗೆ ಮನವರಿಕೆಯಾಗಿರುವುದು ಸ್ಪಷ್ಟ.

ಎಡಪಕ್ಷಗಳ ನಿಲುವು ಸ್ಪಷ್ಟ

ಇಂತಹ ಒಂದು ಸನ್ನಿವೇಶದಲ್ಲಿ, ಎಡ, ಧರ್ಮನಿರಪೇಕ್ಷ ಹಾಗೂ ಪ್ರಜಾಪ್ರಭುತ್ವವಾದಿ ಪಕ್ಷಗಳು ಎದ್ದು ನಿಂತು ಬಿಜೆಪಿ ಮತ್ತು ಅದರ ಬಾಲಂಗೋಚಿಗಳ ವಿರುದ್ಧ ಒಂದು ಸಮಗ್ರ ಪ್ರಚಾರ-ಪ್ರಕ್ಷೋಭೆ ನಡೆಸಬೇಕು. ಜನಾದೇಶ ಸ್ಪಷ್ಟವಾಗಿ ಕೇಂದ್ರದಲ್ಲಿ ಒಂದು ಧರ್ಮನಿರಪೇಕ್ಷ ಸರ್ಕಾರದ ಪರವಾಗಿದೆ. ಯಾವುದೇ ಬಿಜೆಪಿಯೇತರ, ಎನ್‌ಡಿಯೇತರ ಪಕ್ಷ ಈ ಜನಾದೇಶದ ವಿರುದ್ಧ ಹೋಗಲು ಸಾಧ್ಯವಿಲ್ಲ.

ಕಾಂಗ್ರೆಸ್ ಮತ್ತು ಇತರ ಧರ್ಮನಿರಪೇಕ್ಷ ಪಕ್ಷಗಳ ನಡುವೆ ಆರ್ಥಿಕ ನೀತಿಗಳು ಮತ್ತು ಮತ್ತಿತರ ಕೆಲವು ಪ್ರಶ್ನೆಗಳಲ್ಲಿ ಭಿನ್ನಾಭಿಪ್ರಾಯ ಇದೆ ಎಂಬುದು ನಿಜ. ಆದರೆ ಯಾವುದೇ ಎರಡು ಪಕ್ಷಗಳ ನಡುವೆ ಭಿನ್ನಾಭಿಪ್ರಾಯಗಳು ಇದ್ದೇ ಇರುತ್ತವೆ. ಅವು ಸಹಜ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಆದರೆ ಮೂಲ ಅಂಶವೆಂದರೆ ರಾಜಕೀಯ ಇಚ್ಛಾಶಕ್ತಿ ಮತ್ತು ಚಾಕಚಕ್ಯತೆಯಿಂದ ಈ ಭಿನ್ನಾಭಿಪ್ರಾಯಗಳನ್ನು ತೃಪ್ತಿಕರ ರೀತಿಯಲ್ಲಿ ಪರಿಹರಿಸಬಹುದು. ಇದಕ್ಕಿರುವ ಒಂದೇ ಅವಶ್ಯಕತೆಯೆಂದರೆ ದೇಶದ ಮತ್ತು ಜನಸಾಮಾನ್ಯರ ಹಿತಾಸಕ್ತಿಗಳಿಗೆ ಉಳಿದೆಲ್ಲಾ ಸಂಗತಿಗಳಿಗಿಂತ ಪ್ರಾಧಾನ್ಯತೆ ನೀಡಬೇಕು. ಧರ್ಮನಿರಪೇಕ್ಷ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳು ತಮ್ಮ ಭಿನ್ನಾಭಿಪ್ರಾಯಗಳನ್ನು ಒಂದು ನೀತಿಬದ್ಧ ರೀತಿಯಲ್ಲಿ ಪರಿಹರಿಸಿಕೊಳ್ಳುತ್ತವೆ ಎಂದಷ್ಟೇ ಇಲ್ಲಿ ಭರವಸೆ ನೀಡಲು ಸಾಧ್ಯ. ಅದು ಎನ್‌ಡಿಎ ಪಕ್ಷಗಳು ಬಿಜೆಪಿಯೊಂದಿಗೆ ತಮ್ಮ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಂಡಂತೆ ಸಮಯಸಾಧಕ ರೀತಿಯಲ್ಲಿ ಅಲ್ಲ. ಅವರು ಗುಜರಾತಿನಲ್ಲಿ ಸಾವಿರಗಟ್ಟಲೆ ಮುಸ್ಲಿಮರನ್ನು ಸಂಹಾರ ಮಾಡುತ್ತಿದ್ದಾಗಲೂ ಅಥವಾ ದೇಶದ ವಿವಿಧ ಭಾಗಗಳಲ್ಲಿ ಅತಿ ಸಣ್ಣ ಅಲ್ಪಸಂಖ್ಯಾತರಾದ ಶಾಂತಿಪ್ರಿಯ ಕ್ರಿಶ್ಚಿಯನ್ನರ ಮೇಲೆ ಧಾಳಿ ನಡೆಯುತ್ತಿದ್ದಾಗಲೂ ಮೌನವಾಗಿದ್ದು ತಮ್ಮ ಅಧಿಕಾರದ ಗದ್ದುಗೆಗೆ ಅಂಟಿಕೊಂಡಿದ್ದರು.

ನಾವು ಸಿಪಿಐ(ಎಂ) ಮತ್ತು ಎಡಪಕ್ಷಗಳು ಸ್ವಾತಂತ್ರ್ಯಾನಂತರದ ಅತ್ಯುತ್ತಮ ಫಲಿತಾಂಶ ಪಡೆದಿದ್ದು ಪರಿಸ್ಥಿತಿಯ ಸೂಕ್ಷ್ಮತೆಗಳ ಮತ್ತು ಸಮಯದ ಅವಶ್ಯಕತೆಯ ಅರಿವನ್ನು ಹೊಂದಿದ್ದೇವೆ. ಎಂದಿನಂತೆ ಈಗಲೂ ನಾವು ಸದಾ ಜನರ ಪರವಾಗಿ ನಿಲ್ಲುತ್ತೇವೆ ಎಂದು ಭರವಸೆ ನೀಡಬಲ್ಲೆವು. ನಮ್ಮ ಸಮಾಜದ ಧರ್ಮನಿರಪೇಕ್ಷ ಸ್ವರೂಪವನ್ನು, ನಮ್ಮ ರಾಷ್ಟ್ರೀಯ ಐಕ್ಯತೆಯನ್ನು ಕಾಪಾಡಿಕೊಳ್ಳಲು ಸರ್ವ ಪ್ರಯತ್ನ ಮಾಡುತ್ತಲೇ ಸಾಮ್ರಾಜ್ಯಶಾಹಿ-ಪರ, ಐಎಂಎಫ್-ವಿಶ್ವಬ್ಯಾಂಕ್ ಹೇರಿಕೆಯ ನೀತಿಗಳ ಮೂಲಕ ಜನತೆಯ ಹಿತಾಸಕ್ತಿಗಳನ್ನು ಬಲಿಗೊಡಲು ಅಲ್ಲ ಎಂದಷ್ಟೇ ಈ ಘಟ್ಟದಲ್ಲಿ ನಾವು ಹೇಳಬಹುದು.

ಲೋಕಸಭೆ ವಿವಿಧ ಪಕ್ಷಗಳ ಸದಸ್ಯರು

ಕಾಂಗ್ರೆಸ್ ಮತ್ತು ಮಿತ್ರಪಕ್ಷಗಳು - 216	
ಕಾಂಗ್ರೆಸ್	145
ರಾಷ್ಟ್ರೀಯ ಜನತಾ ದಳ	20
ದ್ರಾವಿಡ ಮುನ್ನೇತ್ರ ಕಳಗಂ	16
ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷ	9
ಪಟ್ಟಾಳಿ ಮಕ್ಕಳ್ ಕಚ್ಚಿ(ಪಿ.ಎಂ.ಕೆ)	6
ತೆಲಂಗಾಣ ರಾಷ್ಟ್ರ ಸಮಿತಿ	5
ಮರುಮಾಲಾರ್ಚಿ ಡಿ.ಎಂ.ಕೆ	4
ಲೋಕ ಜನಶಕ್ತಿ ಪಕ್ಷ	3
ಜಮ್ಮು- ಕಾಶ್ಮೀರ ಪೀಪಲ್ಸ್ ಡೆಮೊಕ್ರಾಟಿಕ್ ಪಾರ್ಟಿ	1
ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ(ಎ)	1
ಮುಸ್ಲಿಂ ಲೀಗ್	1
ಬಿಜೆಪಿ ಮತ್ತು ಮಿತ್ರಪಕ್ಷಗಳು - 187	
ಭಾರತೀಯ ಜನತಾ ಪಾರ್ಟಿ	138
ಶಿವಸೇನಾ	12
ಬಿಜು ಜನತಾ ದಳ	11
ಶಿರೋಮಣಿ ಅಕಾಲಿ ದಳ	8
ಜನತಾ ದಳ(ಯು)	8
ತೆಲುಗು ದೇಶಂ ಪಕ್ಷ	5
ರಾಷ್ಟ್ರೀಯವಾದಿ ತೃಣಮೂಲ ಕಾಂಗ್ರೆಸ್	2
ನಾಗಾಲ್ಯಾಂಡ್ ಪೀಪಲ್ಸ್ ಫ್ರಂಟ್	1
ಮಿಝೋ ನ್ಯಾಶನಲ್ ಫ್ರಂಟ್	1
ಇಂಡಿಯನ್ ಫೆಡೆರಲ್ ಡೆಮೊಕ್ರಟಿಕ್ ಪಾರ್ಟಿ	1
ಎಡಪಕ್ಷಗಳು - 62	
ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ(ಮಾರ್ಕ್ಸ್‌ವಾದಿ)	44.
ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ	10
ಆಲ್ ಇಂಡಿಯಾ ಫಾರ್ವರ್ಡ್ ಬ್ಲಾಕ್	3
ರೆವೊಲ್ಯೂಷನರಿ ಸೋಶ್ಯಲಿಸ್ಟ್ ಪಾರ್ಟಿ	3
ಕೇರಳ ಕಾಂಗ್ರೆಸ್(ಜೋಸೆಫ್)	1
ಇತರೆ - 75	
ಸಮಾಜವಾದಿ ಪಕ್ಷ	36
ಬಹುಜನ ಸಮಾಜ ಪಾರ್ಟಿ	19
ಜನತಾ ದಳ(ಎಸ್)	4
ನ್ಯಾಷನಲ್ ಕಾನ್ಫರೆನ್ಸ್	2
ರಾಷ್ಟ್ರೀಯ ಲೋಕ ದಳ	3
ಅಸ್ಸಾಂ ಗಣಪರಿಶತ್	2
ಭಾರತೀಯ ನವಶಕ್ತಿ ಪಾರ್ಟಿ	1
ಲೋಕತಾಂತ್ರಿಕ ಜನ ಸಮಾತಾ ಪಾರ್ಟಿ	1
ಮಜ್ಲೀಸ್-ಎ- ಇತ್ತಾಹದುಲ್ ಮುಸ್ಲಿಮೀನ್	1
ನ್ಯಾಷನಲ್ ಲೋಕತಾಂತ್ರಿಕ ಪಕ್ಷ	1
ಸಿಕ್ಕಿಮ್ ಡೆಮೊಕ್ರಟಿಕ್ ಫ್ರಂಟ್	1
ಸಮಾಜವಾದಿ ಜನತಾ ಪಾರ್ಟಿ(ರಾ)	1
ಸ್ವತಂತ್ರರು	3
ಒಟ್ಟು	539

ಶೋಷಣೆಯಿಂದ ಮುಕ್ತವಾದ ಸಮಾಜವನ್ನು ರಚಿಸುವುದು ಎಡಪಕ್ಷಗಳ ಗುರಿ. ಈ ಗುರಿ ಸಾಧನೆಯಾಗಬೇಕಾದರೆ ಇಂದಿನ ಬಂಡವಾಳಶಾಹಿ ಭೂಮಾಲಕ ಪ್ರಭುತ್ವವನ್ನು ಕಿತ್ತು ಹಾಕಲೇಬೇಕು. ಇದೊಂದು ಕ್ಲಿಷ್ಟವಾದ ಮತ್ತು ದೀರ್ಘಕಾಲಿಕ ಪ್ರಕ್ರಿಯೆ. ಅಲ್ಲಿಯವರೆಗೆ ಮಧ್ಯಂತರ ಘೋಷಣೆಗಳನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಇಂದಿನ ಬಂಡವಾಳಶಾಹಿ ಸಂಸದೀಯ ಪ್ರಜಾಪ್ರಭುತ್ವದ ಸಂಸ್ಥೆಗಳನ್ನು ಬಳಸಿಕೊಳ್ಳಬೇಕಾಗುತ್ತದೆ. ಚುನಾವಣೆಗಳಲ್ಲಿ ಸ್ಪರ್ಧಿಸಬೇಕಾಗುತ್ತದೆ. ಸರ್ಕಾರಗಳನ್ನು ನಡೆಸಬೇಕಾಗುತ್ತದೆ. ಆ ಮೂಲಕ ಎಲ್ಲಾ ಇತಿಮಿತಿಗಳ ನಡುವೆಯೂ ಜನತೆಗೆ ತಾತ್ಕಾಲಿಕ ಪರಿಹಾರವನ್ನು ಒದಗಿಸಲು ಹಾಗೂ ಪರ್ಯಾಯ ಧೋರಣೆಗಳನ್ನು ಜನರ ಮುಂದಿಡಲು ಪ್ರಯತ್ನಿಸಬೇಕಾಗುತ್ತದೆ. ಈ ದೃಷ್ಟಿಯಿಂದ 2004 ರ ಲೋಕಸಭಾ ಚುನಾವಣೆಯಲ್ಲಿ ಎಡಪಕ್ಷಗಳ ಸಾಧನೆ ಶ್ಲಾಘನೀಯವಾಗಿದೆ.

ಮೂಲಕ ಎಡಪಕ್ಷಗಳು ಇತಿಹಾಸ ನಿರ್ಮಿಸಿವೆ. ಕಾಂಗ್ರೆಸ್ ತಾನು ಸ್ಪರ್ಧಿಸಿದ ಎಲ್ಲಾ 17 ಸ್ಥಾನಗಳಲ್ಲಿ ಸೋತು ತೀವ್ರ ಆಘಾತಕ್ಕೆ ಒಳಗಾಗಿದೆ.

ಕಾಂಗ್ರೆಸ್ ನೇತೃತ್ವದ ಯುಡಿಎಫ್‌ನಲ್ಲಿ ಘಟಕ ಪಕ್ಷವಾಗಿರುವ ಮುಸ್ಲಿಂಲೀಗ್ ಒಂದು ಸ್ಥಾನವನ್ನು ಉಳಿಸಿಕೊಂಡಿದೆಯಾದರೂ ಮಂಜೇರಿ ಎಂಬ ಅದರ ಅತ್ಯಂತ ಪ್ರಮುಖ ಕ್ಷೇತ್ರದಲ್ಲಿ ಹೀನಾಯ ಸೋಲು ಅನುಭವಿಸಿದೆ. ಹಿಂದೆ ಕಾಂಗ್ರೆಸ್ ನೇತೃತ್ವದ ಯುಡಿಎಫ್‌ನಲ್ಲಿದ್ದು ನಂತರ ಇಂಡಿಯನ್ ಫೆಡರಲ್ ಡೆಮಾಕ್ರಾಟಿಕ್ ಪಾರ್ಟಿ ಎಂಬ ಪಕ್ಷವನ್ನು ಕಟ್ಟಿಕೊಂಡು ಎನ್‌ಡಿಎ ಮಂತ್ರಿಮಂಡಳದಲ್ಲಿ ಕಾನೂನು ಖಾತೆ ರಾಜ್ಯ ಸಚಿವನಾಗಿದ್ದ ಪಿ.ಸಿ.ಥಾಮಸ್ ಈ ಬಾರಿ ಕೇವಲ 598 ಮತಗಳ ಅಂತರದಿಂದ ಗೆದ್ದಿದ್ದಾರೆ. ಆದರೆ

ಅಲ್ಪಸಂಖ್ಯಾತರು ಮೊತ್ತಮೊದಲಬಾರಿಗೆ ದೊಡ್ಡ ಸಂಖ್ಯೆಯಲ್ಲಿ ಎಡಪಕ್ಷಗಳನ್ನು ಬೆಂಬಲಿಸಿದ್ದು ಎದ್ದುಕಾಣುತ್ತದೆ. ಎಡಪಕ್ಷಗಳು ಮಾತ್ರ ಕೋಮುವಾದದೊಂದಿಗೆ ಎಳ್ಳಷ್ಟೂ ರಾಜಿ ಮಾಡಿಕೊಳ್ಳದೆ ಹೋರಾಡುತ್ತವೆ ಎಂಬುದನ್ನು ಹಾಗೂ ಎಡಪಕ್ಷಗಳು ಮಾತ್ರ ಜನರ ಪರವಾದ ಆರ್ಥಿಕ ನೀತಿಗಳಿಗೆ ಬದ್ಧವಾಗಿವೆ ಎಂಬುದನ್ನು ಕೇರಳದ ಜನತೆ ಹೆಚ್ಚು ಹೆಚ್ಚು ಮನಗಾಣುತ್ತಿರುವುದು ಇದರಿಂದ ಸ್ಪಷ್ಟವಾಗಿದೆ.

ಕೇರಳದ ಮತದಾರರು ಪ್ರಬುದ್ಧರು. ಗರಿಷ್ಠ ಸಾಕ್ಷರತೆಯನ್ನು ಸಾಧಿಸಿದ ರಾಜ್ಯವದು. ಆಂಟನಿ ಸರ್ಕಾರದ ದುರಾಡಳಿತದಿಂದ ರಾಜ್ಯದ ಜನತೆ ಬೇಸತ್ತು ಹೋಗಿದ್ದರು ಎನ್ನುವುದರಲ್ಲಿ ಸಂಶಯವಿಲ್ಲ. ಇದೇ ಮತದಾರರು 3 ವರ್ಷಗಳ

ಎಡಪಕ್ಷಗಳ ಅಭೂತಪೂರ್ವ

ಸಿಪಿಐ(ಎಂ) ಮೂರನೇ ಅತಿ

ಮೇ 13 ರ ಸಂಜೆ ಲೋಕಸಭಾ ಚುನಾವಣೆಗಳ ಫಲಿತಾಂಶಗಳು ಪ್ರಕಟವಾಗುತ್ತಿದ್ದಂತೆ, ನವದೆಹಲಿಯ ಸಿಪಿಐ(ಎಂ) ಕೇಂದ್ರ ಕಛೇರಿ ಎ.ಕೆ.ಜಿ. ಭವನ್ ಆವರಣದಲ್ಲಿ ಸಂಭ್ರಮದ ವಾತಾವರಣ ನಿರ್ಮಾಣವಾಯಿತು.

ಪಕ್ಷದ ಮತ್ತು ಸಾಮೂಹಿಕ ಸಂಘಟನೆಗಳ ನೂರಾರು ಕಾರ್ಯಕರ್ತರು ಪಕ್ಷದ ದೊಡ್ಡ ದೊಡ್ಡ ಬಾವುಟಗಳನ್ನು ಕೈಯಲ್ಲಿ ಹಿಡಿದುಕೊಂಡು ಸಿಪಿಐ(ಎಂ) ಜಿಂದಾಬಾದ್' ಘೋಷಣೆ ಕೂಗುತ್ತಾ ಬಂದು ಸೇರಿಕೊಳ್ಳುತ್ತಿದ್ದರು. **'ಇದೊಂದು ಐತಿಹಾಸಿಕ ಆರಂಭ'** ಎಂಬ ಅವರ ಇನ್ನೊಂದು ಘೋಷಣೆ ತುಂಬಾ ಅರ್ಥಪೂರ್ಣವಾಗಿತ್ತು. ಕೋಮುವಾದಿ ಶಕ್ತಿಗಳ ನಿರ್ಣಾಯಕ ಸೋಲನ್ನು ಸ್ವಾಗತಿಸುವ ಘೋಷಣೆಗಳೂ ಕೇಳಿಬರುತ್ತಿದ್ದವು. ಸಿಪಿಐ(ಎಂ)ನ ಮತ್ತು ಎಡಪಕ್ಷಗಳ ಅಭೂತಪೂರ್ವ ಸಾಧನೆಯ ಸಂತಸವನ್ನು ಹಂಚಿಕೊಳ್ಳಲು ಅವರೆಲ್ಲರೂ ಎಕೆಜಿ ಭವನದತ್ತ ಹೆಜ್ಜೆ ಹಾಕಿದ್ದರು.

ಪಶ್ಚಿಮ ಬಂಗಾಳದಲ್ಲಿ ಜನತೆಯ ಉತ್ಸಾಹಕ್ಕೆ ಮೇರೆಯೇ ಇರಲಿಲ್ಲ. ಕೆಂಬಾವುಟಗಳನ್ನು ಬೀಸುತ್ತಾ, ಸಿಡಿಮದ್ದುಗಳನ್ನು ಸಿಡಿಸುತ್ತಾ, ಕುಣಿದು ಕುಪ್ಪಳಿಸುವ ಜನ ಮಧ್ಯರಾತ್ರಿಯವರೆಗೂ ವಿಜಯೋತ್ಸವ ಆಚರಿಸಿದರು. ಕೋಮುವಾದಿ ಬಿಜೆಪಿ ಮತ್ತು ಅದರ ಮಿತ್ರಪಕ್ಷ ತೃಣಮೂಲ ಕಾಂಗ್ರೆಸ್ಸಿನ ಹೀನಾಯ ಸೋಲನ್ನು ಅವರು ಹರ್ಷೋದ್ಗಾರಗಳಿಂದ ಸ್ವಾಗತಿಸುತ್ತಿದ್ದರು. ಎಡರಂಗದ ಐತಿಹಾಸಿಕ ವಿಜಯಕ್ಕಾಗಿ ಜನತೆಯನ್ನು ಅಭಿನಂದಿಸುತ್ತಾ ಅವರು ಜಯಕಾರ ಹಾಕುತ್ತಿದ್ದರು.

ಕೇರಳದ ಚುನಾವಣಾ ಫಲಿತಾಂಶಗಳು ಆಡಳಿತರೂಢ ಕಾಂಗ್ರೆಸ್ ಪಕ್ಷಕ್ಕೆ ಚೇತರಿಸಿಕೊಳ್ಳಲಾಗದ ಆಘಾತವನ್ನು ಉಂಟುಮಾಡುತ್ತಿದ್ದಂತೆ ಕೇರಳದ ಪ್ರಬುದ್ಧ ಮತದಾರರು ಎಡಪ್ರಜಾಸತ್ತಾತ್ಮಕರಂಗದ ಪ್ರಚಂಡ ಜಯಭೇರಿಯನ್ನು ಎಲ್ಲೆಡೆ ಸಂತಸದಿಂದ ಆಚರಿಸುತ್ತಿರುವುದು ಕಂಡುಬಂತು. ಅದರಂತೆಯೇ ಅಪಾರ ತ್ಯಾಗ ಬಲಿದಾನಗಳನ್ನು ಮಾಡುತ್ತಾ ತ್ರಿಪುರಾದ ಎರಡೂ ಸ್ಥಾನಗಳನ್ನು ಸತತವಾಗಿ ಗೆಲ್ಲುತ್ತಾ ಬಂದಿರುವ ಸಿಪಿಐ(ಎಂ)ನ ಕಾರ್ಯಕರ್ತರು ರಾಜ್ಯಾದ್ಯಂತ ಸಡಗರದ ವಿಜಯೋತ್ಸವವನ್ನು ಆಚರಿಸಿದರು.

2004 ರ ಲೋಕಸಭಾ ಚುನಾವಣೆಯು ಹಲವು ಕಾರಣಗಳಿಗಾಗಿ ಒಂದು ಐತಿಹಾಸಿಕ ಚುನಾವಣೆಯಾಗಿದೆ. ತಾನೇ ಸೃಷ್ಟಿಸಿದ ಕೃತಕ ಅಬ್ಬರದ ಅಲೆಯಲ್ಲಿ ಹಾರಾಡುತ್ತಿದ್ದ ಕೋಮುವಾದಿ ಬಿಜೆಪಿಯನ್ನು ನೆಲಕ್ಕಪ್ಪಳಿಸಿದ ಚುನಾವಣೆ ಇದು. ಕಾಂಗ್ರೆಸ್ ಪಕ್ಷಕ್ಕೆ ಅದರ ಜನವಿರೋಧಿ ಆರ್ಥಿಕ ನೀತಿಗಳನ್ನು ಪುನರ್‌ಪರಿಶೀಲಿಸಿ ತಿದ್ದಿಕೊಳ್ಳಲು ಇನ್ನೊಂದು ಅವಕಾಶವನ್ನು ಕಲ್ಪಿಸಿದ ಚುನಾವಣೆ ಇದು. ಎಲ್ಲಕ್ಕೂ ಮುಖ್ಯವಾಗಿ ಲೋಕಸಭೆಯಲ್ಲಿ ತಮ್ಮ ಸ್ಥಾನಗಳನ್ನು ಗಣನೀಯವಾಗಿ ಹೆಚ್ಚಿಸಿಕೊಂಡು ಒಂದು ಜಾತ್ಯಾತೀತ ಸರ್ಕಾರವನ್ನು ಅಧಿಕಾರಕ್ಕೆ ತರುವಲ್ಲಿ ಎಡಪಕ್ಷಗಳು ಒಂದು ನಿರ್ಣಾಯಕ ಪಾತ್ರವನ್ನು ನಿರ್ವಹಿಸುವಂತೆ ಮಾಡಿದ ಚುನಾವಣೆ ಇದಾಗಿದೆ.

ವಿಸರ್ಜಿತ ಲೋಕಸಭೆಯಲ್ಲಿ 43 ಸದಸ್ಯರನ್ನು ಹೊಂದಿದ್ದ ಎಡಪಕ್ಷಗಳು ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ತಮ್ಮ ಬಲವನ್ನು ಗಣನೀಯವಾಗಿ ಹೆಚ್ಚಿಸಿಕೊಂಡಿವೆ. ತ್ರಿಪುರದಲ್ಲಿ ಇರುವ ಎರಡೂ ಸ್ಥಾನಗಳನ್ನು ಉಳಿಸಿಕೊಂಡಿವೆ. ತಮಿಳುನಾಡು, ಆಂಧ್ರಪ್ರದೇಶ, ಜಾರ್ಖಂಡ್‌ನಲ್ಲಿಯೂ ತಮ್ಮ ಬಲವರ್ಧಿಸಿಕೊಳ್ಳುವಲ್ಲಿ ಯಶಸ್ವಿಯಾಗಿವೆ. ಹದಿನಾಲ್ಕನೇ ಲೋಕಸಭೆಯಲ್ಲಿ ಒಟ್ಟು 63 ಸ್ಥಾನಗಳನ್ನು ಗೆದ್ದಿರುವ ಎಡಪಕ್ಷಗಳ ಈ ಸಾಧನೆ ಸ್ವಾತಂತ್ರ್ಯಾನಂತರದ ಇತಿಹಾಸದಲ್ಲೇ ಒಂದು ಅಭೂತ ಪೂರ್ವ ಚುನಾವಣಾ ದಾಖಲೆಯಾಗಿದೆ.

ಕೇರಳದಲ್ಲಿ ಕಾಂಗ್ರೆಸ್ಸಿಗೆ ಮರ್ಮಾಘಾತ:

ಕೇರಳದ ಒಟ್ಟು 20 ಲೋಕಸಭಾ ಸ್ಥಾನಗಳ ಪೈಕಿ 18 ಸ್ಥಾನಗಳನ್ನು ಗೆಲ್ಲುವ

ಆತನೊಂದಿಗೆ ಕೇಂದ್ರದಲ್ಲಿ ರಕ್ಷಣಾ ಖಾತೆ ರಾಜ್ಯ ಸಚಿವನಾಗಿದ್ದ ಓ.ರಾಜಗೋಪಾಲ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿದ್ದಾರೆ. ಇದರೊಂದಿಗೆ ಕೇರಳದಲ್ಲಿ ಒಂದು ಖಾತೆ ತೆರೆಯುವ ಬಿಜೆಪಿಯ ಕನಸು ನುಚ್ಚುನೂರಾಗಿದೆ.

ಕೇರಳದ ಸಿಪಿಐ(ಎಂ) ನೇತೃತ್ವದ ಎಡಪ್ರಜಾಸತ್ತಾತ್ಮಕರಂಗ (ಎಲ್‌ಡಿಎಫ್)ವು ಎಲ್ಲಾ 20 ಸ್ಥಾನಗಳಿಗೆ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು. ಸಿಪಿಐ(ಎಂ) ಒಟ್ಟು 14 ಸ್ಥಾನಗಳಲ್ಲಿ, ಸಿಪಿಐ ಒಟ್ಟು 4 ಸ್ಥಾನಗಳಲ್ಲಿ, ಜನತಾದಳ (ಜಾತ್ಯಾತೀತ) ಮತ್ತು ಕೇರಳ ಕಾಂಗ್ರೆಸ್(ಜೆ) ತಲಾ ಒಂದೊಂದು ಸ್ಥಾನಗಳಲ್ಲಿ ಸ್ಪರ್ಧಿಸಿದ್ದವು. ಸಿಪಿಐ(ಎಂ) 13 ಸ್ಥಾನಗಳಲ್ಲಿ ಜಯಗಳಿಸಿ ಒಂದು ಸ್ಥಾನವನ್ನು 598 ಅಲ್ಪಮತಗಳ ಅಂತರದಿಂದ ಸೋಲು ಅನುಭವಿಸಿದೆ. ಸಿಪಿಐ ಸ್ಪರ್ಧಿಸಿದ್ದ ನಾಲ್ಕು ಸ್ಥಾನಗಳ ಪೈಕಿ 3 ಸ್ಥಾನಗಳನ್ನು ಗೆದ್ದು ಒಂದರಲ್ಲಿ ಸೋತಿದೆ. ಒಟ್ಟಾರೆಯಾಗಿ ಎಲ್‌ಡಿಎಫ್ 20 ಸ್ಥಾನಗಳಲ್ಲಿ 18ನ್ನು ಗೆದ್ದು ಚರಿತ್ರಾರ್ಹ ಸಾಧನೆಗೈದಿದೆ. ಎಲ್‌ಡಿಎಫ್ ಜೊತೆಗಿರುವ ಜೆಡಿ(ಎಸ್) ಮತ್ತು ಕೆ.ಸಿ(ಜೆ) ಅಭ್ಯರ್ಥಿಗಳ ಗೆಲುವು ಸಹ ಗಮನಾರ್ಹವಾಗಿದೆ.

ಕೇರಳದ ಈ ಫಲಿತಾಂಶವು ಇಡೀ ದೇಶದ ಗಮನ ಎಡಪಕ್ಷಗಳತ್ತ ತಿರುಗುವಂತೆ ಮಾಡಿದೆ. ಎಡಪಕ್ಷಗಳು ಒಂದು ನೈಜ ಜಾತ್ಯಾತೀತ ಪರ್ಯಾಯವಾಗಿ ಮೂಡಿಬರುತ್ತಿರುವುದು ಗೋಚರಿಸುವಂತಾಗಿದೆ. **ಎಡಪಕ್ಷಗಳು ಮತ್ತು ಕಾಂಗ್ರೆಸ್ ನಡುವೆ ಆಯ್ಕೆ ಮಾಡುವುದು ಬಂದಾಗ ಜನತೆ ಎಡಪಕ್ಷಗಳ ಮೇಲೆ ವಿಶ್ವಾಸವಿಡುತ್ತಾರೆ ಎಂಬುದನ್ನು ಕೇರಳದ ಫಲಿತಾಂಶಗಳು ಸ್ಪಷ್ಟಪಡಿಸಿವೆ.** ಧಾರ್ಮಿಕ

ಹಿಂದೆ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ 100 ಕ್ಕೂ ಹೆಚ್ಚು ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ಸಿಗೆ ಬಹುಮತ ನೀಡಿದ್ದರು. ಆದರೆ 3 ವರ್ಷಗಳ ನಂತರ ನಡೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಒಂದು ಸ್ಥಾನವನ್ನು ಸಹ ಗೆಲ್ಲಲಾಗಲಿಲ್ಲ. ಆಂಟನಿ ಸರ್ಕಾರದ ಉದಾರೀಕರಣ, ಖಾಸಗೀಕರಣ ನೀತಿಗಳ ವಿರುದ್ಧ ಜನತೆಯ ಆಕ್ರೋಶ ಈ ಚುನಾವಣಾ ಫಲಿತಾಂಶದಲ್ಲಿ



14ನೇ ಲೋಕಸಭೆಯಲ್ಲಿ ಎಡಪಕ್ಷಗಳ ಬಲಾಬಲ

	ಸ್ಪರ್ಧಿಸಿದ್ದ ಸ್ಥಾನಗಳು	ಗೆದ್ದ ಸ್ಥಾನಗಳು
ಸಿಪಿಐ(ಎಂ)	70	44
ಸಿಪಿಐ	34	10
ಎಐಎಫ್‌ಬಿ	3	3
ಆರ್‌ಎಸ್‌ಪಿ	3	3
	110	60

ಕೇರಳದಲ್ಲಿ ಗೆದ್ದಿರುವ ಜೆಡಿ(ಎಸ್)ನ ಒಬ್ಬ ಅಭ್ಯರ್ಥಿ ಮತ್ತು ಕೆ.ಸಿ(ಜೆ)ಯ ಒಬ್ಬ ಅಭ್ಯರ್ಥಿ ಕೇರಳದ ಎಡ ಪ್ರಜಾಸತ್ತಾತ್ಮಕ ರಂಗದ ಭಾಗವಾಗಿರುತ್ತಾರೆ.

ಸಿಪಿಐ(ಎಂ) ಅಭ್ಯರ್ಥಿಗಳ ಪ್ರಚಂಡ ಜಯ

44 ಗೆದ್ದ ಸೀಟುಗಳಲ್ಲಿ 32 ಸೀಟುಗಳ ಸಿಪಿಐ(ಎಂ) ಅಭ್ಯರ್ಥಿಗಳು, ಸಮೀಪದ ಎರಡು ಸ್ಪರ್ಧಿಗಳು ಪಡೆದ ಒಟ್ಟು ಮತಗಳಿಗಿಂತ ಹೆಚ್ಚು ಮತ ಗಳಿಸಿದ್ದಾರೆ. ಅಂದರೆ ಯಾವುದೇ ರೀತಿಯ ವಿರೋಧಿಗಳ ಒಕ್ಕೂಟ ಸೋಲಿಸಲು ಸಾಧ್ಯವಿಲ್ಲದ ಜಯ.

- ಐದು ಸ್ಥಾನಗಳಲ್ಲಿ ಮೊದಲ ಬಾರಿಗೆ ಜಯ
- 26 ಸೀಟುಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಮತಗಳ ಅಂತರದಲ್ಲಿ ಗೆದ್ದಿದ್ದಾರೆ.
- 11 ಸೀಟುಗಳಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಅಂತರದಿಂದ ಗೆದ್ದಿದ್ದಾರೆ.
- 23 ಸೀಟುಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚು ಮತಗಳಿಸಿ ಸ್ಪಷ್ಟ ಜಯಗಳಿಸಿದೆ.
- ಪಶ್ಚಿಮ ಬಂಗಾಳದ ಆರಾಮಬಾಗ್‌ನಿಂದ ಅನಿಲ್‌ಬಸು ಆರು ಲಕ್ಷದ ಮತಗಳ ಅಂತರದಿಂದ ಗೆದ್ದಿದ್ದಾರೆ! ಇದು ದೇಶದಲ್ಲೇ ಅತಿ ದೊಡ್ಡ ವಿಜಯದ ಅಂತರ.
- ಸಿಪಿಐ(ಎಂ) ಸ್ಪರ್ಧಿಸಿದ ಒಟ್ಟು 70 ಸ್ಥಾನಗಳಲ್ಲಿ 44 ಸ್ಥಾನಗಳನ್ನು ಗೆದ್ದುಕೊಂಡಿದೆ.
- 27 ಸ್ಥಾನಗಳಲ್ಲಿ ಎರಡನೇ ಸ್ಥಾನ ಪಡೆದಿದೆ.

ಇತರ ಎಡಪಕ್ಷಗಳ ಗೆಲುವು

- ಸಿಪಿಐ 34 ಸ್ಥಾನಗಳಲ್ಲಿ ಸ್ಪರ್ಧಿಸಿ 10 ಸೀಟುಗಳನ್ನು ಗೆದ್ದುಕೊಂಡಿದೆ. (ಪಶ್ಚಿಮ ಬಂಗಾಳ-3, ಕೇರಳ-3, ತಮಿಳುನಾಡು-2, ಆಂಧ್ರ ಪ್ರದೇಶ/ಜಾರ್ಖಂಡ್-ತಲಾ1)
- ಫಾರ್ವರ್ಡ್ ಬ್ಲಾಕ್ 10 ಸೀಟುಗಳಲ್ಲಿ ಸ್ಪರ್ಧಿಸಿ 3 ಸೀಟುಗಳನ್ನು ಗೆದ್ದುಕೊಂಡಿದೆ (ಪಶ್ಚಿಮ ಬಂಗಾಳ- 3)
- ಆರ್.ಎಸ್.ಪಿ 17 ಸ್ಥಾನಗಳಲ್ಲಿ ಸ್ಪರ್ಧಿಸಿ 3 ಸೀಟುಗಳನ್ನು ಗೆದ್ದುಕೊಂಡಿದೆ (ಪಶ್ಚಿಮ ಬಂಗಾಳ-3)

ನ್ನುಕಾಣುತ್ತದೆ. ವಡಕಾನ್‌ಚೇರಿ ವಿಧಾನಸಭಾ ...ತ್ರದಲ್ಲಿ ನಡೆದ ಉಪಚುನಾವಣೆಯಲ್ಲಿ ಸ್ಪರ್ಧಿಸಿದ್ದ ...ರಿಯ ಕಾಂಗ್ರೆಸ್ಸಿಗ ಕೆ.ಕರುಣಾಕರನ್ ಅವರ ಮಗ ...ಬರಳೀಧರನ್‌ನನ್ನು ಸಹ ಸೋಲಿಸಿ 5,715 ...ತಗಳ ಅಂತರದಿಂದ ಸಿಪಿಐ(ಎಂ)ನ ...ಸಿ.ಮೊಯ್ದಿನ್ ಅವರನ್ನು ಜನ ಗೆಲ್ಲಿಸಿದ್ದಾರೆ. ...ನ್ನಾದರೂ ಕಾಂಗ್ರೆಸ್ ಪಾಠ ಕಲಿಯಬೇಕು. ...ನಮೋಹನ್ ಸಿಂಗ್‌ರಂತಹ ಕಾಂಗ್ರೆಸ್ಸಿಗರು ...ನ್ನೂ ವಿಶ್ವಬ್ಯಾಂಕ್ ವಕ್ತಾರರಂತೆ ಹೇಳಿಕೆಗಳನ್ನು ...ೀಡುತ್ತಿರುವುದು ದೇಶಕ್ಕೂ, ಅವರ ಕಾಂಗ್ರೆಸ್ ...ಕ್ಷಕ್ಕೂ ಹಿತಕರವಾಗಲಾರದು.

...ಶ್ಚಿಮ ಬಂಗಾಳದಲ್ಲಿ ಇತಿಹಾಸ ...ರ್ಮಾಣ:

ಕಳೆದ 27 ವರ್ಷಗಳಿಂದ ದೇಶಕ್ಕೆ ಒಂದು

...ಯಭೇರಿ

...ದ್ದ ಪಕ್ಷ

ನಿತ್ಯಾನಂದಸ್ವಾಮಿ

ಪರ್ಯಾಯ ದಾರಿಯನ್ನು ತೋರಿಸುತ್ತಾ ಬಂದಿರುವ ಸಿಪಿಐ(ಎಂ) ನೇತೃತ್ವದ ಎಡರಂಗ ಮತ್ತೊಮ್ಮೆ ಇತಿಹಾಸ ನಿರ್ಮಿಸಿದೆ.

ಪಶ್ಚಿಮ ಬಂಗಾಳದಲ್ಲಿ ಒಟ್ಟು 42 ಲೋಕಸಭಾ ಸ್ಥಾನಗಳ ಪೈಕಿ ಎಡರಂಗವು 35 ಸ್ಥಾನಗಳನ್ನು ಗೆಲ್ಲುವ ಮೂಲಕ ತನ್ನ ಇದುವರೆಗಿನ ಚುನಾವಣಾ ದಾಖಲೆಗಳನ್ನು ಮೀರಿ ವಿರೋಧ ಪಕ್ಷಗಳನ್ನು ಧೂಳಿಪಟ ಮಾಡಿದೆ. ಸಿಪಿಐ(ಎಂ)ನ 3 ಸ್ಥಾನಗಳಲ್ಲಿ ಕಾಂಗ್ರೆಸ್ ಗೆಲ್ಲು ಮೂಲಕ ತನ್ನ ಸ್ಥಾನಗಳನ್ನು 3 ರಿಂದ 6 ಕ್ಕೆ ಹೆಚ್ಚಿಸಿಕೊಂಡಿದೆ. ಆದರೆ ಸಿಪಿಐ(ಎಂ) ತೃಣಮೂಲ ಕಾಂಗ್ರೆಸ್ಸಿನ 6 ಸ್ಥಾನಗಳನ್ನು ಮತ್ತು ಬಿಜೆಪಿಯ 2 ಸ್ಥಾನಗಳನ್ನು ಕಿತ್ತುಕೊಂಡಿದೆ. AIFB ತೃಣಮೂಲ ಕಾಂಗ್ರೆಸ್ಸಿನ ಒಂದು ಸ್ಥಾನವನ್ನು ಕಿತ್ತುಕೊಂಡಿದೆ. ಮಮತಾ ಬ್ಯಾನರ್ಜಿ ಕೊಲ್ಕತ್ತಾ ದಕ್ಷಿಣ ಸ್ಥಾನವನ್ನು ಉಳಿಸಿಕೊಂಡಿದ್ದರೂ ಮತಗಳ ಅಂತರ 1999ಕ್ಕಿಂತ ಶೇಕಡಾ 55 ರಷ್ಟು ಕಡಿಮೆಯಾಗಿರುವುದು ಗಮನಾರ್ಹವಾಗಿದೆ. ವಿಸರ್ಜಿತ ಲೋಕಸಭೆಯಲ್ಲಿ 9 ಸ್ಥಾನಗಳನ್ನು ಹೊಂದಿದ್ದ ತೃಣಮೂಲ ಕಾಂಗ್ರೆಸ್ ಈಗ ಕೇವಲ 1 ಸ್ಥಾನಕ್ಕೆ ತೃಪ್ತಿ ಪಡಬೇಕಾಗಿದೆ. ತೃಣಮೂಲ ಕಾಂಗ್ರೆಸ್ಸಿನೊಂದಿಗೆ ಮೈತ್ರಿ ಮಾಡಿಕೊಂಡು 2 ಸ್ಥಾನಗಳನ್ನು ಪಡೆದಿದ್ದ ಬಿಜೆಪಿ ಈ ಸಲ ಹೇಳಹೆಸರಿಲ್ಲದೆ ಅಳಿಸಿಹಾಕಲ್ಪಟ್ಟಿದೆ. ಸೋತ ಬಿಜೆಪಿಯ ಇಬ್ಬರು ಅಭ್ಯರ್ಥಿಗಳೂ ವಾಜಪೇಯಿ ಮಂತ್ರಿಮಂಡಲದಲ್ಲಿ ಮಂತ್ರಿಗಳಾಗಿದ್ದವರು.

ಕೊಲ್ಕತ್ತಾದ ಎರಡು ಸ್ಥಾನಗಳು ಸಾಕಷ್ಟು ದೀರ್ಘಕಾಲದ ನಂತರ ಮರಳಿ ಎಡರಂಗದ ವ್ಯಾಪ್ತಿಗೆ ಸೇರಿರುವುದು ಒಂದು ಮಹತ್ತರವಾದ ಬೆಳವಣಿಗೆಯಾಗಿದೆ. ಈಶಾನ್ಯ ಕೊಲ್ಕತ್ತಾ ಸ್ಥಾನವನ್ನು 1980 ರಲ್ಲಿ ದಿವಂಗತ ಸುನಿಲ್ ಮೈತ್ರಾ ಗೆದ್ದಿದ್ದರು. ಈ ಸ್ಥಾನವನ್ನು 1984ರಿಂದ ಗೆಲ್ಲುತ್ತಾ ಬಂದಿದ್ದ ಅಜಿತ್‌ಕುಮಾರ್ ಪಾಂಜಾನನ್ನು ಈ ಸಲ ಸಿಪಿಐ(ಎಂ)ನ ಮಹಮ್ಮದ್ ಸಲೀಂ 73,780 ಮತಗಳ ಅಂತರದಿಂದ ಸೋಲಿಸಿದ್ದಾರೆ. ಎಡರಂಗವು ಸುಮಾರು 5 ದಶಕಗಳ ಹಿಂದೆಯೇ ಗೆದ್ದ...ವಾಯುವ್ಯ ಕೊಲ್ಕತ್ತಾ ಸ್ಥಾನವು ಈಗ ಪುನಃ ಎಡರಂಗದ ವಶಕ್ಕೆ ಬಂದಿದೆ. ಈ ಕ್ಷೇತ್ರದಲ್ಲಿ ಸಿಪಿಐ(ಎಂ)ನ ಸುಧಾಂಗ್ಷು ಶೀಲ್ 43, 004 ಹೆಚ್ಚಿಗೆ ಮತಗಳನ್ನು ಪಡೆದು ತೃಣಮೂಲ ಕಾಂಗ್ರೆಸ್ ಅಭ್ಯರ್ಥಿ, ಮೇಯರ್ ಸುಬ್ರತಾ ಮುಖರ್ಜಿಯನ್ನು ಸೋಲಿಸಿದ್ದಾರೆ. ಡಂಡಂ ಸ್ಥಾನದಲ್ಲಿ 98,484 ಮತಗಳನ್ನು ಹೆಚ್ಚಿಗೆ ಪಡೆದು ಬಿಜೆಪಿಯನ್ನು ಸೋಲಿಸಿದ್ದು ಎಡರಂಗದ ಇನ್ನೊಂದು ಪ್ರಮುಖ ಸಾಧನೆಯಾಗಿದೆ.

ಎಡರಂಗದ ಅಭ್ಯರ್ಥಿಗಳ ಗೆಲುವಿನ ಅಂತರವೂ ಗಣನೀಯವಾಗಿ ವೃದ್ಧಿಯಾಗಿರುವುದು ಈ ಸಲದ ಇನ್ನೊಂದು ವಿಶೇಷತೆಯಾಗಿದೆ. ಎಡರಂಗದ 21 ಅಭ್ಯರ್ಥಿಗಳು 2 ಲಕ್ಷಕ್ಕೂ ಹೆಚ್ಚು ಮತಗಳ ಅಂತರದಿಂದ ಗೆದ್ದಿದ್ದಾರೆ. ಆರಾಮಬಾಗ್ ಕ್ಷೇತ್ರದಿಂದ ಸ್ಪರ್ಧಿಸಿದ್ದ **ಸಿಪಿಐ(ಎಂ) ಅನಿಲ್ ಬಸು 7,23,661 ಮತಗಳನ್ನು ಪಡೆದು ಬಿಜೆಪಿಯ ಸ್ವಪನ್ ಕುಮಾರ್‌ನನ್ನು 5,92,502 ಮತಗಳ ಅಂತರದಿಂದ ಸೋಲಿಸಿದ್ದಾರೆ.** ಇದು ಇಡೀ ದೇಶದಲ್ಲೇ ಗೆಲುವಿನ ಅಂತರದ ದಾಖಲೆಯಾಗಿದೆ. ಬರ್ದ್ವಾನ್ ಸ್ಥಾನದಿಂದ ಸ್ಪರ್ಧಿಸಿದ್ದ ಸಿಪಿಐ(ಎಂ)ನ ನಿಖಿಲಾಂದ ಸಾರ್ 4,71,351 ಮತಗಳ ಅಂತರದಿಂದ ಬಿಜೆಪಿಯ ಅನಿಂದ್ಯ ಗೋಪಾಲ್ ಮಿತ್ರಾರನ್ನು ಸೋಲಿಸಿದ್ದಾರೆ. ಬೋಲ್‌ಪುರ್‌ದಿಂದ ಸ್ಪರ್ಧಿಸಿದ್ದ ಸಿಪಿಐ(ಎಂ)ಸೋಮನಾಥ ಚಟರ್ಜಿ 3,10,307 ಹೆಚ್ಚಿಗೆ ಮತಗಳನ್ನು ಪಡೆದು ತೃಣಮೂಲ ಕಾಂಗ್ರೆಸ್ಸಿನ ಡಾ. ನಿರ್ಮಲ್ ಮಾಜಿ ಅವರನ್ನು ಸೋಲಿಸಿದ್ದಾರೆ. ಜಾರ್‌ಗ್ರಾಮ್ ಕ್ಷೇತ್ರದಲ್ಲಿ ಸಿಪಿಐ(ಎಂ)ನ ರೂಪ್‌ಚಂದ್ ಮುರ್ಮು 3,51,343 ಮತಗಳ ಅಂತರದಿಂದ ಗೆದ್ದಿದ್ದಾರೆ. ವಿಷ್ಣುಪುರ್ ಕ್ಷೇತ್ರದಿಂದ ಸಿಪಿಐ(ಎಂ) ನ ಸುಶ್ಮಿತಾ ಬೌರಿ 3,31,829 ಮತಗಳ ಅಂತರದಿಂದ ಜಯ ಗಳಿಸಿದ್ದಾರೆ.



ಪಶ್ಚಿಮ ಬಂಗಾಳದ ಚುನಾವಣಾ ಫಲಿತಾಂಶದಿಂದ ಅತ್ಯಂತ ಸಂತಸಭರಿತರಾದ ಜ್ಯೋತಿಬಸು 'ಪಶ್ಚಿಮ ಬಂಗಾಳದ ಜನತೆ ಕೋಮುವಾದಿ ಶಕ್ತಿಗಳನ್ನು ಮತ್ತು ಅವುಗಳೊಂದಿಗೆ ಕೈಜೋಡಿಸಿರುವ ಸಂದರ್ಭಸಾಧಕ ಶಕ್ತಿಗಳನ್ನು ಸ್ಪಷ್ಟವಾಗಿ ತಿರಸ್ಕರಿಸಿದ್ದಾರೆ' ಎಂದು ಹೇಳಿದ್ದಾರೆ. ಎಡರಂಗದ ಪರವಾದ ಈ ಜನಾದೇಶ ಎನ್‌ಡಿಎ ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧದ ತೀರ್ಪು ಎಂದು ಅವರು ಬಣ್ಣಿಸಿದ್ದಾರೆ. ಪಶ್ಚಿಮ ಬಂಗಾಳದಿಂದ ಬಿಜೆಪಿಯನ್ನು ಒದ್ದೋಡಿಸಿ, ತೃಣಮೂಲ ಕಾಂಗ್ರೆಸ್ಸಿಗೆ ತಕ್ಕ ಪಾಠ ಕಲಿಸಿದ ರಾಜ್ಯದ ಜನತೆಯನ್ನು ಎಡರಂಗದ ಚೇರಮನ್ ಭೀಮನ್ ಬಸು ಹಾಗೂ ರಾಜ್ಯದ ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ ಅವರು ಅಭಿನಂದಿಸಿದ್ದಾರೆ.

ತ್ರಿಪುರಾದಲ್ಲಿ ಸಿಪಿಐ(ಎಂ) ಜಯಭೇರಿ:

ತ್ರಿಪುರಾ ರಾಜ್ಯದ ಎರಡೂ ಲೋಕಸಭಾ ಸ್ಥಾನಗಳಲ್ಲಿ ದಾಖಲೆಯ ಅಂತರದ ಮತಗಳನ್ನು ಗಳಿಸಿ ಸಿಪಿಐ(ಎಂ) ಅಭ್ಯರ್ಥಿಗಳು ಜಯಗೊಳಿಸಿದ್ದಾರೆ. ತ್ರಿಪುರಾ ಪಶ್ಚಿಮ ಕ್ಷೇತ್ರದಲ್ಲಿ ಸಿಪಿಐ(ಎಂ)ನ ಖಗೇನ್ ದಾಸ್ 4,96,843 ಮತಗಳ ಅಂತರದಿಂದ ಕಾಂಗ್ರೆಸ್ಸಿನ ನಿರ್ಮಲಾ ದಾಸ್‌ಗುಪ್ತಾರನ್ನು ಸೋಲಿಸಿ ದಾಖಲೆ ನಿರ್ಮಿಸಿದ್ದಾರೆ. ಅದರಂತೆಯೇ ತ್ರಿಪುರ ಪೂರ್ವ ಕ್ಷೇತ್ರದಲ್ಲಿ ಸಿಪಿಐ(ಎಂ)ನ ಬಾಜುಬಾನ್ ರಿಯಾನ್ 4,07,734 ಮತಗಳ ಅಂತರದಿಂದ ಬಿಜೆಪಿಯ

ಪುಟ 10 ಕ್ಕೆ

ವಿಜಯಿ ಸಿಪಿಐ(ಎಂ) ಅಭ್ಯರ್ಥಿಗಳು

ಅಭ್ಯರ್ಥಿ	/ಕ್ಷೇತ್ರ	ಸೋತ ಪಕ್ಷ	ಪಡೆದ ಮತಗಳು(ಲಕ್ಷ)	ವಿಜಯದ ಅಂತರ(ಲಕ್ಷ)	ಶೇಕಡ ಮತ ಗಳಿಕೆ
ಪಶ್ಚಿಮ ಬಂಗಾಳ					
1. ಮಿನಾತಿ ಸೇನ್*	ಜಲಪೈಗುರಿ	ತೃಣಮೂಲ	4.24	1.8	47.6
2. ಜ್ಯೋತಿರ್ಮಯಿ ಸಿಕದರ್	ಕೃಷ್ಣನಗರ್(SC)	ಬಿಜೆಪಿ	3.97	0.2	42.7
3. ಅಲಕೇಶ್ ದಾಸ್	ನಬದ್ವೀಪ್(SC)	ತೃಣಮೂಲ	5.60	0.1	47.5
4. ಬಸುದೇಬ್ ಬರ್ಮನ್	ಮಥುರಾಪುರ	ತೃಣಮೂಲ	4.40	0.8	48.5
5. ಶಮಿಕ್ ಲಹಿರಿ	ಡೈಮಂಡ್ ಹಾರ್ಬರ್	ತೃಣಮೂಲ	4.30	1.5	51.5
6. ಸುಜನ್ ಚಕ್ರವರ್ತಿ	ಜಾಧವ್‌ಪುರ್	ತೃಣಮೂಲ	5.05	0.9	49.4
7. ತರಿತ್ ಬರನ್	ಬಾರಕ್‌ಪುರ್	ತೃಣಮೂಲ	4.36	1.6	55.7
8. ಅಮಿತವ ತೋಪದಾರ್ ನಂದಿ	ಡಂ ಡಂ	ಬಿಜೆಪಿ	6.19	1.0	49.6
9. ಸುಧಾಂಶು ಶೀಲ್	ಕಲ್ಕತ್ತ(ವಾಯುವ್ಯ)	ತೃಣಮೂಲ	1.51	0.4	42.2
10. ಮಹಮ್ಮದ್ ಸಲೀಂ	ಕಲ್ಕತ್ತ(ಈಶಾನ್ಯ)	ತೃಣಮೂಲ	2.84	0.7	50
11. ಸ್ವದೇಶ್ ಚಕ್ರವರ್ತಿ	ಹೌರಾ	ತೃಣಮೂಲ	4.89	2.5	53.7
12. ಹನ್ನನ್ ಮುಲ್ಲಾ	ಉಲುಬೆರಿಯಾ	ತೃಣಮೂಲ	4.24	1.5	49.8
13. ಸುಕಸ್ರಿ ಚಟರ್ಜಿ	ಸೆರಾಂಪುರ	ತೃಣಮೂಲ	4.04	0.2	42.7
14. ರೂಪ್‌ಚಂದ್ ಪಾಲ್	ಹೂಗ್ಲಿ	ತೃಣಮೂಲ	4.94	1.7	53.7
15. ಅನಿಲ್ ಬಸು	ಆರಾಮಬಾಗ್	ಬಿಜೆಪಿ	7.44	6.0	77.1
16. ಸೇರ್ ಲಕ್ಷ್ಮಣ್ ಚಂದ್ರ	ತಮ್‌ಲುಕ್	ತೃಣಮೂಲ	5.07	0.5	48.9
17. ಪ್ರಶಾಂತ್ ಪ್ರಧಾನ್	ಕೊಂಟಾಯ	ತೃಣಮೂಲ	4.64	0.6	50.2
18. ರೂಪ್‌ಚಂದ್ ಮುರ್ಮು	ಝೂರ್‌ಗ್ರಾಮ(ST)	ತೃಣಮೂಲ	5.09	3.5	64.0
19. ಬಾಸುದೇಬ್ ಆಚಾರ್ಯ	ಬಂಕುರಾ	ತೃಣಮೂಲ	4.17	2.3	60.0
20. ಸುಸ್ಮಿತಾ ಬೌರಿ*	ವಿಷ್ಣುಪುರ(SC)	ತೃಣಮೂಲ	5.18	4.3	64.3
21. ಸುನೀಲ್ ಖಾನ್	ದುರ್ಗಾಪುರ(SC)	ಬಿಜೆಪಿ	5.05	2.8	59.6
23. ನಿಖಿಲಾನಂದ ಸಾರ್	ಬರ್ದ್ವನ್	ಬಿಜೆಪಿ	6.73	4.7	67.5
24. ಮಹಬೂಬ ಜಹೇದಿ	ಕಾತ್ವಾ	ತೃಣಮೂಲ	4.94	1.4	51.2
25. ಸೋಮನಾಥ ಚಟರ್ಜಿ	ಬೋಲ್‌ಪುರ್	ತೃಣಮೂಲ	5.05	3.1	65.5
26. ರಾಮಚಂದ್ರ ದೊಮ್	ಬಿರ್‌ಭೂಮ್(SC)	ಕಾಂಗ್ರೆಸ್	3.72	1.9	
ಕೇರಳ					
27. ಪಿ.ಕರುಣಾಕರನ್	ಕಾಸರಗೋಡು	ಕಾಂಗ್ರೆಸ್	4.37	1.1	48.5
28. ಎ.ಪಿ.ಅಬ್ದುಲ್ ಕುಟ್ಟಿ	ಕಣ್ಣಾನೂರು	ಕಾಂಗ್ರೆಸ್	4.35	0.8	50.5
29. ಪಿ.ಸತೀದೇವಿ*	ಬಡಾಗಾರ	ಕಾಂಗ್ರೆಸ್	4.29	1.3	51.8
30. ಟಿ.ಕೆ.ಹಂಸ	ಮಂಜೇರಿ	ಮುಸ್ಲಿಂ ಲೀಗ್	4.26	0.5	45.7
31. ಎನ್.ಎನ್.ಕೃಷ್ಣದಾಸ್	ಪಾಲ್ಘಟ್	ಕಾಂಗ್ರೆಸ್	3.75	1.0	45.7
32. ಎನ್.ಅಜಯ ಕುಮಾರ್	ಒಟ್ಟಾಪಾಲಂ(SC)	ಕಾಂಗ್ರೆಸ್	3.95	0.7	49.0
33. ಲೋನಪ್ಪನ್ ನಂಬಾಡನ್	ಮುಕುಂದಪುರಂ	ಕಾಂಗ್ರೆಸ್	3.75	1.2	51.8
34. ಸುರೇಶ್ ಕುರೂಪ್	ಕೊಟ್ಟಾಯಂ	ಕಾಂಗ್ರೆಸ್	3.41	0.4	48.3
35. ಡಾ|| ಕೆ.ಎಸ್.ಮನೋಜ್	ಅಲೆಪ್ಪಿ	ಕಾಂಗ್ರೆಸ್	3.35	1 ಸಾವಿರ	46.0
36. ಸಿ.ಎಸ್.ಸುಜಾತಾ*	ಮವೇಳಿಕಾರ	ಕಾಂಗ್ರೆಸ್	2.78	8 ಸಾವಿರ	43.2
37. ಪಿ.ರಾಜೇಂದ್ರನ್	ಕ್ವಿಲಾನ್	ಕಾಂಗ್ರೆಸ್	3.55	1.1	50.4
38. ವರಾಕಲ್ ರಾಧಾಕೃಷ್ಣನ್	ಚಿರಾಯಿಂಕಿಲ್	ಕಾಂಗ್ರೆಸ್	3.13	0.5	46.8
39. ಸೆಬಾಸ್ಟಿನ್ ಪೌಲ್	ಎರ್ನಾಕುಲಂ	ಕಾಂಗ್ರೆಸ್	3.23	70 ಸಾವಿರ	
ತ್ರಿಪುರಾ					
40. ಖಾಗೇನ್ ದಾಸ್	ತ್ರಿಪುರಾ ಪಶ್ಚಿಮ	ಕಾಂಗ್ರೆಸ್	4.96	3.8	70.9
41. ಬಾಜು ಬಾನ್ ರಿಯಾನ್	ತ್ರಿಪುರಾ ಪೂರ್ವ	ಬಿಜೆಪಿ	4.14	3.1	66.5
ತಮಿಳು ನಾಡು					
42. ವಿ.ಮೋಹನ್	ಮಧುರೈ	ಅಣ್ಣಾ ಡಿಎಂಕೆ	4.14	2.4	56.0
43. ಬೆಲ್ಲಾರಿಮಿನ್.ಎ.ವಿ.	ನಾಗರ್‌ಕೊಯಿಲ್	ಬಿಜೆಪಿ	4.10	1.6	60.9
ಆಂಧ್ರ ಪ್ರದೇಶ					
44. ಮಿಡಿಯಂ ಬಾಬು ರಾವ್	ಭದ್ರಾಚಲಂ(SC)	ತೆಲುಗು ದೇಶಂ	3.73	0.6	45.3

* ಮಹಿಳೆ

'ಸಿಇಟಿ-ವಿದ್ಯಾರ್ಥಿ ಪೋಷಕರ ಹೋರಾಟ ಸಮಿತಿ' ರಚನೆ

ಹೋರಾಟಕ್ಕೆ ತೀರ್ಮಾನ

ವೃತ್ತಿ ಶಿಕ್ಷಣ ರಂಗದಲ್ಲಿನ ಬಿಕ್ಕಟ್ಟಿನ ವಿರುದ್ಧ ಶಿಕ್ಷಣದ ಹಕ್ಕಿಗಾಗಿ ವ್ಯಾಪಕ ಆಂದೋಲನ ನಡೆಸಲು ನಿರ್ಧರಿಸಲಾಗಿದೆ. ಅದರ ವಿವರ ಯೋಜನೆ ಇಲ್ಲಿದೆ.

ದಿನೇ ದಿನೇ ತೀವ್ರಗೊಳ್ಳುತ್ತಿರುವ ವೃತ್ತಿ ಶಿಕ್ಷಣ ಬಿಕ್ಕಟ್ಟಿನ ಪರಿಹಾರಕ್ಕಾಗಿ ಪ್ರಬಲ ಚಳುವಳಿಯನ್ನು ರೂಪಿಸುವ ನಿಟ್ಟಿನಲ್ಲಿ ವಿವಿಧ ಜನಪರ ಸಂಘಟನೆಗಳ ರಾಜ್ಯ ಪದಾಧಿಕಾರಿಗಳ ಸಭೆಯೊಂದು ಮೇ 7 ರಂದು SFI- DYFI ರಾಜ್ಯ ಸಮಿತಿ ಕಾರ್ಯಾಲಯದಲ್ಲಿ ನಡೆಯಿತು. ವೈದ್ಯಕೀಯ ಸ್ನಾತಕೋತ್ತರ ಕೋರ್ಸುಗಳ ಅಗಾಧ ಶುಲ್ಕ ಏರಿಕೆ- ತಾಂತ್ರಿಕ- ವೈದ್ಯಕೀಯ ಶಿಕ್ಷಣದ ಪದವಿ ಕೋರ್ಸುಗಳಿಗೂ ಈಗ ಶುಲ್ಕ ಏರಿಕೆ ಪ್ರಸ್ತಾಪ- ಖಾಸಗಿ ಆಡಳಿತ ಮಂಡಳಿಗೆ ಧನದಾಹ- ಸೀಟು ಹಂಚಿಕೆಯಲ್ಲಿ ಸಿಂಹ ಪಾಲಿಗಾಗಿ ಅವರ ಬಡಿದಾಟ - ವಿದ್ಯಾರ್ಥಿ- ಪೋಷಕರ ಪರದಾಟ ಇತ್ಯಾದಿ ವಿಷಯಗಳ ಬಗೆಗೆ ಸಭೆಯು ಚರ್ಚಿಸಿ ರಾಜ್ಯದಲ್ಲಿ ವೃತ್ತಿ ಶಿಕ್ಷಣ ಸಮಸ್ಯೆಗಳ ಶಾಶ್ವತ ಪರಿಹಾರಕ್ಕಾಗಿ ರಾಜ್ಯದಲ್ಲಿ ಪ್ರಬಲವಾದ ಚಳುವಳಿಯನ್ನು ಬೆಳೆಸುವ ನಿಟ್ಟಿನಲ್ಲಿ ವಿವಿಧ ಜನಪರ ಸಂಘಟನೆಗಳನ್ನೊಳಗೊಂಡ ಹೋರಾಟ ಸಮಿತಿಯೊಂದನ್ನು ಸಭೆಯಲ್ಲಿ ರಚಿಸಲಾಯಿತು. 'CET- ವಿದ್ಯಾರ್ಥಿ ಪೋಷಕರ ಹೋರಾಟ ಸಮಿತಿ' ಎಂಬ ಈ ರಾಜ್ಯ ಮಟ್ಟದ ಸಮಿತಿಗೆ SFI ರಾಜ್ಯ ಕಾರ್ಯದರ್ಶಿ ಆರ್.ರಾಮಕೃಷ್ಣ, DYFI ರಾಜ್ಯ ಅಧ್ಯಕ್ಷರಾದ ಕೆ.ಎನ್.ಉಮೇಶ್, JMS ರಾಜ್ಯ ಕಾರ್ಯದರ್ಶಿಗಳಾದ ಕೆ.ಎಸ್.ವಿಮಲರನ್ನು ಸಂಚಾಲಕರುಗಳನ್ನಾಗಿ ಸಭೆ ಆಯ್ಕೆ ಮಾಡಿತು.

SFI-DYFI ಗಳಲ್ಲದೆ ಸಭೆಯಲ್ಲಿ ಪಾಲ್ಗೊಂಡ ಜನವಾದಿ ಮಹಿಳಾ ಸಂಘಟನೆ(JMS), ಅಖಿಲ ಭಾರತ ವಿಮಾ ನೌಕರರ ಸಂಘಟನೆ(AIIEA), ಸೆಂಟ್ರಲ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (CITU), ಕರ್ನಾಟಕ ಪ್ರಾಂತ ರೈತ ಸಂಘ (KPRS), ಕರ್ನಾಟಕ ಪ್ರಾಂತ ಕೃಷಿ ಕಾರ್ಮಿಕರ ಸಂಘ(AIAWU), ಗ್ರಾಮೀಣ ಕೃಪಾಂಕ ನೌಕರರ



ಕಿಯಾ ಸಮಿತಿ, ಈ ಸಂಘಟನೆಗಳು ಹೋರಾಟ ಸಮಿತಿಯ ಭಾಗವಾಗಿವೆ. ಇದಲ್ಲದೆ ಅಖಿಲ ಭಾರತ ವಕೀಲರ ಸಂಘ(AILU), ಬ್ಯಾಂಕ್ ಎಂಪ್ಲಾಯಿಸ್ ಫೆಡರೇಷನ್ ಆಫ್ ಇಂಡಿಯಾ(BEFI), ಔಷಧ ಮಾರಾಟಗಾರ ಪ್ರತಿನಿಧಿಗಳ 'ಫೆಡರೇಷನ್ ಆಫ್ ಮೆಡಿಕಲ್ ರೆಪ್ರಸೆಂಟೇಟಿವ್ಸ್ ಅಸೋಸಿಯೇಶನ್ (FMRAI) ಮುಂತಾದ ಹಲವು ಸಮಾನ ಮನಸ್ಕ ಜನಪರ ಸಂಘಟನೆಗಳನ್ನು ಹೋರಾಟ ಸಮಿತಿ ಒಳಗೊಂಡು ಸಮಿತಿಯನ್ನು ವಿಸ್ತರಿಸಬೇಕೆಂದೂ ಹಾಗೂ ಇದೇ ಮಾದರಿಯ ಹೋರಾಟ ಸಮಿತಿಗಳನ್ನು ಜಿಲ್ಲಾ- ತಾಲ್ಲೂಕು ಮಟ್ಟಗಳಲ್ಲೂ ರಚಿಸಬೇಕೆಂದು ಸಭೆ ನಿರ್ಣಯಿಸಿತು.

ವಿದ್ಯಾರ್ಥಿ- ಪೋಷಕರ ಸಂಪರ್ಕ- ಹೋರಾಟ ಸಮಿತಿ ರಚನೆ

ಮೇ14 ಮತ್ತು 15 ರಂದು ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳ ಒಕ್ಕೂಟ ಕಾಮೆಡ್-ಕೆ ನಡೆಸುವ CET ನಡೆಯಲಿವೆ. ಮೇ 18, 19ರಂದು ಸರ್ಕಾರ ನಡೆಸುವ CET ರಾಜ್ಯವ್ಯಾಪಿಯಾಗಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ನಡೆಯಲಿದೆ. ಈ ಸಂದರ್ಭದಲ್ಲಿ ವಿದ್ಯಾರ್ಥಿ ಪೋಷಕರನ್ನು ಸಂಪರ್ಕಿಸಿ ಹೋರಾಟ ಸಮಿತಿ ರಚಿಸಲು ತೀರ್ಮಾನಿಸಲಾಗಿದೆ. CET ತರಬೇತಿ ಕೇಂದ್ರಗಳು ಟ್ಯೂಷನ್ ಕೇಂದ್ರಗಳ- ವಸತಿ ಪ್ರದೇಶ- ಹಾಸ್ಟಲ್‌ಗಳ ವಿದ್ಯಾರ್ಥಿಗಳನ್ನು ಸಂಪರ್ಕಿಸಲು ಸಹ ತೀರ್ಮಾನಿಸಿದೆ.

ಮೇ 21 ಸಿಇಟಿ ಬಿಕ್ಕಟ್ಟಿಗೆ ಪರಿಹಾರವೇನು? -ಸಂವಾದ

ಮೇ 21ರಂದು ಬೆಂಗಳೂರಿನಲ್ಲಿ ಶಿಕ್ಷಣ ತಜ್ಞರು, ಶಿಕ್ಷಕರು, ವಿದ್ಯಾರ್ಥಿ- ಪೋಷಕರು ಪಾಲ್ಗೊಳ್ಳುವ 'ಸಂವಾದ'ವೊಂದನ್ನು ನಡೆಸಲು ಸಹ ತೀರ್ಮಾನಿಸಿದೆ.

ಜೂನ್ 2 ರಂದು ಜಿಲ್ಲಾ-ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟನಾ ಸಮಾವೇಶಗಳು

ಇದೇ ರೀತಿ ಜೂನ್ 2 ರಂದು ವಿವಿಧ ಜಿಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ವಿದ್ಯಾರ್ಥಿ- ಪೋಷಕರ **'ಪ್ರತಿಭಟನಾ ಸಮಾವೇಶ'**ಗಳನ್ನು- ಪ್ರತಿಭಟನಾ ಕಾರ್ಯಕ್ರಮಗಳನ್ನು ನಡೆಸಲು ನಿರ್ಧರಿಸಿದೆ.

ಜೂನ್ 8, ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ

ಜೂನ್ 8 ರಂದು ಬೆಂಗಳೂರು ಸುತ್ತಮುತ್ತಲ ಜಿಲ್ಲೆಗಳಿಂದಲೂ ವಿದ್ಯಾರ್ಥಿ- ಪೋಷಕರು ಪಾಲ್ಗೊಳ್ಳುವ ಬೃಹತ್ ಪ್ರತಿಭಟನಾ ಕಾರ್ಯಕ್ರಮಕ್ಕೆ ನಿರ್ಧರಿಸಲಾಗಿದೆ.

ಹೋರಾಟ ಸಮಿತಿ ಬೇಡಿಕೆಗಳು

- ಹೋರಾಟ ಸಮಿತಿ ಶಿಕ್ಷಣ ವ್ಯಾಪಾರೀಕರಣ ಕೂಡಲೇ ನಿಲ್ಲಬೇಕು.
- ವೃತ್ತಿ ಶಿಕ್ಷಣದ ಶುಲ್ಕ ಏರಿಕೆ ಕೈಬಿಡಬೇಕು- ಪ್ರತಿಭೆ ಮತ್ತು ಸಾಮಾಜಿಕ ನ್ಯಾಯವನ್ನು ರಕ್ಷಿಸಬೇಕು.
- ತಾತ್ಕಾಲಿಕವಾಗಿ ಸೀಟು ಹಂಚಿಕೆ ಸೀಟು ಹಿಂದಿದ್ದಂತೆ 85/15 ಇರಬೇಕು.
- ಸರ್ಕಾರಿ ಇಂಜಿನಿಯರಿಂಗ್- ಮೆಡಿಕಲ್ ಕಾಲೇಜುಗಳ ಪ್ರವೇಶ ಸಾಮರ್ಥ್ಯ ಹೆಚ್ಚಿಸಬೇಕು- ಹೊಸ ಕಾಲೇಜುಗಳನ್ನು ತೆರೆಯಬೇಕು.
- ಸಮಸ್ಯೆಗೆ ಶಾಶ್ವತ ಪರಿಹಾರವಾಗಿ 'ಟಿ.ಎಂ.ಎ. ಪೈ' ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತೀರ್ಪಿನ ದುಷ್ಪರಿಣಾಮವನ್ನು ನಿವಾರಿಸುವ ಸಲುವಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳ ನಿಯಂತ್ರಣಕ್ಕೆ ರಾಜ್ಯ ಸರ್ಕಾರಗಳಿಗೆ ಅಧಿಕಾರ ನೀಡುವ **'ಕೇಂದ್ರೀಯ ಶಾಸನ'** ರಚನೆಯಾಗಬೇಕು.
- ಉದ್ಧಟತನದಿಂದ ವರ್ತಿಸುತ್ತಿರುವ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳ ವಿರುದ್ಧ ಬಿಗಿಯಾದ ಕ್ರಮ ಕೈಗೊಳ್ಳಬೇಕು.

ಕರ್ನಾಟಕದ ಜನಾದೇಶ........

ಪುಟ 3 ರಿಂದ

ಬಹಳ ಮುಖ್ಯವಾಗಿ: ಕೇಂದ್ರದ ಆರ್ಥಿಕ ನೀತಿಗಳನ್ನೇ ಅನುಸರಿಸಿತಲ್ಲದೇ, ದೆಹಲಿ ಸರ್ಕಾರದ 'ಕೃಪೆ'ಯನ್ನು ಕೃಷ್ಣರ ಸರ್ಕಾರ ಸದಾ ಬಯಸುತ್ತಾ, ಆಶ್ರಯಿಸುತ್ತಾ ಬಂದಿತ್ತು. ನೀರಾವರಿಯಂತಹ ರಾಜ್ಯದ ಹಿತಾಸಕ್ತಿ ಪ್ರಶ್ನೆ ಬಂದಾಗಲೂ, ಬರಗಾಲದಂತಹ ವಿಷಯದಲ್ಲಿ ಕೇಂದ್ರ ಸರ್ಕಾರ ತಾರತಮ್ಯ ಅನುಸರಿಸಿದಾಗಲೂ ಪ್ರಬಲವಾಗಿ ಎದುರಿಸಲಿಲ್ಲ.

ಮೂರನೆಯದಾಗಿ, ದಕ್ಷಿಣ ಭಾರತದಲ್ಲೇ ಕರ್ನಾಟಕಕ್ಕೆ ಆರ್‌ಎಸ್‌ಎಸ್ ಅತೀ ಹೆಚ್ಚಿನ ಗಮನವನ್ನು ಕೇಂದ್ರೀಕರಿಸಿ ಕೋಮುವಾದಿ ಚಟುವಟಿಕೆಗಳನ್ನು ಹೆಚ್ಚಿಸಿತು. ಸೌಹಾರ್ದತೆಯ ತಾಣವಾದ ಬಾಬಾಬುಡನ್‌ಗಿರಿಯಲ್ಲಿ ವಿವಾದವೆಬ್ಬಿಸಿ, ಇನ್ನೊಂದು ಅಯೋಧ್ಯಾ ಮಾಡುವ ಬೆದರಿಕೆಯೊಂದಿಗೆ ವ್ಯಾಪಕವಾಗಿ ಇಳಿಯಿತು. ಕರ್ನಾಟಕದ ಕರಾವಳಿ, ಮಲೆನಾಡು ಜಿಲ್ಲೆಗಳು, ಮಾಂಬೆ ಕರ್ನಾಟಕ, ಹೈದ್ರಾಬಾದ್ ಕರ್ನಾಟಕ ಹಾಗೂ ಬೆಂಗಳೂರು ಜಿಲ್ಲೆ ಮುಂತಾದೆಡೆ ತನ್ನ ಕೋಮುವಾದಿ ಚಟುವಟಿಕೆ ಅಲ್ಪಸಂಖ್ಯಾತರ ಮೇಲೆ ಧಾಳಿ ತೀವ್ರಗೊಳಿಸಿತು. ಸುಮಾರು ಅರ್ಧ 50 ಕ್ಕೂ ಅಧಿಕ ಪ್ರದೇಶಗಳಲ್ಲಿ ವ್ಯಾಪಕವಾದ ಕೋಮುಗಲಭೆಗಳನ್ನೆಬ್ಬಿಸಿತು. ವಿಹೆಚ್‌ಪಿ, ಭಜರಂಗದಳ ಹಿಂದೂ ಸಮಾಜೋತ್ಸವದ ಮೂಲಕ ಪ್ರಚೋದನಾತ್ಮಕ ಧಾಳಿ ನಡೆಸಿದವು. ಇಂತಹ ಪ್ರತಿಯೊಂದು ಪ್ರಸಂಗವನ್ನು ಎದುರಿಸಲು ಕಾಂಗ್ರೆಸ್ ಒಂದುಸ ರಾಜಕೀಯ ಪಕ್ಷವಾಗಿ ಹಾಗೂ ಸರ್ಕಾರವಾಗಿ ದೃಢವಾದ ಕ್ರಮ ವಹಿಸಲಿಲ್ಲ - ಬದಲಾಗಿ ಅನೇಕ ಕಟೆ ಇಂತಹದ್ದಕ್ಕೆ ಅವಕಾಶ ನೀಡಿತಲ್ಲದೇ ಕೆಲವೆಡೆ ರಾಜೀ ಮಾಡಿಕೊಂಡಿತು. ಇಂತಹ ಗಲಭೆ-ವಿವಾದಗಳಲ್ಲಿ ರಾಜಕೀಯ ಲಾಭಕ್ಕಾಗಿ ಯತ್ನಿಸಿತು. ಈ ಸ್ಥಿತಿಯಿಂದಾಗಿ ಅಲ್ಪಸಂಖ್ಯಾತರು ತಮ್ಮನ್ನು ಬೆಂಬಲಿಸುತ್ತಾರೆಂದು ನಿರೀಕ್ಷಿಸಿತು.

ಬಿಜೆಪಿ ಗೆಲುವಿನ ಹಿಂದೆ ಕಾಂಗ್ರೆಸ್

ಹೀಗೆ ಕೃಷ್ಣರ ನೇತೃತ್ವದ ಸರ್ಕಾರದ ಆರ್ಥಿಕ ವೈಫಲ್ಯಗಳು, ಕೇಂದ್ರದ ನೀತಿಗಳ ಕ್ರೂರ ಪ್ರಹಾರಗಳನ್ನು ಜನರ ಎದುರು ತೆರೆದಿಡದೆ ಇರುವುದು, ಕೋಮುವಾದಿಗಳ ಅಟ್ಟಹಾಸಕ್ಕೆ ಅನುಮೋದನೆ ಹಾಗೂ ದೃಢ ಕ್ರಮಗಳಿಲ್ಲದ ಚಂಚಲ, ಅವಕಾಶವಾದಿ ರಾಜಕಾರಣ ರಾಜ್ಯದಲ್ಲಿ ಇವು ಸೋಲಿಗೆ ಮುಖ್ಯವಾದ ಅಂಶಗಳು. ಕಾಂಗ್ರೆಸ್ ವಿರೋಧಿಯಾದ ಜನರ ಅತೃಪ್ತಿಯನ್ನು ಬಿಜೆಪಿ ಸಮರ್ಥವಾಗಿ ಬಳಸಿ, ಅತ್ಯಧಿಕವಾದ ಲೋಕಸಭಾ ಹಾಗೂ ವಿಧಾನಸಭಾ ಸ್ಥಾನಗಳನ್ನು ಪಡೆಯುವಂತಾಗಿದೆ. ಇದರ ಹೊಣೆಯೂ ಕಾಂಗ್ರೆಸ್ ಮೇಲಿದೆ.

ಜಾತ್ಯತೀತ ಸರ್ಕಾರದ ರಚನೆಯತ್ತ

ಇಷ್ಟಾದರೂ ರಾಜ್ಯದಲ್ಲಿ ಜನತೆ ಕೋಮುವಾದಿಗಳಿಗೆ ಅಧಿಕಾರದ ಗದ್ದುಗೆಗೇರಲು ಬಿಟ್ಟಿಲ್ಲ. ರಾಜ್ಯವನ್ನು ಇನ್ನೊಂದು ಗುಜರಾತ್ ಮಾಡಲು ಹೊರಟಿದ್ದ (ಕುಖ್ಯಾತ ನರೇಂದ್ರ ಮೋದಿಯನ್ನು ರಾಜ್ಯಕ್ಕೆ ಪ್ರಚಾರಕ್ಕೆ ಕರೆಸಿ, 'ಗುಜರಾತ್ ಮಾದರಿ'ಯನ್ನು ಪ್ರಚಾರಿಸಿದ್ದರು!) ಕೋಮುವಾದಿ ಬಿಜೆಪಿಗೆ ಆಡಳಿತದ ಅವಕಾಶವನ್ನು ನಿರಾಕರಿಸಿದ್ದಾರೆ. ಈ ಮೂಲಕ ಜಾತ್ಯತೀತ ಸರ್ಕಾರದ ರಚನೆಯ ಬಯಕೆಯನ್ನು ಜನತೆ ವ್ಯಕ್ತಪಡಿಸಿದೆ.

ಆದ್ದರಿಂದ ಕೋಮುವಾದಿಗಳಿಗೆ ಸರ್ಕಾರ ರಚಿಸಲು ಅವಕಾಶ ಒದಗಿಸಬಾರದು. ಇಂದಿನ ಸಂದರ್ಭದ ಸಂಕೀರ್ಣ ಪರಿಸ್ಥಿತಿ ಅರಿತು ಜನತಾದಳ(ಎಸ್) ಮತ್ತು ಕಾಂಗ್ರೆಸ್ ಪಕ್ಷಗಳು ಜಾತ್ಯತೀತ ಸರ್ಕಾರ ರಚನೆಗೆ ಕ್ರಮ ವಹಿಸುವುದು ಅಗತ್ಯವಾಗಿದೆ. ಆ ದಿಶೆಯ ಪ್ರಯತ್ನಗಳು ಏನಾಗುವುದು ಎಂದು ಕಾದು ನೋಡಬೇಕಷ್ಟೆ.

ಕರ್ನಾಟಕದ ವಿಧಾನಸಭೆಯಲ್ಲಿ ಈ ಬಾರಿ ಮತ್ತೆ ಸಿಪಿಐ(ಎಂ)ನ ಒಬ್ಬ ಶಾಸಕರನ್ನು ಹೊಂದಿದ್ದು ಅವರು (ಜಿವಿಎಸ್) ದುಡಿಯುವ ವರ್ಗದ ಧ್ವನಿಯನ್ನು ಮೊಳಗಿಸಲಿದ್ದಾರೆ. ಈ ಪ್ರಾತಿನಿಧ್ಯ ಮತ್ತು ಅವರ ಪಾತ್ರ ಗಮನಾರ್ಹವಾಗಿರುತ್ತದೆ.

ಸಿಐಟಿಯು ಆಯ್ಕೆ

ಕರೂರ್: (ರಾಣೆಬೆನ್ನೂರ್ ತಾಲ್ಲೂಕ್) ಇಲ್ಲಿನ ಹಾಮ್ಕೋ ಇಂಡಸ್ಟ್ರೀಸ್ ವರ್ಕರ್ಸ್ ಯೂನಿಯನ್ನಿನ ಪ್ರತಿಷ್ಠಿತ ದ್ವೈವಾರ್ಷಿಕ ಚುನಾವಣೆಯಲ್ಲಿ ಕಾಮ್ರೆಡ್ ನಿತ್ಯಾನಂದಸ್ವಾಮಿ ನೇತೃತ್ವದ ಸಿಐಟಿಯು ತಂಡ ಜಯಶಾಲಿಯಾಗಿದೆ. ಸಂಘದ 6 ಪದಾಧಿಕಾರಿಗಳ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ 5 ಸ್ಥಾನಗಳಲ್ಲಿ ಎಐಟಿಯುಸಿ ಅಭ್ಯರ್ಥಿಗಳನ್ನು ಪರಾಭವಗೊಳಿಸಿ ಸಿಐಟಿಯು ತಂಡ ಜಯಗಳಿಸಿದೆ. ದ್ವಿತೀಯ ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಸಿಐಟಿಯು ಅಭ್ಯರ್ಥಿ ಕೇವಲ 3 ಮತಗಳ ಅಂತರದಿಂದ ಪರಾಭವಗೊಂಡಿದ್ದಾರೆ. ಇದಕ್ಕೂ ಮೊದಲು ಕಾರ್ಯಕಾರಿ ಸಮಿತಿಯ 9 ಸ್ಥಾನಗಳಿಗೆ 8 ಜನ ಸಿಐಟಿಯು ಬೆಂಬಲಿಗರನ್ನು ಮತ್ತು ಒಬ್ಬ ಎಐಟಿಯುಸಿ ಅಭ್ಯರ್ಥಿಯನ್ನು ಅವಿರೋಧವಾಗಿ ಆಯ್ಕೆಮಾಡಲಾಗಿತ್ತು. ಜಯಗಳಿಸಿದ ಪದಾಧಿಕಾರಿಗಳ ಯಾದಿ ಈ ಕೆಳಗಿನಂತಿದೆ.

ನಿತ್ಯಾನಂದಸ್ವಾಮಿ: ಅಧ್ಯಕ್ಷರು (ಸಿಐಟಿಯು)
ದಯಾನಂದಯ್ಯ ಹೆಚ್.ವಿ: ಪ್ರಥಮ ಉಪಾಧ್ಯಕ್ಷರು (ಸಿಐಟಿಯು)
ರೇವಣಪ್ಪ ಗ್ಯಾನಗೌಡರ: ದ್ವಿತೀಯ ಉಪಾಧ್ಯಕ್ಷರು (ಎಐಟಿಯುಸಿ)
ಜೆ.ಮೌಲಾಸಾಬ್: ಪ್ರಧಾನ ಕಾರ್ಯದರ್ಶಿ (ಸಿಐಟಿಯು)
ನಿಂಗಪ್ಪ ಬಕ್ಕಣ್ಣ : ಸಹ ಕಾರ್ಯದರ್ಶಿ
ವಿಶ್ವನಾಥ ಕೆ.ಎಸ್. : ಖಜಾಂಚಿ

ವರದಿ : ಬಸವನಗೌಡ

ಭಾರತ ಪ್ರಕಾಶಿಸುತ್ತಿದೆ, ಎಲ್ಲೆಡೆ ಹಿತಾನುಭವವಾಗುತ್ತಿದೆ. ಭಾರತದ ಉದಯ ಈಗಲೇ ಎಂದೆಲ್ಲಾ ಬೊಬ್ಬಿರಿದು ಪ್ರಚಾರಿಸುತ್ತಿದ್ದ ದೇಶದ್ರೋಹಿ ಬಿಜೆಪಿ-ಎನ್‌ಡಿಎ ಕೂಟಕ್ಕೆ ಭಾರತದ ಮಹಾನ್ ಜನತೆ ವಜ್ರಾಘಾತದ ಹೊಡೆದ ನೀಡಿ ಸೋಲಿನ ಸೆರೆಮನೆಗಟ್ಟಿದ್ದಾರೆ. ಈ ಬದಲಾದ ಸಂದರ್ಭದಲ್ಲಿ ಮುಂಬರುವ ಸರ್ಕಾರದ ಮುಂದೆ ಜನತೆಯ ನಿರೀಕ್ಷೆಗಳೇನು? ವಿಷಯ ಸೂಚಿಯೇನು ಎಂದು ಗುರುತಿಸಿದ್ದಾರೆ ಸೀತಾರಾಂ ಯೆಚೂರಿ.

ನೈಜ ಭಾರತ ಉದಯವಾಯಿತು

ನೈಜಭಾರತ ಉದಯವಾಯಿತು. ಭಾರತೀಯ ಜನತೆಯು ಆರ್.ಎಸ್.ಎಸ್/ಬಿಜೆಪಿ ನೇತೃತ್ವದ ಎನ್.ಡಿ.ಎಯನ್ನು ಈ ಚುನಾವಣೆಯಲ್ಲಿ ನಿರ್ಣಾಯಕವಾಗಿ ಸೋಲಿಸಿದ್ದಾರೆ. ಈ ಚುನಾವಣೆಯ ಮಹತ್ವವೆಂದರೆ ಭಾರತೀಯ ಗಣತಂತ್ರದ ಗುಣವನ್ನು ಬಿಂಬಿಸಿದ್ದು. ಆಧುನಿಕ ಭಾರತದ ಧರ್ಮನಿರಪೇಕ್ಷ ಪ್ರಜಾಪ್ರಭುತ್ವ ಗುಣವನ್ನು ಸುಮ್ಮನೆ ನಿರಾಕರಿಸಲಾಗದು ಎಂಬುದನ್ನು ಭಾರತೀಯ ಜನತೆ ಸರಿಸಾಟಿಯಿಲ್ಲದಂತೆ ಸಮರ್ಥಿಸಿಕೊಂಡಿದ್ದಾರೆ. ಆರ್.ಎಸ್.ಎಸ್/ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರ ಸಾರ್ವಜನಿಕ ಹಣವನ್ನು ವ್ಯಯಿಸಿ ಸೃಷ್ಟಿ ಮಾಡಲು ಹೊರಟಿದ್ದ 'ಭಾರತ ಹೊಳೆಯುತ್ತಿದೆ', 'ಹಿತಾನುಭವವಾಗುತ್ತಿದೆ' ಎಂಬ ಪೊಳ್ಳು ಪ್ರಚಾರವನ್ನು ತಿರಸ್ಕರಿಸಿದ್ದಾರೆ.

ವಾಜಪೇಯಿ ಸರ್ಕಾರ ತಂದ ನೀತಿಗಳೂ ಉಂಟು ಮಾಡಿದ ತೀವ್ರ ಕೃಷಿ ಬಿಕ್ಕಟ್ಟಿನಿಂದಾಗಿ ಜನತೆಯ ಜೀವನ ಬಾಧಾಜನಕವಾಗುತ್ತಿದ್ದುದನ್ನು ಅಣಕಿಸುತ್ತಿರುವುದಕ್ಕೆ ವಾಜಪೇಯಿಯವರು ಸರಿಯಾದ ಬೆಲೆಯನ್ನೇ ತೆತ್ತಿದ್ದಾರೆ. ಈ ಸರ್ಕಾರದ ನಿರ್ವಹಣೆಯನ್ನು ಒಟ್ಟಾರೆಯಾಗಿ ಈ ಸರ್ಕಾರ ತಂದ ವಿನಾಶಕಾರಿ, ಜನವಿರೋಧಿ ಆರ್ಥಿಕ ನೀತಿಗಳು ಜನತೆಯಲ್ಲಿ ಉಂಟುಮಾಡಿದ್ದ ವ್ಯಾಪಕ ಅತೃಪ್ತಿಯ ಫಲ ಎನ್ನಬಹುದಾಗಿದೆ.

ಸಿಪಿಐ(ಎಂ) ಮೂರು ಮುಖ್ಯ ಉದ್ದೇಶದೊಂದಿಗೆ ಈ ಚುನಾವಣೆಗೆ ಹೋಗಿತ್ತು.

1. ಕೋಮುವಾದಿ ಶಕ್ತಿಗಳನ್ನು ಸೋಲಿಸುವುದು.
2. ಕೇಂದ್ರದ ಜಾತ್ಯತೀತ ಪರ್ಯಾಯ ಸರ್ಕಾರವನ್ನು ಸ್ಥಾಪಿಸುವುದು.
3. ಲೋಕಸಭೆಯಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳ ಪ್ರಾತಿನಿಧ್ಯವನ್ನು ಹೆಚ್ಚಿಸಬೇಕು.

ಈ ಉದ್ದೇಶಗಳನ್ನು ಸಾಧಿಸಿದ್ದೇವೆ ಎಂದು ತೃಪ್ತಿಯಾಗಿ ಹೇಳಬಹುದು. ಸಿಪಿಐ(ಎಂ) ಈಗಾಗಲೇ 43 ಸ್ಥಾನಗಳನ್ನು ಗೆದ್ದಿದೆ. ಒಬ್ಬರು ಪಕ್ಷೇತರರಿಗೂ ನಾವು ಬೆಂಬಲ ನೀಡಿದ್ದೇವೆ. ನಾಲ್ಕು ಎಡ ಪಕ್ಷಗಳು 64 ಸ್ಥಾನಗಳನ್ನು ಗೆದ್ದಿವೆ. **ಸ್ವಾತಂತ್ರ್ಯ ನಂತರದಲ್ಲಿ ಭಾರತದ ಸಂಸತ್ತಿನಲ್ಲಿ ಎಡಪಕ್ಷಗಳ ಪ್ರಾತಿನಿಧ್ಯ ಇದು ಹೆಚ್ಚಿನದು.**

ಎಡಪಕ್ಷಗಳ ದಾಖಲೆ

ಸಿಪಿಐ(ಎಂ) ಮತ್ತು ಎಡಪಕ್ಷಗಳು ಮಾತ್ರವೇ ಭಾರತ ಮತ್ತದರ ಜನತೆಗಾಗಿ ನಿರಂತರವಾಗಿ ಮತ್ತು ರಾಜಿರಹಿತವಾಗಿ ಹೋರಾಡುತ್ತಿರುವವರು ಎಂಬುದನ್ನು ಜನರು ನೋಡಿದ್ದಾರೆ. ಧರ್ಮ ನಿರಪೇಕ್ಷತೆಯನ್ನು ಎತ್ತಿಹಿಡಿಯುವಲ್ಲಿ ಮತ್ತು ಕೋಮುಶಕ್ತಿಗಳನ್ನು ಎದುರಿಸುವಲ್ಲಿ ಎಡಪಕ್ಷಗಳ ಸಾಧನೆ ಹೋಲಿಕೆಯೇ ಇಲ್ಲದ್ದು. ಎಡಶಕ್ತಿಗಳು ಜನತೆಯ ಹಕ್ಕುಗಳ ಸಶಕ್ತ ರಕ್ಷಕರು ಮತ್ತು ಸರ್ಕಾರದ ವಿನಾಶಕಾರಿ ಆರ್ಥಿಕ ನೀತಿಗಳ ವಿರುದ್ಧದ ಹೋರಾಟಗಳಲ್ಲಿ ಮುಂಚೂಣಿಯಲ್ಲಿರುವವರು. ಅಷ್ಟೆ ಮುಖ್ಯವಾಗಿ ರಾಜಕೀಯ ನೈತಿಕತೆಯನ್ನು ಎತ್ತಿ ಹಿಡಿಯುವಲ್ಲಿ ಹಾಗೂ ಘನತೆಯಿಂದ ರಾಜಕೀಯವನ್ನು ಮಾಡುವುದರಲ್ಲಿ ಎಡಪಕ್ಷಗಳು ಬಹುದೊಡ್ಡ ದಾಖಲೆ ಹೊಂದಿದೆ. ಈ ಕಾರಣಗಳಿಗಾಗಿ ಎಲ್ಲೆಲ್ಲಿ ಕೋಮುವಾದಿ ಶಕ್ತಿಗಳಿಲ್ಲವೊ ಮತ್ತು ಕಾಂಗ್ರೆಸ್ ವಿರುದ್ಧ ಎಡಪಕ್ಷಗಳು ಸ್ಪರ್ಧಿಸಿದೆಯೋ ಅಲ್ಲಿ ಎಡಶಕ್ತಿಗಳಿಗೆ ಮಾನ್ಯತೆ ನೀಡಲಾಗಿದೆ. ಪಶ್ಚಿಮ ಬಂಗಾಳ ಮತ್ತು ಕೇರಳದ ಫಲಿತಾಂಶಗಳು ಇದನ್ನ ಸಾಬೀತುಪಡಿಸಿದೆ.

ಈ ಚುನಾವಣೆಗಳ ಸಂದೇಶ ಸ್ಪಷ್ಟ. ಇತ್ತೀಚಿನ ದಿನಗಳಲ್ಲಿ ಆರ್.ಎಸ್.ಎಸ್/ಬಿಜೆಪಿ ಸರ್ಕಾರ ಜಾರಿಗೊಳಿಸುತ್ತಿದ್ದ ಕೋಮುವಾದಿ ಅಜೆಂಡಾವನ್ನು ತಡೆಹಿಡಿಯುವುದು ಜನತೆಯ ಬಯಕೆಯಾಗಿದೆ. ಈ ಕೆಲಸವನ್ನು ಪರಿಪೂರ್ಣವಾಗಿ ಮಾಡಬೇಕಾಗಿದೆ. ಗುಜರಾತ್ ಘಟನೆಗಳು ಜನತೆಯ ಮನಸ್ಸಿನಲ್ಲಿ ಆಳವಾದ ಪರಿಣಾಮಗಳನ್ನು ಬೀರಿವೆ.

ಅಷ್ಟೇ ಮುಖ್ಯವಾಗಿ ಆರ್ಥಿಕ ಸುಧಾರಣೆಗಳು ಮತ್ತು ನೀತಿಗಳು ಜನತೆಯ ಕಲ್ಯಾಣಕ್ಕಾಗಿ ಇರಬೇಕು ಬಂಡವಾಳದಾರರ ಲಾಭಕ್ಕಲ್ಲ ಎಂಬುದನ್ನು ಜನತೆ ಸುಸ್ಪಷ್ಟವಾಗಿ ಸಮರ್ಥಿಸಿಕೊಂಡಿದ್ದಾರೆ. ಆದ್ದರಿಂದ ವಾಜಪೇಯಿ ಸರ್ಕಾರ ಸರಿಸುಮಾರು ಕಳಚಿಹಾಕಿದ್ದ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಪುನರ್‌ಸ್ಥಾಪಿಸಬೇಕು ಮತ್ತು ಉತ್ತಮಪಡಿಸಬೇಕೆಂಬುದು ಜನತೆಯ ಬಯಕೆಯಾಗಿದೆ. ಲಾಭದಾಯಕ ಸಾರ್ವಜನಿಕ ಉದ್ದಿಮೆಗಳನ್ನು ಮಾರಿ ಸಾರ್ವಜನಿಕ ಸಂಪತ್ತನ್ನು ಕೊಳ್ಳೆ ಹೊಡೆಯುವುದನ್ನು ನಿಲ್ಲಿಸಬೇಕೆಂಬುದೂ ಜನತೆಯ ಬಯಕೆಯಾಗಿದೆ. ಉದ್ಯೋಗ ಸೃಷ್ಟಿ ಮತ್ತು ಜನತೆಯ ಜೀವನ ಮಟ್ಟವನ್ನು ಉತ್ತಮಗೊಳಿಸುವುದಕ್ಕೆ ನಮ್ಮ ಆರ್ಥಿಕ ನೀತಿಗಳ ದಿಕ್ಕು ಬದಲಾಗಬೇಕಿದೆ. ಬಹುಪಾಲು ಜನತೆಗೆ ಭಾರತ ಹೊಳೆಯುವಂತೆ ಮಾಡಬೇಕಿದೆ. ಅಂದರೆ ನೈಜ ಭಾರತಕ್ಕಾಗಿ ನೂತನ ಜಾತ್ಯತೀತ ಸರ್ಕಾರ ಗಮನ ಹರಿಸಬೇಕಾದ ತಕ್ಷಣದ ಆದ್ಯತೆಯಾಗಿದೆ. ವಾಜಪೇಯಿ ಸರ್ಕಾರ ಮಾಡಿರುವ ಹಾನಿ ಮತ್ತು ದಿಕ್ಕು ಬದಲಾವಣೆಗಳನ್ನು ಸರಿಪಡಿಸಬೇಕಾದ ಇನ್ನೂ ಕೆಲವು ಮುಖ್ಯ ವಿಚಾರಗಳು. ಅತೀ ಮುಖ್ಯವಾದುದೇನೆಂದರೆ ವಾಜಪೇಯಿ ಅಧಿಕಾರಕ್ಕೆ ಬರುವ ಮೊದಲು ಇದ್ದಂತೆ ಭಾರತದ ವಿದೇಶಾಂಗ ನೀತಿಯನ್ನು ಬದಲಾಯಿಸುವುದು.

ಜನತೆಯ ಪರವಾದ ದೃಷ್ಟಿಕೋನವನ್ನು ಅಳವಡಿಸಿ ಕೊಳ್ಳುವುದರ ಮೂಲಕ ಜನತೆಯ ಹಿತರಕ್ಷಣೆ ಮಾಡುವಂತೆ ನೂತನ ಸರ್ಕಾರವನ್ನು ಒತ್ತಾಯಿಸಬೇಕು ಎಂಬುದು ಎಡಪಕ್ಷಗಳಿಗೆ ಜನತೆ ನೀಡಿರುವ ಬೆಂಬಲದ ಅರ್ಥವಾಗಿದೆ.

ಭಾರತದ ಜಾತ್ಯತೀತ, ಪ್ರಜಾಸತ್ತಾತ್ಮಕ ಗುಣವನ್ನು ರಕ್ಷಿಸುವ ಮತ್ತು ಜನತೆಯ ಹಿತಾಸಕ್ತಿಗಳನ್ನು ಮುಂದಕ್ಕೊಯ್ಯಲು ನಾವೆಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕಾಗಿದೆ.



ವಿಧಾನಸಭಾ ಚುನಾವಣೆಯಲ್ಲಿ ಸಿಪಿಐ(ಎಂ) ಪಡೆದ ಮತಗಳ ವಿವರ

2004 ರ ವಿಧಾನಸಭಾ ಚುನಾವಣೆಯಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಯು ಐದು ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಿತ್ತು.

ಕರ್ನಾಟಕದಲ್ಲಿ ಜನ ವಿರೋಧಿ, ಕಾಂಗ್ರೆಸ್ ಹಾಗೂ ಕೋಮುವಾದಿ ಬಿಜೆಪಿ ಕೂಟವನ್ನು ಸೋಲಿಸುವುದು ಮತ್ತು ಮೂರನೇ ಜಾತ್ಯತೀತ ಪರ್ಯಾಯದ ಗೆಲುವಿನ ಗುರಿಯೊಂದಿಗೆ ಚುನಾವಣಾ ಹೋರಾಟ ನಡೆಸಲು ಮುಂದಾಯಿತು.

ಇದರ ಭಾಗವಾಗಿ ಸಿಪಿಐ(ಎಂ) ಮತ್ತು ಜನತಾದಳ(ಜಾತ್ಯತೀತ) ಪಕ್ಷಗಳ ನಡುವೆ ಸ್ಥಾನ ಹೊಂದಾಣಿಕೆಯು ಏರ್ಪಟ್ಟು ಬಾಗೇಪಲ್ಲಿ, ಕಮಲಾಪುರ, ಉಳ್ಳಾಲ, ಕುಂದಾಪುರ - ಈ ನಾಲ್ಕು ಸ್ಥಾನಗಳಿಗೆ ಸ್ಪರ್ಧಿಸಲು ನಿರ್ಧರಿಸಲಾಯಿತು. ಆದರೆ ಉಳ್ಳಾಲದಲ್ಲಿ ಜನತಾದಳ(ಎಸ್) ಅಧಿಕೃತ ಅಭ್ಯರ್ಥಿಯು ಸ್ಪರ್ಧಿಸಿದರು. ಈ ಬಳಿಕ ಸಿಪಿಐ(ಎಂ)ನಿಂದ ರಾಮದುರ್ಗದಲ್ಲಿ ಸ್ಪರ್ಧಿಸಬೇಕಾಗಿ ಬಂತು. ರಾಜ್ಯದಲ್ಲಿ ಸಿಪಿಐ(ಎಂ) ಈ ವಿಧಾನಸಭೆ ಚುನಾವಣೆಯಲ್ಲಿ ಒಟ್ಟು ಐದು ಸ್ಥಾನಗಳಿಗೆ ಸ್ಪರ್ಧಿಸಿತು. ಈ ಪೈಕಿ ಬಾಗೇಪಲ್ಲಿ ಕ್ಷೇತ್ರದಿಂದ ಸಿಪಿಐ(ಎಂ)ನ ಅಭ್ಯರ್ಥಿ ಕಾಂ. ಜಿ.ವಿ.ಶ್ರೀರಾಮ ರೆಡ್ಡಿಯವರು ಆಯ್ಕೆಯಾಗಿದ್ದಾರೆ.

	2004 ರಲ್ಲಿ	1990 ರಲ್ಲಿ
ಬಾಗೇಪಲ್ಲಿ		
ಒಟ್ಟು ಮತದಾರರು	1,47,391	140,006
ಮತ ಹಾಕಿದವರು	109,996	107001
ಜಿ.ವಿ.ಶ್ರೀರಾಮರೆಡ್ಡಿ -ಸಿಪಿಐ(ಎಂ)	57,282	36885
ಸಂಪಂಗಿ ಎನ್- ಕಾಂಗ್ರೆಸ್	45997	40183(ಬಂಡಾಯ ಕಾಂಗ್ರೆಸ್)
ನರಸಾರೆಡ್ಡಿ-ಬಿಜೆಪಿ	3331	3473(ಜೆ.ಡಿ.ಯು)
ಕಾ.ಜಿ.ವಿ.ಶ್ರಿರಾಮರೆಡ್ಡಿಯವರು	11285	24134(ಕಾಂಗ್ರೆಸ್)
ಮತಗಳ ಭಾರಿ ಅಂತರದಿಂದ ಜಯಗಳಿಸಿದ್ದಾರೆ.		
ಕುಂದಾಪುರ		
ಒಟ್ಟು ಮತದಾರರು	1,57,423	143868
ಮತ ನೀಡಿದವರು	105,685	98882
ಶಂಕರ ಕೆ-ಸಿಪಿಐ(ಎಂ)	5173	ಸಿಪಿಐ(ಎಂ) ಸ್ಪರ್ಧಿಸಿರಲಿಲ್ಲ
ಅಶೋಕಕುಮಾರ್ ಹೆಗ್ಡೆ (ಕಾಂಗ್ರೆಸ್)	39258	47030 (ಪ್ರತಾಪ್ ಚಂದ್ರ ಶೆಟ್ಟಿ)
ಹೆಚ್.ಶ್ರಿನಿವಾಸ ಶೆಟ್ಟಿ (ಬಿಜೆಪಿ)	58923	48051
(1994 ರಲ್ಲಿ ಸಿಪಿಐ(ಎಂ)ನಿಂದ ಅಬ್ರಹಾಂ ಕರ್ಕಡ ಸ್ಪರ್ಧಿಸಿದ್ದು 5980 ಮತ ಪಡೆದಿದ್ದರು)		
ಕಮಲಾಪುರ (ಮೀಸಲುಕ್ಷೇತ್ರ)		
ಒಟ್ಟು ಮತದಾರರು	145,502	124862
ಮತ ನೀಡಿದವರು	76702	72993
ಮಾರುತಿ ಮಾನ್ಪಡೆ(ಸಿಪಿಐ-ಎಂ)	15296	14043
ರಾಮಕೃಷ್ಣ ಜಿ (ಕಾಂಗ್ರೆಸ್)	23740	18981
ರಾಮನಾಯಕ್(ಬಿಜೆಪಿ)	28,607	27531
ಭಾರತಿ ಕಣ್ಣೂರ್ (ಬಿಎಸ್‌ಪಿ)	4557	1302
ರಾಮದುರ್ಗ		
ಒಟ್ಟು ಮತದಾರರು	153,320	141469
ಮತ ನೀಡಿದವರು	104,389	96198
ವಿ.ಪಿ.ಕುಲಕರ್ಣಿ(ಸಿಪಿಐ(ಎಂ)	7162	ಸಿಪಿಐ(ಎಂ) ಸ್ಪರ್ಧಿಸಿರಲಿಲ್ಲ
		31485(ಬಿಜೆಪಿ)
ವೈ.ಮ.ಶಿವಲಿಂಗಪ್ಪ-ಬಿಜೆಪಿ	56585	31485(ಜೆಡಿಯು)
ಎ.ಮಹಾದೇವಪ್ಪ - ಕಾಂಗ್ರೆಸ್	31044	33779
ಮುಸ್ನೋಳಿ ತಿಪ್ಪಣ - ಜೆಡಿ(ಎಸ್)	5788	15969
(1994 ರಲ್ಲಿ ಸಿಪಿಐ(ಎಂ)ನಿಂದ ವಿ.ಪಿ.ಕುಲಕರ್ಣಿ ಸ್ಪರ್ಧಿಸಿದ್ದು 2989 ಮತಗಳನ್ನು ಪಡೆದಿದ್ದರು)		
ಉಳ್ಳಾಲ		
ಒಟ್ಟು ಮತದಾರರು	153,222	134,028
ಮತ ನೀಡಿದವರು	105,822	94248
ರಾಮಚಂದ್ರ ಉಚ್ಚಿಲ್ ಸಿಪಿಐ(ಎಂ)	7320	8141 (ಬಿ.ಮಾಧವ)
ಯು.ಟಿ ಫರೀದ್ (ಕಾಂಗ್ರೆಸ್)	47839	50134
ಚಂದ್ರಶೇಖರ್ ಉಚ್ಚಿಲ್ (ಬಿಜೆಪಿ)	40491	34881(ಜಯರಾಮ ಶೆಟ್ಟಿ)
ಜಯರಾಮಶೆಟ್ಟಿ (ಜೆಡಿಎಸ್)	8184	



ಜಿ.ಎಸ್.ಮಣಿ

ಬ್ಯಾಂಕ್ / ಫಂಡ್‌ಗಳ ಏಜೆಂಟರಿಗೆ ಒದೆ

ವಿಶ್ವಬ್ಯಾಂಕ್ ಮತ್ತು ಐಎಂಎಫ್‌ಗಳ ನೇರ ಏಜೆಂಟರಂತೆ ವರ್ತಿಸಿ ಈ ಎರಡು ಸಾಮ್ರಾಜ್ಯಶಾಹಿ ಸಂಸ್ಥೆಗಳ ನೀತಿಗಳನ್ನು ತತ್ತಶಃ ಅನುಷ್ಠಾನಗೊಳಿಸಿ ಅವರ ಶಹಬ್ಬಾಸ್‌ಗಿರಿ ಪಡೆದ ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರಿಗೆ ಜನತೆ ಒದೆ ಕೊಟ್ಟಿದ್ದಾರೆ.

ದೇಶದ ಹೈಟೆಕ್ ಮುಖ್ಯಮಂತ್ರಿ ಎಂದು ಹೆಸರು ಪಡೆದ ಈ ಮಹಾಶಯರು ಮಾಧ್ಯಮಗಳು ಅವರಿಗೆ ನೀಡಿದ ಪ್ರಚಾರದ ನಡುವೆ ಮತ್ತೇರಿದವರಂತೆ ನಡೆದುಕೊಳ್ಳುತ್ತಿದ್ದರು. ಜನಸಾಮಾನ್ಯರ ಕಷ್ಟ ಕೋಟಲೆಗಳಿಗೆ ಸಂಪೂರ್ಣ ಕುರುಡರಂತೆ ವರ್ತಿಸಿದ ಅವರು ಆಂಧ್ರ ಪ್ರದೇಶದ ಶ್ರೀಮಂತರು ಮಾತ್ರ ಸುಖದ ಸುಪ್ಪತ್ತಿಗೆಯಲ್ಲಿ ತೇಲಾಡಬೇಕು ಎಂಬ ಉದ್ದೇಶ ಇರುವವರಂತೆ ನಡೆದುಕೊಂಡಿದ್ದರು. ಆಂಧ್ರಪ್ರದೇಶದ ರಾಜಧಾನಿ ಹೈದರಾಬಾದನ್ನು ಅವರು ಅದರಂತೆ ಪರಿವರ್ತಿಸಿದ್ದರು. ಮಾಹಿತಿ ತಂತ್ರಜ್ಞಾನ ಮತ್ತು ಇತರ ಹೈಟೆಕ್ ಉದ್ದಿಮೆಗಳಿಗೆ ರತ್ನಗಂಬಳಿ ಹಾಸಿ ಸ್ವಾಗತ ಕೋರಿ ಜನಸಾಮಾನ್ಯರು ಈ ಉದ್ದಿಮೆಗಳಡಿ ನರಳಲೇ ಇರುವವರು ಎಂಬಂತೆ ನಡೆದುಕೊಂಡಿದ್ದರು.

ಒಂಬತ್ತು ವರ್ಷಗಳ ದೀರ್ಘ ಆಳ್ವಿಕೆಯ ನಂತರ ಜನ ಅವರಿಗೆ ಅವರ ಸ್ಥಾನವನ್ನು ತೋರಿಸಿದ್ದಾರೆ.

ಹಿಂದೆ ತೃತೀಯ ರಂಗದ ಸಂಚಾಲಕರಾಗಿದ್ದುಕೊಂಡು ಆ ರಂಗಕ್ಕೆ ದ್ರೋಹ ಬಗೆದು ಬಿಜೆಪಿ ನೇತೃತ್ವದ ಎನ್‌ಡಿಎ ಜತೆಗೆ ಕೈಗೂಡಿಸಿದ ಹೆಗ್ಗಳಿಕೆಯೂ ಅವರದು.

ಜನ ಇವೆಲ್ಲವುಗಳಿಗೆ ಸರಿಯಾದ ಉತ್ತರವನ್ನು ನೀಡಿದ್ದಾರೆ ಅಲ್ಲವೆ?

ಶೇರು ಸೂಚ್ಯಾಂಕವೆಂಬ ಸಾಮ್ರಾಜ್ಯಶಾಹಿಯ ಮಾಯಾವಿ

ಈ ಶೇರು ಪೇಟೆಯಲ್ಲಿ ಹೇಗೆ ವರ್ತಿಸುತ್ತದೆಂದರೆ ಅದರ ವರ್ತನೆ ನೋಡಿದರೆ ಅದು ಸಾಮ್ರಾಜ್ಯಶಾಹಿಯ ಮಾಯಾವಿ ಎಂಬುದು ಸ್ಪಷ್ಟವಾಗಿಯೇಬಿಡುತ್ತದೆ. ಸಾಮ್ರಾಜ್ಯಶಾಹಿಗಳಿಗೆ ಅನುಕೂಲವಾಗುವಂತಹ ಯಾವುದೇ ಘಟನೆಗಳು ನಡೆದರೂ ಈ ಸೂಚ್ಯಾಂಕ ಏರುತ್ತದೆ ಅನಾನುಕೂಲದ ಘಟನೆಗಳಾದರೆ ಸೂಚ್ಯಾಂಕ ಇಳಿದುಬಿಡುತ್ತದೆ.

ಕಳೆದ ಏಪ್ರಿಲ್ 27 ರಂದು ಈ ಸೂಚ್ಯಾಂಕ ಹೇಗೆ ಬಿದ್ದು ಹೋಯಿತೆಂದರೆ ಅದರಿಂದಾಗಿ ಐವತ್ತೈದು ಸಾವಿರ ಕೋಟಿ ರೂಪಾಯಿಗಳ ಕಾಗದದ ಆಸ್ತಿಯ ಹಾನಿಯಾಯಿತು. ಅಂದರೆ ಶೇರುಗಳ ಬೆಲೆ ಬಿದ್ದು ಹೋಗಿ ಅದರಿಂದ ಶೇರುದಾರರು 55 ಸಾವಿರ ಕೋಟಿ ರೂಪಾಯಿಗಳ ಹಾನಿ ಅನುಭವಿಸುವಂತಾಯಿತು ಯಾಕೆ? ಯಾಕೆಂದರೆ ಅಂದು ಮತಗಟ್ಟೆಗಳ ಸಮೀಕ್ಷೆಗಳು ಕೇಂದ್ರದ ಬಿಜೆಪಿ ನೇತೃತ್ವದ ಎನ್‌ಡಿಎ ಚುನಾವಣೆಗಳಲ್ಲಿ ಸೋಲಲಿದೆ ಎಂದು ಹೇಳಿದ್ದವು.

ಈ ಸೋಲಿಗೂ ಶೇರುಗಳ ಬೆಲೆಗೂ ಏನು ಸಂಬಂಧ? ಹಾಗೆ ಸಂಬಂಧವೇನೂ ಇಲ್ಲ. ಆದರೆ ಎನ್‌ಡಿಎ ಸೋಲುತ್ತಿದೆಯೆಂದರೆ ಅದರ ಆರ್ಥಿಕ ಸುಧಾರಣೆಗಳೂ ಸೋಲುತ್ತಿರುವುದೆಂದು ಅರ್ಥ. ಆರ್ಥಿಕ ಸುಧಾರಣೆಗಳ ಸೋಲೆಂದರೆ ಸಾಮ್ರಾಜ್ಯಶಾಹಿಗಳು ನಮ್ಮ ದೇಶವನ್ನು ತಮಗೆ ಬೇಕಾದಂತೆ ಕೊಳ್ಳೆಹೊಡೆಯಲು ತಡೆ ಉಂಟಾಗುತ್ತದೆಂದು ಅರ್ಥ. ಆದ್ದರಿಂದಲೇ ಶೇರು ಬೆಲೆಗಳ ಈ ವರ್ತನೆ.

ವಿದೇಶಿ ನೇರ ಹೂಡಿಕೆದಾರರೂ ತಮ್ಮ ಹೂಡಿಕೆಗಳನ್ನು ಹಿಂಪಡೆಯುವ ತರಾತುರಿಯನ್ನು ತೋರುತ್ತಿದ್ದಾರೆ. ಇಂತಹ ಪರಿಸ್ಥಿತಿಯಿಂದ ದೇಶದ ಆರ್ಥಿಕದ ಮೇಲೆ ಗಂಭೀರ ಪರಿಣಾಮಗಳು ಉಂಟಾಗುತ್ತದೆ. ವಿದೇಶಿ ವಿನಿಮಯದ 117 ಶತಕೋಟಿ ಡಾಲರುಗಳ ಶಿಲ್ಕು ಎಂದು ಬೀಗುತ್ತಿದ್ದ ಉಂದಾರೀಕರಣವಾದಿಗಳು ಈ ಶಿಲ್ಕು ಕರಗತೊಡಗಿದರೆ ಏನನ್ನುತ್ತಾರೋ?

ಒಂದು ಒಳ ಹುನ್ನಾರವಂತೂ ಸ್ಪಷ್ಟವಾಗಿ ಇಲ್ಲಿ ಕಾಣುತ್ತದೆ. ಆರ್ಥಿಕ ಉದಾರೀಕರಣದ ಮೂಲಕ ಇಡೀ ದೇಶದ ಸೂತ್ರಗಳನ್ನು ಸಾಮ್ರಾಜ್ಯಶಾಹಿಗಳಿಗೆ ನೀಡಿದಂತಾಗುತ್ತದೆ. ಅವರ ಇಚ್ಛೆಯಂತೆ ಸುಧಾರಣೆಗಳನ್ನು ಮಾಡಿದರೆ ವಿದೇಶಿ ನೇರ ಹೂಡಿಕೆಹರಿದುಬರುತ್ತದೆ. ನಮ್ಮ ಜನತೆ ಅಂತಹ ಸರ್ಕಾರವನ್ನು ಆರಿಸಿದರೆ ಒಳ್ಳೆಯದು. ಇಲ್ಲವಾದರೆ? ಇಲ್ಲವಾದರೆ ವಿದೇಶಿ ನೇರ ಹೂಡಿಕೆ ಹೊರಹರಿದು ಹೋಗುತ್ತದೆ. ಅದರಿಂದಾಗುವ ಪರಿಣಾಮಗಳಿಗೆ ಯಾರು ಜವಾಬ್ದಾರರು? ಇದು ಸಾಮ್ರಾಜ್ಯಶಾಹಿಯ ಬ್ಲಾಕ್‌ಮೇಲ್ ತಂತ್ರ ಅಲ್ಲವೇ? ಇದಲ್ಲವೆ ಮಾಯಾವಿ?

ಐಎಂಎಫ್‌ಗೆ ಹೊಸ ಮುಖ್ಯಸ್ಥರು

ವಿಶ್ವ ಹಣಕಾಸು ಸಂಸ್ಥೆ ಅಥವಾ ಐಎಂಎಫ್ ಸಾಮ್ರಾಜ್ಯಶಾಹಿಗಳ ಸಂಸ್ಥೆ. ಆದರೆ ಜಗತ್ತಿನ ಹಿತವನ್ನು ತಾನು ಬಯಸುವೆನೆಂಬಂತೆ ತನ್ನನ್ನು ಬಿಂಬಿಸಿಕೊಳ್ಳುತ್ತದೆ. ಅಲ್ಲೂ ಪ್ರಜಾಸತ್ತಾತ್ಮಕ ಆಡಳಿತ ಇದೆ ಎಂದು ಅದು ಹೇಳಿಕೊಳ್ಳುತ್ತದೆ.

ಆದರೆ ಐಎಂಎಫ್‌ನ ಹೊಸ ಮುಖ್ಯಸ್ಥರನ್ನು ನೋಡಿ. ಸ್ಪೇನ್ ದೇಶದ ರೊಡ್ರಿಗೊ ರಾಟೊ ಎಂಬುವರು ಈಗ ಹೊಸ ಮುಖ್ಯಸ್ಥರಾಗಿದ್ದಾರೆ. ಇದರಲ್ಲಿ ವಿಶೇಷವೇನು ಎಂದು ನೀವು ಕೇಳಬಹುದು. ವಿಶೇಷ ಅವರು ಯುರೋಪಿನ ಸಮುದಾಯದವರು. ಆದರೇನು? ಎಂಬುದು ಮುಂದಿನ ಪ್ರಶ್ನೆ. ಈ ಐಎಂಎಫ್‌ಗೆ ಅಭಿವೃದ್ಧಿಶೀಲ ದೇಶಗಳವರು ಮುಖ್ಯಸ್ಥರಾಗಿರಬಾರದೆ? ಯಾಕೆ ಎಂದು ಕೇಳಬಹುದು ನೀವು. ಯಾಕೆಂದರೆ ಐಎಂಎಫ್ ಅಭಿವೃದ್ಧಿಶೀಲ ಮತ್ತು ಬಡ ದೇಶಗಳಿಗೆ ಹಣಕಾಸು ನೆರವು ನೀಡುತ್ತದೆ. ಈ ಅಭಿವೃದ್ಧಿಶೀಲ ಮತ್ತು ಬಡ ದೇಶಗಳ ಅವಶ್ಯಕತೆಗಳೇನು ಅವರ ತೊಂದರೆಗಳೇನು ಎಂಬುದು ಅವರಿಗೇ ಚೆನ್ನಾಗಿ ಗೊತ್ತಿರುತ್ತದೆ. ಹಾಗಿರುವಾಗ ಈ ದೇಶದವರ್‍ಯಾರಾದರೂ ಮುಖ್ಯಸ್ಥರಾದರೆ ಹೆಚ್ಚು ಅರ್ಥಪೂರ್ಣವಲ್ಲವೆ? ಆದರೆ ಸಾಮ್ರಾಜ್ಯಶಾಹಿಗಳಿಗೆ ಈ ಸಂಸ್ಥೆಯ ಪೂರ್ತಿ ಹಿಡಿತ ತಮ್ಮ ಕೈಯಲ್ಲಿ ಇರಬೇಕು ಮತ್ತು ತಮಗೆ ಬೇಕಾದಂತೆ ಅದರ ನೀತಿಗಳಿರಬೇಕು ಎಂಬ ಹಠ. ಆದ್ದರಿಂದ ಸಾಮ್ರಾಜ್ಯಶಾಹಿ ದೇಶಗಳಿಂದಲೇ ಈ ಸಂಸ್ಥೆಗೆ ಮುಖ್ಯಸ್ಥರು ಆಯ್ಕೆಯಾಗುತ್ತಾರೆ.

ಎಡಪಕ್ಷಗಳ ಅಭೂತಪೂರ್ವ ಜಯಭೇರಿ......

ಪುಟ 7 ರಿಂದ

ಪುಲಿನ್ ಬಿಹಾರಿ ದೇವಾನ್‌ರನ್ನು ಸೋಲಿಸಿದ್ದಾರೆ. **ಈ ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತು ತೃಣಮೂಲ ಕಾಂಗ್ರೆಸ್ ಪಕ್ಷಗಳೂ ಸೇರಿದಂತೆ ಎಲ್ಲ ವಿರೋಧ ಪಕ್ಷಗಳ ಅಭ್ಯರ್ಥಿಗಳು ತಮ್ಮ ಠೇವಣಿಯನ್ನು ಕಳೆದುಕೊಂಡಿದ್ದಾರೆ.**

ತ್ರಿಪುರಾದ ಜನತೆ ಅಪಾರ ತ್ಯಾಗ ಬಲಿದಾನಗಳ ಮೂಲಕ ಎಡರಂಗವನ್ನು ಬೆಂಬಲಿಸುತ್ತಾ ಬಂದಿದ್ದಾರೆ. ಈ ಸಲವೂ ಎಟಿಟಿಎಫ್ ನಂತಹ ನಿಷೇಧಿತ ವಿಛಿದ್ರಕಾರಿ ಸಂಘಟನೆಯ ಬೆದರಿಕೆಯನ್ನು ಲೆಕ್ಕಿಸದೆ ಜನ ಮತದಾನದಲ್ಲಿ ಪಾಲ್ಗೊಂಡಿದ್ದಾರೆ. ಕಾಂಗ್ರೆಸ್, ಬಿಜೆಪಿ ಮತ್ತು ತೃಣಮೂಲ ಕಾಂಗ್ರೆಸ್ ಪಕ್ಷಗಳ ಜನ ಬೆಂಬಲ ಗಣನೀಯವಾಗಿ ಕುಸಿಯುತ್ತಿರುವುದು ಈ ಸಲದ ಫಲಿತಾಂಶಗಳು ಎತ್ತಿತೋರಿಸಿವೆ.

ಇತರ ರಾಜ್ಯಗಳಲ್ಲಿ ಎಡಪಕ್ಷಗಳ ಸಾಧನೆ:

ತಮಿಳುನಾಡಿನಲ್ಲಿ ಡಿಎಂಕೆ ಕೂಟದೊಂದಿಗೆ ಸ್ಥಾನ ಹೊಂದಾಣಿಕೆ ಮಾಡಿಕೊಂಡ ಸಿಪಿಐ(ಎಂ) ಮತ್ತು ಸಿಪಿಐ ತಲಾ ಎರಡು ಸ್ಥಾನಗಳಲ್ಲಿ ಸ್ಪರ್ಧಿಸಿ ಜಯಗಳಿಸಿವೆ.

ಈ ನಾಲ್ಕು ಕ್ಷೇತ್ರಗಳ ಪೈಕಿ ಸಿಪಿಐ(ಎಂ) ಮಧುರೈನಲ್ಲಿ ಎಐಡಿಎಂಕೆ ಅಭ್ಯರ್ಥಿಯನ್ನೂ, ನಾಗರಕೋಯಿಲ್ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಸೋಲಿಸಿದೆ. ಸಿಪಿಐ ಕೊಯಮತ್ತೂರ್ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಹಾಗೂ ತೆನ್ಕಾಸಿಯಲ್ಲಿ ಎಐಡಿಎಂಕೆ ಅಭ್ಯರ್ಥಿಯನ್ನು ಸೋಲಿಸಿದೆ.

ಆಂಧ್ರಪ್ರದೇಶದಲ್ಲಿ ಕಾಂಗ್ರೆಸ್‌ನೊಂದಿಗೆ ಸ್ಥಾನ ಹೊಂದಾಣಿಕೆ ಮಾಡಿಕೊಂಡ ಎಡಪಕ್ಷಗಳು ತಲಾ ಒಂದೊಂದು ಸ್ಥಾನಗಳಲ್ಲಿ ಸ್ಪರ್ಧಿಸಿ ಜಯಗಳಿಸಿವೆ.

ಜಾರ್ಖಂಡ್ ರಾಜ್ಯದ ಹಜಾರಿಬಾಗ್ ಕ್ಷೇತ್ರದಿಂದ ಸ್ಪರ್ಧಿಸಿದ್ದ ಸಿಪಿಐನ ಭುವನೇಶ್ವರ ಪ್ರಸಾದ್ ಮೆಹತಾ 1,05,328 ಮತಗಳ ಅಂತರದಿಂದ ಬಿಜೆಪಿಯ ಯಶವಂತ ಸಿನ್ಹಾರನ್ನು ಪರಾಭವಗೊಳಿಸಿದ್ದಾರೆ.


ಸಿಪಿಐ(ಎಂ) ಸಾಧನೆ :

ಹೀಗೆ ಎಡಪಕ್ಷಗಳು ಒಟ್ಟು 60 ಸ್ಥಾನಗಳನ್ನು ಗೆಲ್ಲುವ ಮೂಲಕ 14ನೇ ಲೋಕಸಭೆಯ ಸ್ವರೂಪವನ್ನು ಗಣನೀಯವಾಗಿ ಬದಲಾಯಿಸಿವೆ ಎಂದರೆ ತಪ್ಪಾಗಲಾರದು. ಎಡಪಕ್ಷಗಳು ಪಡೆದಿರುವ ಈ ಜನಾದೇಶವು ಎಡಪಕ್ಷಗಳ ಜವಾಬ್ದಾರಿಯನ್ನೂ ಸಹ ಹೆಚ್ಚಿಸಿದೆ. ಕೇಂದ್ರ ಸರ್ಕಾರದ ನೀತಿಗಳಲ್ಲಿ ಜನಪರ ಬದಲಾವಣೆ ತರುವಲ್ಲಿ ಎಡಪಕ್ಷಗಳು ತುಂಬಾ ಪ್ರಯಾಸ ಪಡಬೇಕಾಗಲಿದೆ. ದೇಶದ ಜಾತ್ಯತೀತ ಸ್ವರೂಪಕ್ಕೆ ಮಾಡಲಾಗಿರುವ ಹಾನಿಯನ್ನು ಸರಿಪಡಿಸುವುದೇ ಒಂದು ದೊಡ್ಡ ಕರ್ತವ್ಯವಾಗಲಿದೆ.

ಸಿಪಿಐ(ಎಂ) ಸಾಧನೆ ಅತ್ಯಂತ ಗಮನಾರ್ಹವಾಗಿದೆ. ಲೋಕಸಭೆಯಲ್ಲಿ ಸಿಪಿಐ(ಎಂ) ನ ಸಂಖ್ಯಾಬಲ 33 ರಿಂದ 44 ಕ್ಕೆ ಏರಿದೆ. ಗೆದ್ದಿರುವ ಸಿಪಿಐ(ಎಂ) ಅಭ್ಯರ್ಥಿಗಳಲ್ಲಿ ಹೆಚ್ಚಿನವರು ಭಾರಿ ಅಂತರದಿಂದ ಗೆದ್ದಿದ್ದಾರೆ. ಇವರ ಪೈಕಿ 5 ಜನ ಮಹಿಳೆಯರಿದ್ದಾರೆ. ಇವರ ಪೈಕಿ 8 ಜನ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಸೇರಿದವರೂ 5 ಜನ ಧಾರ್ಮಿಕ ಅಲ್ಪಸಂಖ್ಯಾತ ವಿಭಾಗಗಳಿಗೆ ಸೇರಿದವರೂ ಆಗಿರುತ್ತಾರೆ. ಸಿಪಿಐ(ಎಂ)ನ ಈ ಸಾಧನೆ ದೇಶಾದ್ಯಂತ ಜನತೆಯಲ್ಲಿ ಹೊಸ ಭರವಸೆಯನ್ನು ಮೂಡಿಸಿದೆ.

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ





‘ಎಲ್ಲರಿಗೂ ಆರೋಗ್ಯ ಈಗಲೇ’

ಜನಾರೋಗ್ಯಕ್ಕೆ ಜನಾಂದೋಲನ (ಮುಂಬೈ ಘೋಷಣೆ)

ಜಾಗತೀಕರಣ ನೀತಿಯನ್ನು ವಿಲ್ಲಿಸಿ

ಜಾಗತೀಕರಣ ಪ್ರಕ್ರಿಯೆ ಭರದಿಂದ ಮುಂದೆ ಸಾಗಿದೆ. ಈ ಸಂಸ್ಥಾಧಾರಿತ ಜಾಗತೀಕರಣ ನೀತಿ ಜನಾರೋಗ್ಯವನ್ನು ಕಡೆಗಣಿಸಿದೆ ಹಾಗೂ ಅಪಾಯವನ್ನು ತಂದೊಡ್ಡಿದೆ. ಅಂತರಾಷ್ಟ್ರೀಯ ಆರ್ಥಿಕ ನಿಧಿ, ವಿಶ್ವಬ್ಯಾಂಕ್, ವಿಶ್ವ ವ್ಯಾಪಾರ ಸಂಘಟನೆಗಳು ಜನಾರೋಗ್ಯದ ಹೆಸರಿನಲ್ಲಿ ತಮ್ಮ ಸಂಸ್ಥೆಯ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಮುಂದುವರೆದಿದೆ. ಜಾಗತೀಕರಣ ನೀತಿಗೆ ಪರ್ಯಾಯವಿಲ್ಲವೆಂದು (there is no alternative - TINA) ಹೇಳುತ್ತಿವೆ.

ಬೌದ್ಧಿಕ ಆಸ್ತಿಯ ರಕ್ಷಣೆಯಿಂದ (ಟ್ರಿಪ್ಸ್, ಒಪ್ಪಂದ) ಹಾಗೂ ಅಸಮರ್ಪಕ ವ್ಯಾಪಾರಿ ಅಭ್ಯಾಸಗಳಿಂದ (ಗ್ಯಾಟ್ಸ್) ಜನಾರೋಗ್ಯಕ್ಕೆ ದಕ್ಕೆಯಾಗಿದೆ. ಉದಾ. ತಂಬಾಕಿನ ವ್ಯಾಪಾರ.

ನೀರು, ವಿದ್ಯುತ್, ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರವನ್ನು ಖಾಸಗೀಗೊಳಿಸುವ ಪಿಡುಗು ರಚನಾತ್ಮಕ ಹೊಂದಾಣಿಕೆಯ ಕಾರ್ಯಕ್ರಮದಿಂದ ಪ್ರೇರಿತವಾದದ್ದು. ಇದು ಜನಾರೋಗ್ಯ ನೀತಿಯ ಆಧಾರವನ್ನೇ ಕಿತ್ತು ಹಾಕಿದೆ. ಖಾಸಗೀ-

ಎಲ್ಲಾ ಜನರ ಆರೋಗ್ಯವನ್ನು ಕಾಪಾಡುವಲ್ಲಿ ಏನು ಮಾಡಬೇಕು? ಜನಾಂದೋಲನದ ಮುಂದಿರುವ ಕರ್ತವ್ಯ, ಗುರಿಗಳೇನು

ಸಾರ್ವಜನಿಕ ಒಪ್ಪಂದಗಳನ್ನು ವಿಶ್ವ ಬ್ಯಾಂಕ್ ಹಾಗೂ ಅಂತರಾಷ್ಟ್ರೀಯ ಆರ್ಥಿಕ ಸಂಸ್ಥೆಗಳು ಪ್ರಸ್ತಾಪಿಸುತ್ತಿವೆ, ವಿಶ್ವ ಆರೋಗ್ಯ ಸಂಸ್ಥೆ ಅದನ್ನು ಪ್ರೋತ್ಸಾಹಿಸುತ್ತಿವೆ! ಇದರಿಂದಾಗಿ ಆರೋಗ್ಯ ಕ್ಷೇತ್ರದ ಜವಾಬ್ದಾರಿಯನ್ನು ಸರ್ಕಾರ ಹೊತ್ತುಕೊಳ್ಳದೆ ಖಾಸಗೀ ಕ್ಷೇತ್ರಕ್ಕೆ ವಹಿಸಿದಂತಾಗಿದೆ. “ಆರೋಗ್ಯ ಒಂದು ಮಾನವ ಹಕ್ಕು” ಎಂದು ಪರಿಗಣಿಸದೇ ಕೇವಲ ‘ಕೊಂಡುಕೊಳ್ಳಬಹುದಾದ ವಸ್ತು’ ಎಂದು ಬದಲಾಯಿಸಿದಂತಾಗಿದೆ.

ಇತ್ತೀಚೆಗೆ ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಜಾರಿಗೆ ಬಂದ ಉಪಯೋಗ ಶುಲ್ಕ (user free) ಹೆಚ್ಚು ಜನರನ್ನು ಬಡವರಿಗೆ ‘ಉಪಯೋಗ ಶುಲ್ಕ’ ಕೊಡಲು ಆಗುವುದಿಲ್ಲ) ಆರೋಗ್ಯದಿಂದ ವಂಚಿತರನ್ನಾಗಿ ಮಾಡಿದೆ.

ನಾಗರೀಕ ಸಮಾಜ, ಸರಕಾರ ಏನು ಮಾಡಬಹುದು?

ವಿಶ್ವ ಬ್ಯಾಂಕ್ ಹಾಗೂ ಅಂತರಾಷ್ಟ್ರೀಯ ಆರ್ಥಿಕ ನಿಧಿ ರಚನಾತ್ಮಕ ಹೊಂದಾಣಿಕೆ ನೀತಿಯಿಂದ ಜನಾರೋಗ್ಯದಲ್ಲಿ ಉಂಟಾದ ಬಿಕ್ಕಟ್ಟನ್ನು ಒಪ್ಪಿಕೊಳ್ಳಲಿ

ಮುಂದಿನವಾರಕ್ಕೆ

ವಿಯೆಟ್ನಾಂ ವಿಮೋಚನೆಗೆ ನಾಂದಿ ಹಾಡಿದ ಚಾರಿತ್ರಿಕ ದಿನ್-ಬಿನ್-ಫ್ಯೂ ಯುದ್ಧದ ಸುವರ್ಣೋತ್ಸವ

ಚಾರಿತ್ರಿಕ ದಿನ್-ಬಿನ್-ಫ್ಯೂ ಯುದ್ಧದ ಸುವರ್ಣೋತ್ಸವವನ್ನು ಕಳೆದ ವಾರ ಮೇ 7 ರಂದು ಜಗತ್ತಿನಾದ್ಯಂತ ಆಚರಿಸಲಾಯಿತು. ದಿನ್-ಬಿನ್-ಫ್ಯೂ ಯುದ್ಧ 20ನೇ ಶತಮಾನದ ಮಹಾನ್ ಯುದ್ಧಗಳಲ್ಲಿ ಒಂದು ಮಾತ್ರವಲ್ಲ. ವಿಯೆಟ್ನಾಮ್ ವಿಮೋಚನೆಗೆ ನಾಂದಿ ಹಾಡಿದ ಮಹಾನ್ ಸ್ಮರಣೀಯ ಯುದ್ಧ.

ದಿನ್-ಬಿನ್-ಫ್ಯೂ ವಿಯೇಟ್ನಾಮಿನ ವಾಯುವ್ಯ ಭಾಗದ ಲಾವೋಸ್ ಜತೆ ಇರುವ ಗಡಿಭಾಗದಲ್ಲಿರುವ ಕಣಿವೆ ಪ್ರದೇಶ. ಅದು ಫ್ರೆಂಚ್ ವಸಾಹತುಶಾಹಿ ಸೈನ್ಯದ ಬೀಡು ಬಿಟ್ಟಿದ್ದ ಬಲಾಢ್ಯ ಕೋಟೆಯಾಗಿತ್ತು. ಮಾರ್ಚ್ 13, 1954ರಂದು ಆರಂಭವಾಗಿ ಫ್ರೆಂಚ್ ಸೈನ್ಯವನ್ನು ಸುತ್ತುವರೆದು, 55 ದಿನಗಳ ಮಹಾನ್ ಧೀರೋದ್ದಾತ ಯುದ್ಧದ ನಂತರ ಸೋಲಿಸಿದ್ದು ಈ ಯುದ್ಧದ ವಿಶೇಷ. ಈ ಯುದ್ಧವನ್ನು ವಿಯೆಟ್‌ಮಿನ್(ವಿಯೆಟ್ನಾಮ್ ಕಮ್ಯುನಿಸ್ಟ್ ಪಾರ್ಟಿಯ ನಾಯಕತ್ವದ ಜನತಾ ಸೈನ್ಯ) ಅತ್ಯಂತ ಕಷ್ಟದ ಸನ್ನಿವೇಶದಲ್ಲಿ ಹೂಡಿತ್ತು.

ಒಂದುವರೆ ತಿಂಗಳ ದಿಟ್ಟ ದುರ್ಗಮ ಹೋರಾಟದ ನಂತರ ಮೇ 7ರಂದು ವಿಯೆಟ್‌ಮಿನರು ಫ್ರೆಂಚ್ ಮಿಲಿಟರಿ ಮೇಲೆ ಯುದ್ಧ ಗೆದ್ದಿದ್ದರು. ಫ್ರೆಂಚ್ ಸೈನ್ಯ ಶರಣಾಗಿತ್ತು. ದಿನ್-ಬಿನ್-ಫ್ಯೂ ಫ್ರೆಂಚ್ ವಸಾಹತುಶಾಹಿಯ ಲಿನ್‌ಸಾನದ ಪ್ರತೀಕವಾಯಿತು. ಒಂದು ಸಣ್ಣ ವಸಾಹತು ದೇಶ, ಫ್ರೆಂಚ್ ಸಾಮ್ರಾಜ್ಯಕ್ಕೆ ಸವಾಲು ಹಾಕಿ, ಅದನ್ನು ನಿರ್ಣಾಯಕವಾಗಿ ಸೋಲಿಸಿತ್ತು. ಇದರ ಮಾರ್ದನಿ ಇಡೀ ಜಗತ್ತಿನಲ್ಲಿ ಕೇಳಿ ಬಂತು.

ವಿಯೆಟ್‌ಮನ್ ಸೈನ್ಯದ ನಾಯಕತ್ವವನ್ನು ದಂತಕತೆಯಾಗಿರುವ ಜನರಲ್ ಫ್ಯೂ ನಗುಯೆನ್ ಗಿಯಾಪ್ ವಹಿಸಿದ್ದರು. ಗಿಯಾಪ್ ಈ ಚಾರಿತ್ರಿಕ ವಿಜಯದ ಬಗ್ಗೆ ಹನೋಯ್‌ನಲ್ಲಿ ನಡೆದ ಇತ್ತೀಚಿನ ಸೆಮಿನಾರ್ ಒಂದರಲ್ಲಿ ಈ ರೀತಿ ಹೇಳಿದ್ದರು: 'ದಿನ್-ಬಿನ್-ಫ್ಯೂ ಜಗವನ್ನು ನಡುಗಿಸಿತ್ತು. ಅದರ ಮಾರ್ದನಿ ಜಗತ್ತಿನ ದುರ್ಗಮ ದೂರದ ಪ್ರದೇಶಗಳಿಗೂ ಕೇಳಬಂದಿತ್ತು. ಗುಲಾಮಗಿರಿಯಲ್ಲಿ ನರಳುತ್ತಿದ್ದ.. ಎಲ್ಲರನ್ನೂ, ಎದ್ದು ನಿಲ್ಲುವುದಕ್ಕೆ ಆತ್ಮವಿಶ್ವಾಸ ಮೂಡಿಸಿತ್ತು'.

ಅಗಸ್ಟ್ 1945ರ ಸುಮಾರಿಗೆ ಆಗಲೇ, ಉತ್ತರ ವಿಯೇಟ್ನಾಮಿನಲ್ಲಿ ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲಿ ಮೊದಲ ಕ್ರಾಂತಿಕಾರಿ ಸರ್ಕಾರ ಸ್ಥಾಪಿಸಿತ್ತು. ಎರಡನೇ ಮಹಾಯುದ್ಧಾ ನಂತರ ಫ್ರೆಂಚ್ ಸೈನ್ಯ ವಾಪಸು ಬಂದು ವೆಯೇಟ್‌ಮಿನ್‌ರನ್ನು ಹತ್ತಿಕ್ಕಿ, ವಸಾಹತುಶಾಹಿ ಆಡಳಿತ ಮತ್ತೆ ಸ್ಥಾಪಿಸಿತ್ತು. ದಿನ್-ಮಿನ್‌ಫ್ಯೂನ ವಿಜಯ ಫ್ರೆಂಚರನ್ನು ಹಿಮ್ಮೆಟ್ಟಿಸಲು ಸಫಲವಾಗಿತ್ತು. ಈ ವಿಜಯದ ಪರಿಣಾಮವಾಗಿ ಜಿನಿವಾದಲ್ಲಿ ಅಂತರರಾಷ್ಟ್ರೀಯ ಸಮ್ಮೇಳನ ನಡೆದು, ಹೊ-ಚಿ-ಮಿನ್‌ರ ನಾಯಕತ್ವದಲ್ಲಿ ಉತ್ತರ ವಿಯೇಟ್ನಾಮಿನಲ್ಲಿ ಸರ್ಕಾರವನ್ನು ಮಾನ್ಯ ಮಾಡಬೇಕಾಗಿ ಬಂದಿತ್ತು.

ದಿನ್-ಮಿನ್-ಫ್ಯೂನಲ್ಲಿ ಫ್ರೆಂಚರು ಅತ್ಯಂತ ಭದ್ರವಾದ ನೆಲೆ ಸ್ಥಾಪಿಸಿದ್ದರು. ಈ ನೆಲೆಯೂ ವಿಯೇಟ್ನಾಮ್‌ರನ್ನು ಯುದ್ಧಕ್ಕೆಳೆದು ನಾಶಮಾಡುವುದು ಅವರ ಹಂಚಿಕೆಯಾಗಿತ್ತು. ಅಮೆರಿಕದ ಮಿಲಿಟರಿ ಬೆಂಬಲ ಸಹ ಅವರಿಗಿತ್ತು. ಜನತಾ ಸೈನ್ಯ ಈ ಸವಾಲನ್ನು ಸ್ವೀಕರಿಸಿತ್ತು. ಗಿಯಾಟ್ ನಾಯಕತ್ವದಲ್ಲಿ ವಿಯೆಟ್‌ಮಿನ್ ಫ್ರೆಂಚ್ ನೆಲೆ ಮೇಲೆ ಧಾಳಿ ಮಾಡಲು ವಿವರವಾದ ಯೋಜನೆ ತಯಾರಿಸಲಾಯಿತು. ಮಾರ್ಚ್ 1954ರ ಹೊತ್ತಿಗೆ ಫ್ರೆಂಚ್ ಸೈನ್ಯದ ಬಲ 16 ಸಾವಿರಕ್ಕೆ ಏರಿತ್ತು. ಗಿಯಾಟ್ ಅದನ್ನು



ಸುತ್ತುವರೆಯಲು 50 ಸಾವಿರದಷ್ಟು ವಿಯೇಟ್ನಾಮ ಸೈನ್ಯ ಮತ್ತು ಗೆರಿಲ್ಲಾಗಳನ್ನು ನಿಯೋಜಿಸಿದ್ದರು. ಸಾವಿರಾರು ಜನ ಭಾರಿ ತೋಪುಗಳನ್ನು ವಿ... ಮೇಲೆ ಸಾಗಿಸಲು ಹೋಗಿದ್ದರು. ನೂರಾರು ಕಿಲೋಮೀಟರ್ ಉದ್ದದ ಸುರಂಗ ಮತ್ತು ಕಂದಕಗಳನ್ನು ಯುದ್ಧಕ್ಕಾಗಿ ತೊಡಲಾಗಿತ್ತು. ಇದು ಮಾನವ ತಾಳ್ಮೆ ಮತ್ತು ಶ್ರಮದ ಮೇಲೆ ಮಾಡುವಂತಿತ್ತು.

ಗಿಯಾಟ್ ಜನತಾ ಸೈ... ಬಗ್ಗೆ ಹೀಗೆ ಹೇಳಿದ್ದರು: 'ನಮ್ಮ ಜನತಾ ಸೈನ್ಯ ಜನತೆಯದ್ದು, ಕಾರ್ಮಿಕರದ್ದು ರೈತರು ಮತ್ತು ದುಡಿಯುವ ಜನರ ಸೈನ್ಯ. ಕಾರ್ಮಿಕ ವರ್ಗದ ಪಕ್ಷದ ನಾಯಕತ್ವದ ಸೈನ್ಯ' ಇಂತಹ ಸೈನ್ಯ ರಾಷ್ಟ್ರೀಯ ವಿಮೋಚನೆ ಬಗ್ಗೆ ಇಡೀ ವಿಯೇಟ್ನಾಮ ಜನತೆಯ ಧೃಡ ಶ್ರಮದ ಪ್ರತೀಕವಾಗಿತ್ತು. ಆದ್ದರಿಂದ ಅಜೇಯವಾಗಿತ್ತು.

ದಿನ್-ಬಿನ್-ಫ್ಯೂ ವಿಯೇಟ್ನಾಮದ ರಾಷ್ಟ್ರೀಯ ವಿಮೋಚನೆಯ ಹೋರಾಟದ ಮೊದಲ ಹಂತದ ಅಂತಿಮ ಘಟ್ಟವಾಗಿತ್ತು. ಮುಂದೆ ಅಮೇರಿಕ ದಕ್ಷಿಣ ವಿಯೇಟ್ನಾಮನ ಕೈಗೊಂಬೆ ಸರ್ಕಾರದ ಪರವಾಗಿ ಮಿಲಿಟರಿ ಮಧ್ಯಪ್ರವೇಶ ಮಾಡಿದಾಗ ಇದೇ ಸೈನ್ಯ ಮತ್ತು ಜನ ಎರಡನೇ ಹಂತದ ಹೋರಾಟ ಆರಂಭಿಸಿದರು. ಇಡೀ ದೇಶವನ್ನು ವಿಮೋಚನೆಗೊಳಿಸಿ ದಕ್ಷಿಣ ಮತ್ತು ಉತ್ತರ ವಿಯೆಟ್ನಾಮ್‌ಗಳನ್ನು ಐಕ್ಯಗೊಳಿಸಲು, 21 ವರ್ಷಗಳ ಕಾಲ ಹಲ್ಲುಕಚ್ಚಿ ಜೀವನ್ಮರಣದ ಹೋರಾಟ ನಡೆಸಬೇಕಾಯಿತು.

ಅಂತಹ ಚಾರಿತ್ರಿಕ ಕ್ಷಣ ಏಪ್ರಿಲ್ 30, 1975 ರಂದು ಬಂತು. ಈ ವರ್ಷ ವಿಯೇಟ್ನಾಮ ಜನತೆ ಮತ್ತು ಕಮ್ಯುನಿಸ್ಟ್ ಪಕ್ಷ ದಿನ್-ಬಿನ್-ಫ್ಯೂ ನ ಸುವರ್ಣೋತ್ಸವ ಮತ್ತು ಫ್ಯೂ ವಿಮೋಚನೆಯ 29ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದ್ದಾರೆ. ವಿಯೆಟ್ನಾಮ ಜನತೆ ಮತ್ತು ಕಮ್ಯುನಿಸ್ಟ್ ಪಕ್ಷದ ನಾಯಕತ್ವ ... ಚಮತ್ಕಾರಗಳ ಬಗ್ಗೆ ಮೆಚ್ಚು... ಸಂದರ್ಭ ಇದು. ಇಡೀ ಜಗತ್ತಿನ ವಿಮೋಚನೆಗಾಗಿ ತವಕಿಸುತ್ತಿರುವ ಜನತೆ ಈ ಚಾರಿತ್ರಿಕ ಸಂದರ್ಭದಲ್ಲಿ ಅವರನ್ನು ಅಭಿನಂದಿಸುತ್ತಿದ್ದಾರೆ.

........ಚುನಾವಣೆಗಳು ಜನತೆ ಕಲಿಸಿದ ಪಾಠಗಳು

ಪುಟ 2 ರಿಂದ

ಮುಖ್ಯಮಂತ್ರಿಗಳು ಅನುಸರಿಸಿದ ನೀತಿ ಅದು ಈ ಭಿಕ್ಕೆ ಹಾಕುವ ನೀತಿಯನ್ನು ಭಾರತದ ಮತದಾರ ನಿರಾಕರಿಸಿದ್ದಾನೆ.

ಪ್ರಜಾಪ್ರಭುತ್ವೀಯ, ಎಡ ಮಾದರಿ ಉತ್ತುಂಗಕ್ಕೆ

ಆದರೆ ಸಮಯದಲ್ಲಿ ಪತ್ರಿಕೆಗಳಲ್ಲಿ ದೂರದರ್ಶನಗಳಲ್ಲಿ ಪ್ರಕಾಶಮಾನವಾಗದ ಬಂಡವಾಳಶಾಹಿಗಳ ಮೆಚ್ಚಿಗೆ ಹೊಳೆ ಹರಿಯದ ಪ.ಬಂಗಾಳ, ತ್ರಿಪುರಾಗಳಲ್ಲಿ ಮತ್ತು ಕೇರಳದಲ್ಲಿ ಜನರಿಗೆ ವರ್ಷದ ಎಲ್ಲಾ ಕಾಲವೂ ಊಟವನ್ನು ಖಾತರಿಗೊಳಿಸುವ (ಊಟ ಹಾಕುವ ಅಲ್ಲ) ಭೂಮಿ ಕನಿಷ್ಟ ಕೂಲಿ, ಕೆಲಸ, ವಿಸ್ತಾರವಾದ ರೇಷನ್ ಅಂಗಡಿಗಳು, ಕುಟುಂಬದ ಜನಸಂಖ್ಯೆಗಳಿಗನುಗುಣವಾಗಿ ಆಹಾರ ಧಾನ್ಯಗಳ ಪ್ರಮಾಣ, ರೈತರ ಫಸಲಿಗೆ ಬೆಂಬಲ ಬೆಲೆ, ಬೆಲೆ ಕುಸಿದರೆ ಸರ್ಕಾರವೇ ನೇರವಾಗಿ ಕೊಳ್ಳುವ ರಕ್ಷಣೆ, ನೀರಾವರಿ ಸೌಲಭ್ಯಗಳು, ಸಣ್ಣ ರೈತರಿಗೆ, ಗೇಣಿದಾರರಿಗೆ ಸಾಲ ರಸಗೊಬ್ಬರ ಮೊದಲಾದ ಸಾಮಗ್ರಿಗಳು ಇತ್ಯಾದಿ ತಮ್ಮ ಕಾಲ ಮೇಲೆ ನಿಂತು ತನ್ನ ಊಟವನ್ನು ತಾವೇ ಕಂಡುಕೊಳ್ಳುವ ನೀತಿಗಳು ಪರ್ಯಾಯ ಆರ್ಥಿಕ ನೀತಿಗಳಿಗೆ ಮತದಾರ ಒಲಿದಿದ್ದಾನೆ. ಆಡಳಿತದ ನಿಜವಾದ ವಿಕೇಂದ್ರೀಕರಣ, ಜನರಿಂದಲೇ ರೂಪಿತವಾದ ಯೋಜನೆಗಳ ಪ್ರಜಾಪ್ರಭುತ್ವದ ಅತ್ಯುತ್ತಮ ಮಾದರಿಯ ಆಡಳಿತಕ್ಕೆ ಉಘೆ,ಉಘೆ ಎಂದಿದ್ದಾನೆ. ಕೇರಳ, ತ್ರಿಪುರಾಗಳಲ್ಲಿ ಕಾಂಗ್ರೆಸ್ಸಿಗೆ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಮತ್ತು ಅದರ ಕೂಟಕ್ಕೆ ಮಣ್ಣು ಮುಕ್ಕಿಸಿದ್ದಾನೆ.

ಎಸ್.ಎಂ.ಕೃಷ್ಣರ ಕಣ್ಣಿನ ಕುರುಡಿಗೆ ಜನರು ಮಾಡಿದ ಆಪರೇಷನ್ ಯಶಸ್ವಿಯಾದರೆ ಈ ಸತ್ಯ ಕಣ್ಣಿಗೆ ಕಂಡೀತು. ದೇಶದಲ್ಲಿ ಎಡಪರ್ಯಾಯ ಆರ್ಥಿಕ ನೀತಿಗಳ ಹಾಗೂ ಪ್ರಜಾಪ್ರಭುತ್ವೀಯ ಮುಖ್ಯಮಂತ್ರಿ ಮಾದರಿಯ ವಿಜಯ ಹಾಗೂ ವಿಶ್ವಬ್ಯಾಂಕ್ ಪ್ರಣೀತ ಜಾಗತೀಕರಣ ನೀತಿಯ ಸೋಲು ಎಂಬುದು.

ಬಿಜೆಪಿಗೆ ಕಾಂಗ್ರೆಸ್‌ನ ಕೊಡುಗೆ

ಕೃಷ್ಣರ ಆಡಳಿತದಲ್ಲಿ ಕೋಮುವಾದದ ಬೆಳವಣಿಗೆಗೆ ನೀರೆರೆದ ರೀತಿಯನ್ನು ಇದೇ ಸಂಚಿಕೆಯೂ ಇನ್ನೊಂದು ಲೇಖನದಲ್ಲಿ ವಿವರಿಸಲಾಗಿದೆ. ಆದರೆ ದೇಶಾದ್ಯಂತ ಕಾಂಗ್ರೆಸ್ ಸರ್ಕಾರಗಳು - ಮಧ್ಯಪ್ರದೇಶದ ರಾಜಸ್ಥಾನ, ಛತ್ತೀಸ್‌ಗಡಗಳಿಂದ ಆರಂಭವಾಗಿ ಕರ್ನಾಟಕಕ್ಕೆ ಮಹಾರಾಷ್ಟ್ರ, ಪಂಜಾಬ್‌ಗಳಲ್ಲಿ ಅನುಸರಿಸಿದ ಜಾಗತೀಕರಣ ನೀತಿಗಳ ಫಲವಾಗಿ ಬಿಜೆಪಿಗೆ ಎಂತಹ ದೊಡ್ಡ ಕೊಡುಗೆಯನ್ನು ಕೊಟ್ಟಿದೆ ಎಂಬುದನ್ನು ಗಮನಿಸಿ ಕರ್ನಾಟಕದ 18, ಪಂಜಾಬಿನ 10 ಸೇರಿದಂತೆ ಈ ಎಲ್ಲ ರಾಜ್ಯಗಳಲ್ಲಿ ಕಾಂಗ್ರೆಸ್ ದುರಾಡಳಿತದ ಬೇಸತ್ತ ಜನರು ಬೇರೆ ಪರ್ಯಾಯವಿಲ್ಲದೆ ಬಿಜೆಪಿಯ ಲೋಕಸಭಾ ಸ್ಥಾನಗಳ ಸಂಖ್ಯೆಯನ್ನು ಹೆಚ್ಚಿಸದಿದ್ದರೆ ಬಿಜೆಪಿಯ ಸ್ಥಿತಿ ಹೇಗಿರುತ್ತಿತ್ತು. ಎಸ್.ಎಂ.ಕೃಷ್ಣ ಹಾಗೂ ಕಾಂಗ್ರೆಸ್ ಪಕ್ಷ ಯೋಚಿಸಬೇಕು. ಇತರ ಎಲ್ಲಾ ಪ್ರಾದೇಶಿಕ, ರಾಷ್ಟ್ರೀಯ ಪಕ್ಷಗಳೂ ಯೋಚಿಸಬೇಕು.

ಕಾಂಗ್ರೆಸ್ ಮಾತ್ರವೇ ಬಿಜೆಪಿಯನ್ನು ಹೊಡೆದೋಡಿಸಲು, ಕೋಮುವಾದವನ್ನು ತೊಡೆಯಲು ಪರ್ಯಾಯ ಎನ್ನುವವರೂ ಯೋಚಿಸಬೇಕು.

ಇದನ್ನು ಕೇರಳದ ಜನತೆ ಮುಖ್ಯವಾಗಿ ಅಲ್ಲಿ ಶೇ.43 ರಷ್ಟಿರುವ ಅಲ್ಪಸಂಖ್ಯಾತ ಜನತೆ ಇದನ್ನು ಆಳವಾಗಿ ಯೋಚಿಸಿದ್ದಾರೆ. ದೇಶದಲ್ಲಿ ಎಲ್ಲರಿಗಿಂತ ಅತ್ಯಂತ ದೃಢವಾಗಿ ಕೋಮುವಾದವನ್ನು ವಿರೋಧಿಸುವ ಪಕ್ಷ ಸಿಪಿಐ(ಎಂ) ಹಾಗೂ ಇತರ ಎಡಪಕ್ಷಗಳು. ಪರ್ಯಾಯ ಆರ್ಥಿಕ ನೀತಿಯನ್ನು ಹೊಂದಿರುವ ಜಾಗತೀಕರಣವನ್ನು ದೃಢವಾಗಿ ವಿರೋಧಿಸುವ ಪಕ್ಷವೂ ಆದ ಸಿಪಿಐ(ಎಂ) ಮಾತ್ರ ಬಿಜೆಪಿಗೆ ನಿಜವಾದ ಪರ್ಯಾಯ ಕಾಂಗ್ರೆಸ್ ಅಲ್ಲ ಎಂಬುದನ್ನು ಅವರು ಕಂಡುಕೊಂಡಿದ್ದಾರೆ. ಬೆಂಬಲಿಸಿದ್ದಾರೆ. ಇದು ಕೂಡ ಕೃಷ್ಣರ ಕಣ್ಣು ತೆರೆಯುವುದಕ್ಕೆ ಸಹಾಯಕವಾಗಲಿ.

ಕರ್ನಾಟಕ - ವಿಧಾನಸಭೆಯಲ್ಲಿ ವಿವಿಧ ಪಕ್ಷಗಳು ಪಡೆದ ಸ್ಥಾನ ಮತ್ತು ಶೇಕಡಾವಾರು ಮತ

	ಜನತಾಪಕ್ಷ		ಜನತಾದಳ		ಕಾಂಗ್ರೆಸ್		ಬಿಜೆಪಿ		ಸಿಪಿಐ(ಎಂ)		ಸಿಪಿಐ	
	ಸ್ಥಾನ	ಶೇ.ಮತ	ಸ್ಥಾನ	ಶೇ.ಮತ	ಸ್ಥಾನ	ಶೇ.ಮತ	ಸ್ಥಾನ	ಶೇ.ಮತ	ಸ್ಥಾನ	ಶೇ.ಮತ	ಸ್ಥಾನ	ಶೇ.ಮತ
1985	139	43.84	-	-	66	41.10	2	3.84	2	0.86	4	1.08
1989	2	11.40	24	27.30	176	43.77	4	4.13	-	0.54	-	0.59
1994	-	-	115	33.56	36	27.40	40	17.00	1	0.49	-	0.23
					(KCP)10	7.28						
1999	19	(JDU) 13.52	9	10.42	132	41.06	44	20.69	-	0.39	-	*
2004	5	(JDU) 2.06	58	20.77	65	35.27	79	28.32	1	*		*

* ವಿವರ ದೊರೆತಿಲ್ಲ

ಮೇ 23, 2004 ಐಕ್ಯರಂಗ

ವೀರಮಣಿಗಳಾಗಿ ಮಿಂಚಿದ ಬುಡಕಟ್ಟು ಮಕ್ಕಳು

ಕಾಡಿನ ಉತ್ಪನ್ನಗಳನ್ನು ಆಯ್ದು ಜೀವನ ಸಾಗಿಸುವ ಹೊರಜಗತ್ತಿನ ಭಾಷೆ-ನಾಗರಿಕತೆಗೆ ಅಪರಿಚಿತವಾಗಿ ಕೀಳರಿಮೆಯಿಂದ ತೊಳಲಾಡುವ ಈ ಸಮುದಾಯದ ಮಕ್ಕಳು ಯಕ್ಷಗಾನ ಪ್ರಸಂಗದಲ್ಲಿ ಈ ಎಲ್ಲವೂ ಮೀರಿ ಎಲ್ಲರಲ್ಲೂ ಮಿಂಚಿನ ಸಂಚಾಲ ಮೂಡಿಸಿ ಶಹಬ್ಬಾಸ್ ಎನಿಸಿಕೊಂಡರು. ಆ ಪ್ರಸಂಗವಿಲ್ಲಿದೆ ನೋಡಿ ಕುಂಬ್ರಿ ಮರಾಠಿಗ ಸಮುದಾಯದ ಮಕ್ಕಳ ಯಕ್ಷಗಾನ ಕಲಾಪ್ರತಿಭೆಯ ಬಗ್ಗೆ ಒಂದು ಪರಿಚಯ

ಹೊನ್ನಾವರ ತಾಲೂಕಿನ ತೊಳಸಾಣಿಯಲ್ಲಿ ವಾಸಿಸುತ್ತಿರುವ ಕುಂಬ್ರಿ ಮರಾಠಿಗ ಸಮುದಾಯ ಶೈಕ್ಷಣಿಕವಾಗಿ, ಆರ್ಥಿಕವಾಗಿ ತೀರಾ ಹಿಂದುಳಿದ ಸ್ಥಿತಿಯಲ್ಲಿದ್ದಾರೆ. ವಿಶಿಷ್ಟವಾದ ರೀತಿಯಲ್ಲಿ ಮರಾಠಿಮಿಶ್ರಿತ ಕೊಂಕಣಿ ಮಾತನಾಡುವ ಇವರಿಗೆ ಇತ್ತೀಚಿನ ವರ್ಷಗಳವರೆಗೂ ಕನ್ನಡ ಅಪರಿಚಿತವಾಗಿಯೇ ಇತ್ತು. ಇತ್ತೀಚಿನ ತಲೆಮಾರು ಕನ್ನಡವನ್ನು ವ್ಯವಹಾರಕ್ಕೆ ತಕ್ಕಷ್ಟು ಮಾತನಾಡುವ, ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಹೊಂದಿದ್ದರೂ ಹಿಂದಿನವರು ಇನ್ನೂ ಕನ್ನಡವನ್ನು ಸ್ಪಷ್ಟವಾಗಿ ಮಾತನಾಡಲಾರರು.



ಭಾಷೆಯ ಕಾರಣದಿಂದ ವಿರ್ವಹಟ್ಟ ಸಂವಹನದ ತೊಡಕಿನಿಂದಾಗಿ ಅವರಲ್ಲಿ ನೆಲೆಗೊಂಡ ಕೀಳರಿಮೆ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ರಂಗವನ್ನು ಆವರಿಸಿಕೊಂಡಿತ್ತು. ಅವರದೇ ಆದ ಮಾತೃಭಾಷೆಯಲ್ಲಿ ಶಿಕ್ಷಣ ನೀಡುವ ವ್ಯವಸ್ಥೆ ಇಲ್ಲದ್ದರಿಂದ ಕನ್ನಡ ಶಾಲೆ ಅವರಿಗೆ ಒಗ್ಗಲಿಲ್ಲವಾದ್ದರಿಂದ ಬಹುತೇಕ ಜನರು 4ನೇ ತರಗತಿಯವರೆಗೆ ಮಾತ್ರ ಒತ್ತಾಯದಿಂದ ಓದಿದವರು. ಅಲ್ಲಿಂದ ಮುಂದೆ ಗದ್ದೆ ಕೆಲಸ, [illegible] ಉದ್ದಿಮೆಗಳಡಿ ನರಳಲ್ಲೇ [illegible] ಕೂಲಿ ಎಂಬಂತೆ [illegible] ಇತ್ಯಾದಿಗಳಿಗೆ ತಮ್ಮನ್ನು ಒಗ್ಗಿಸಿಕೊಂಡರು.

ವ್ಯಚಳಿ ಬಿಟ್ಟು ನಾಗರಿಕ ಜಗತ್ತಿಗೆ ತೆರೆದುಕೊಳ್ಳಲು ಹಿಂಜರಿಯುತ್ತಿರುವ ಈ ಮರಾಠಿಗಳ ವಿಶಿಷ್ಟ ಪ್ರತಿಭೆ, ಹೊರಜಗತ್ತಿಗೆ ಅನಾವರಣಗೊಂಡಿದ್ದು ಇತ್ತೀಚೆಗೆ ನಡೆದ ಬಾಲಕರ 'ವೀರಮಣಿ ಕಾಳಗ' ಯಕ್ಷಗಾನದ ಮೂಲಕ ಈ ಕುಂಬ್ರಿ ಮರಾಠಿಗರ ಬಾಲಕರು ಆಡಿತೋರಿಸಿದ ಈ ಯಕ್ಷಗಾನ ಪ್ರಸಂಗ ನೋಡಿದವರೆಲ್ಲ ಮೂಗಿನ ಮೇಲೆ ಬೆರಳಿಟ್ಟಿದ್ದು ನಿಜ. ಸರಿಯಾಗಿ ಮಾತನಾಡಲು ಬರದ, ನಾಲ್ಕು ಜನರ ಎದುರಿಗೆ ತಲೆ ಎತ್ತಿನಿಲ್ಲದ, ಪ್ರಾಥಮಿಕ ಶಾಲೆಯ ಆಚೆ ಕಲಿವುದಕ್ಕೆ ಸಾಧ್ಯ ಆಗದ ಇವರ ಆಟವೆಂದರೆ ಮಂಗನಾಟವೇ ಸರಿ ಎಂದು ನೋಡಲು ಬಂದವರಲ್ಲಿ ಬಹುತೇಕರು ಈ ಮಕ್ಕಳಿಗೆ ಶಹಬ್ಬಾಸ್‌ಗಿರಿ ಕೊಟ್ಟರು. ಇಷ್ಟು ದಿನ ಚಿಪ್ಪಿನಲ್ಲಿ ಅವಿತುಕೊಂಡಿದ್ದ ವಿಶಿಷ್ಟ ಪ್ರತಿಭೆ ಹೊರಬಂದಾಗ ಎಲ್ಲರನ್ನೂ ಬೆರಗುಗೊಳಿಸಿತು.

'ವೀರಮಣಿ ಕಾಳಗದಲ್ಲಿ ಭಾಗವಹಿಸಿದ ಎಲ್ಲಾ ಮಕ್ಕಳು ಗಟ್ಟಿಯಾದ ಹೆಜ್ಜೆ-ಲಯ, ಯಕ್ಷಗಾನಕ್ಕೆ ಸಹಜವಾದ ಬಳಕು, ಬೆಡಗು- ಬಿನ್ನಾಣಗಳ ಮೂಲಕ ಯಕ್ಷಗಾನವನ್ನು ಪರಂಪರಾಗತವಾಗಿ ರೂಢಿಸಿಕೊಂಡು ಬಂದ ಕುಟುಂಬಕ್ಕೆ ಏನೂ ಕಡಿಮೆ ಇಲ್ಲದಂತೆ ಅಭಿನಯಿಸಿದರು. ನಮ್ಮ ಬಗ್ಗೆ ಮುತುವರ್ಜಿವಹಿಸಿದರೆ, ಸೂಕ್ತ ತರಬೇತಿ ಕೊಟ್ಟರೆ ನಾವು ಯಾರಿಗೂ ಕಡಿಮೆ ಇಲ್ಲ ಎನ್ನುವ ರೀತಿಯಲ್ಲಿ ಅವರ ಶಿಸ್ತುಬದ್ಧ ಪ್ರದರ್ಶನ ಇತ್ತು.

ಉದಯೋನ್ಮುಖ ಹಾಡು[illegible] ತೊಳಸಾಣಿಯವರೇ ಆದ ವಿಷ್ಣು ಮರಾ[illegible] ಯಕ್ಷಗಾನ ಭಾಗವತರಾಗಿ ಕಾ[illegible] ನಿರ್ವಹಿಸಿದರು.

ಈ ಹುಡುಗರು ಹಾಪೂ ಯಕ್ಷಗಾನದ[illegible]



10-15 ವರ್ಷದೊಳಗಿನ ಮಕ್ಕಳು ರಾಮಾಯಣದ ಒಂದು ಉಪಕತೆಯಾಗಿರುವ ವೀರಮಣಿ ಕಾಳಗವನ್ನು ಆಡಿ ತೋರಿಸಿದರು. ಕೆಲವು ಹುಡುಗರು ಮಾತ್ರವಲ್ಲದೆ 40 ಹುಡುಗಿಯರು ಎಲ್ಲರ ಗಮನ ಸೆಳೆದರು. ಶುಭಾಂಗನಾಗಿ ಯಮುನಾ ಮರಾಠಿ, ರುಕ್ಮಾಂಗದನಾಗಿ ಸವಿತಾ ಮರಾಠಿ, ಪುಷ್ಕಳನಾಗಿ ರತ್ನಾ ಮರಾಠಿ ರೂಪದಲ್ಲಿ ಕಡೆದಿಟ್ಟ ಗೊಂಬೆಯಂತೆ ಕಾಣುತ್ತಿದ್ದರೆ ಅವನ್ನು ಮೀರಿಸುವಂತೆ ಕುಣಿತದ ಚುರುಕು ಕೂಡ ಅನುಭವೀ ಹೆಜ್ಜೆಯಂತೆ ಇತ್ತು. ಶತ್ರುಘ್ನನಾಗಿ ದಿನೇಶ ಮರಾಠಿ, ವೀರಮಣಿಯಾಗಿ ಯಂಕು ಮರಾಠಿ, ಉತ್ತಮ ಮರಾಠಿ ಹನುಮಂತನಾಗಿ ಆನಂದು ಮರಾಠಿ ಭವಿಷ್ಯದಲ್ಲಿ ಉತ್ತಮ ಕಲಾವಿದರಾಗುವ ಎಲ್ಲಾ ಲಕ್ಷಣಗಳನ್ನು ತೋರ್ಪಡಿಸಿದರು. ಬಾಲಗೋಪಾಲನಾಗಿ ನಾರಾಯಣ ಮರಾಠಿ, ಶಿವಾನಂದ ಮರಾಠಿ ರೂಕ್ಷಕನಾಗಿ ಪರಮೇಶ್ವರ, ಧಮನನಾಗಿ ಕಾವೇರಿ ಇವರು ಔಚಿತ್ಯಪೂರ್ಣನಾಗಿ ಅಭಿನಯಿಸಿದರು. ಇವರ ಕುಣಿತ, ಅಭಿನಯದಿಂದಾಗಿ ಈ ಹುಡುಗರಿಗೆ ಇದ್ದ ಭಾಷೆಯ ಸಮಸ್ಯೆಯ ಕಡೆಗೆ ಪ್ರೇಕ್ಷಕರು ಗಮನ ಹರಿಸುವ ಗೋಜಿಗೇ ಹೋಗಲಿಲ್ಲ.

ಕಲೆಯನ್ನ ಪ್ರದರ್ಶನ ಮಾಡಬಲ್ಲೆವು ಎಂ[illegible] ವಿಶ್ವಾಸ ತುಂಬಿ, ಅವರಲ್ಲಿ ಹುದುಗಿರು[illegible] ಪ್ರತಿಭೆಯನ್ನು ಹೊರಹಾಕಿದವರು ಯಕ್ಷಗಾ[illegible] ಕಲಾವಿದ ಗಣೇಶ ಭಂಡಾರಿ. ಈಗಾಗಲೇ ಅ[illegible] ವರ್ಷಗಳ ಕಾಲ ವೃತ್ತಿಮೇಳದಲ್ಲಿ ಕೃಷಿ ಮಾ[illegible] ಈಗ ಕೆರೆಮನೆ ಇಡಗುಂಜಿ ಮೇಳದ[illegible] ಕಲಾವಿದರಾಗಿರುವ ಯುವ ಕಲಾವಿದ ಗಣೇ[illegible] ಭಂಡಾರಿಯವರು 2-3 ತಿಂಗಳುಗಳಿಂದ [illegible] ಹುಡುಗರಿಗೆ ತರಬೇತಿ ಕೊಟ್ಟು ಸಾಂಸ್ಕೃತಿಕವಾ[illegible] ಒಂದು ಮಹತ್ವದ ಜವಾಬ್ದಾರಿಯನ್ನು ನಿರ್ವಹಿ[illegible]ದ್ದಾರೆ. ಕಲಾ ಪ್ರಪಂಚಕ್ಕೆ ಈ ಸಮುದಾಯವನ್[illegible] ಪರಿಚಯಿಸುವ ಇವರ ಕೆಲಸ ಅಭಿನಂದನಾರ್ಹ[illegible]

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇನ್ನಿತ[illegible] ಸಂಘ ಸಂಸ್ಥೆಗಳು ಈ ತಂಡದಿಂದ ಯಕ್ಷಗಾ[illegible] ಆಡಿಸಿ ಪ್ರೋತ್ಸಾಹಿಸಬೇಕಾಗಿದೆ. ಈ ತಂಡದಿಂ[illegible] ಯಕ್ಷಗಾನ ಮಾಡಿಸುವುದೆಂದರೆ ಅದೊಂದ[illegible] ಕೇವಲ ಪ್ರದರ್ಶನ ಮಾತ್ರ ಆಗಿರದು. ಅತ್ಯಂ[illegible] ಹಿಂದುಳಿದ ಸಮುದಾಯದಲ್ಲಿರುವ[illegible] ಕೀಳರಿಮೆಯನ್ನು ಹೋಗಲಾಡಿಸಿ ಸಾಂಸ್ಕೃತಿಕವಾಗಿ ಮೇಲೆತ್ತುವ ಕಾರ್ಯಕೂಡ ಹೌದು.

■ ವಿಠ್ಠಲ ಭಂಡಾರಿ

ಎಡಪಕ್ಷಗಳ ಬಾಹ್ಯ ಬೆಂಬಲ

14ನೇ ಲೋಕಸಭಾ ಚುನಾವಣೆಯ ಜನಾದೇಶವನ್ನು ಎಡಪಕ್ಷಗಳು ಸ್ವಾಗತಿಸಿವೆ. ಬಿಜೆಪಿ ನೇತೃತ್ವದ ಸರ್ಕಾರದ 6 ವರ್ಷಗಳ ದುರಾಡಳಿತವನ್ನು ಜನತೆ ನಿರ್ಣಾಯಕವಾಗಿ ತಿರಸ್ಕರಿಸಿದೆ. ಕೋಮುವಾದ, ವಾಜಪೇಯಿ ಸರ್ಕಾರದ ಜನವಿರೋಧಿ ಆರ್ಥಿಕ ನೀತಿಗಳು ಮತ್ತು ಅದರ ಸಾಮ್ರಾಜ್ಯಶಾಹಿಪರ ವಾಲುವಿಕೆಯ ವಿರುದ್ಧ ಜನತೆ ತೀರ್ಪು ನೀಡಿದೆ. ಬಿಜೆಪಿ ವಿರುದ್ಧ ಮಾತ್ರವಲ್ಲ, ಅದರ ಸಂದರ್ಭಸಾಧಕ ಮಿತ್ರಪಕ್ಷಗಳ ವಿರುದ್ಧವೂ ಜನತೆಯ ಆಕ್ರೋಶ ವ್ಯಕ್ತವಾಗಿದೆ.

ಎಡಪಕ್ಷಗಳು 60 ಸ್ಥಾನಗಳನ್ನು ಗೆಲ್ಲುವ ಮೂಲಕ ದಾಖಲೆಯನ್ನೇ ನಿರ್ಮಿಸಿವೆ. ಜಾತ್ಯತೀತತೆ, ದುಡಿಯುವ ಜನಗಳ ಹಿತರಕ್ಷಣೆ ಮತ್ತು ಸಾಮ್ರಾಜ್ಯವಾದದ ಹೆಚ್ಚುತ್ತಿರುವ ಪ್ರಭಾವಕ್ಕೆ ವಿರೋಧದಂತಹ ವಿಷಯಗಳಲ್ಲಿ ಎಡಪಕ್ಷಗಳ ದೃಢ ನಿಲುಮೆಗೆ ಜನತೆಯಿಂದ ದೊರೆತ ಮನ್ನಣೆ ಇದಾಗಿದೆ.



ಕೇಂದ್ರದಲ್ಲಿ ಒಂದು ಜಾತ್ಯತೀತ ಸರ್ಕಾರ ರಚನೆಗೆ ಜನತೆಯ ಆದೇಶ ಇದಾಗಿದೆ. ಎಡಪಕ್ಷಗಳ ಚುನಾವಣಾ ಪ್ರಚಾರದಲ್ಲಿ ಇದು ಒಂದು ಪ್ರಮುಖ ವಿಷಯವಾಗಿತ್ತು. ಆದ್ದರಿಂದ ಶ್ರೀಮತಿ ಸೋನಿಯಾ ಗಾಂಧಿ ನೇತೃತ್ವದಲ್ಲಿ ಕಾಂಗ್ರೆಸ್ ನೇತೃತ್ವದ ಸಮಿಶ್ರ ಸರ್ಕಾರಕ್ಕೆ ಬೆಂಬಲ ನೀಡಲು ಎಡಪಕ್ಷಗಳು ನಿರ್ಧರಿಸಿವೆ. ಕಾಂಗ್ರೆಸ್ ನೇತೃತ್ವದ ಸಮಿಶ್ರ ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ನೀಡುತ್ತಿರುವಾಗಲೇ ಸರ್ಕಾರವನ್ನು ಅಬದ್ಧಗೊಳಿಸಲು ಬಿಜೆಪಿ ಮತ್ತು ಇತರ ಕೋಮುವಾದಿ ಶಕ್ತಿಗಳು ನಡೆಸುವ ಕುತಂತ್ರಗಳನ್ನು ವಿಫಲ ಗೊಳಿಸಲಲು ಎಡಪಕ್ಷಗಳು ನಿರ್ಧರಿಸಿವೆ.

ಸರ್ಕಾರದ ಧೋರಣೆಗಳನ್ನು ಒಂದು ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಮೂಲಕ ನಿರ್ದಿಷ್ಟಪಡಿಸಲಾಗುವುದು.

ವಿನಾಶ ಪುರುಷ!

ಪ್ರಕಾಶಿಸುತ್ತಿದೆ ಭಾರತ
ಉಳ್ಳವರ ಮಹಲುಗಳ ಒಳಗೆ
ಉದ್ಯಮಿಗಳ ಭಾರೀ ಜೇಬುಗಳಲಿ
ರಾಜಕಾರಣಿಗಳ ಸ್ವಿಸ್‌ಬ್ಯಾಂಕ್ ಖಾತೆಗಳಲಿ

ಉರಿಯುತ್ತಿದೆ ಭಾರತ
ಆತ್ಮಹತ್ಯೆಗೈದ ರೈತ ಗುಡಿಸಲಲಿ
ಶವಪೆಟ್ಟಿಗೆಯಲ್ಲಿ ನರಳಿದ
ಸೈನಿಕರ(ಆತ್ಮಗಳಲಿ) ಆಕ್ರಂದನಗಳಲಿ
ನಿರುದ್ಯೋಗಿ ಯುವಕನ ಮನದಾಳದಲಿ

ವಿಕಾಸ ಪುರುಷನ ಲಕ ಲಕ ಹೊಳೆದ ಲಕ್ನೋ!
ಸೀರೆಗಾಗಿ ನೀರೆಯರ ಮಂದೆ ಮಂದೆ
ಇದೇ ಪ್ರಕಾಶಿಸುವ ಭಾರತದ ಜನ ಸ್ಥಿತಿಗತಿ
ತುಂಡುಬಟ್ಟೆಗಾಗಿ ಅದೇನು ನೂಕುನುಗ್ಗಲು!
ಉರಿಯಿತು ಅಮಾಯಕ ಸ್ತ್ರೀಯರ ಒಡಲು
ರಾಶಿಬಿದ್ದ ಶವ, ಸೀರೆ ಚಪ್ಪಲಿಗಳಲ್ಲಿ
ಉರಿಯುತ್ತಿದೆ ಭಾರತದ ಜನ ಮನ
ವಿಕಾಸ ಅಲ್ಲಲ್ಲ ಅವನು ವಿನಾಶ ಪುರುಷ

ಬಿ. ಶ್ರೀಧರಭಟ್ ಪೈವಳಿಕೆ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
[illegible]
Printed & Published by Communist Party of India(Marxist), Karnataka State Committee. Editor : S.Y.GURUSHANTH